Swabhimani Sahakari
Pages : 28 /12₹


# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 19
Issue - 03
March- 2022

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸರ್ವ ವ್ಯಾಪಿ, ಸರ್ವ ಸ್ಪರ್ಶಿ ಅಭಿವೃದ್ಧಿ ದೃಷ್ಟಿಕೋನದೊಂದಿಗೆ ನಾವು ಕಾರ್ಯನಿರ್ವಹಿಸುತ್ತಿದ್ದೇವೆ. ರಾಜ್ಯದ ಆರ್ಥಿಕತೆಯಲ್ಲಿ ಎಲ್ಲಾ ಸ್ತರದ ಜನರ ಪಾಲು ಹಾಗೂ ಪಾಲುದಾರಿಕೆ ಹೆಚ್ಚಾಗಬೇಕೆಂಬುದು ನಮ್ಮ ಆಶಯ.




## ಯಾವುದೇ ತೆರಿಗೆ ಹೆಚ್ಚಳ ಇಲ್ಲದ 2022-23ನೇ ಸಾಲಿನ ಬಜೆಟ್ ಗಾತ್ರ ರೂ. 2,65,720ಕೋಟಿ

★ ಶಿಕ್ಷಣ, ಉದ್ಯೋಗ, ಸಬಲೀಕರಣಕ್ಕೆ ಆದ್ಯತೆ
★ ಯಶಸ್ವಿನಿ ಮರು ಜಾರಿ ರೂ.300 ಕೋಟಿ ಮೀಸಲು
★ ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ ಸ್ಥಾಪನೆ
★ ಮಹಿಳಾ ಸ್ಟಾರ್ಟ್‌ಅಪ್‌ಗೆ ರೂ.10 ಲಕ್ಷ ನೇರ ಸಾಲ
★ ಕೃಷಿ ಕ್ಷೇತ್ರಕ್ಕೆ ರೂ. 33,700 ಕೋಟಿ ಘೋಷಣೆ
★ ಸ್ವಸಹಾಯ ಸಂಘಗಳ ಮೂಲಕ ಮಹಿಳೆಯರಿಗೆ ಉದ್ಯೋಗ



ಮಾರ್ಚ್ 8 : ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ
ಘೋಷವಾಕ್ಯ: ಪಕ್ಷಪಾತವನ್ನು ಮುರಿಯಿರಿ




ಸೌಹಾರ್ದ ಸಹಕಾರಿಗಳ ಸಂಖ್ಯೆ : 5492

ಇ-ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1490



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

ದಿನಾಂಕ 15,16 ಫೆಬ್ರವರಿ 2022 ರಂದು ಬೆಂಗಳೂರಿನ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯ ಸಭಾಂಗಣದಲ್ಲಿ ರಾಜ್ಯದ 14 ಒಕ್ಕೂಟಗಳ ಪ್ರತಿನಿಧಿಗಳು ಹಾಗೂ ಒಕ್ಕೂಟಗಳು ಇಲ್ಲದ ಜಿಲ್ಲೆಗಳ ಆಯ್ದ ಪ್ರತಿನಿಧಿಗಳನ್ನೊಳಗೊಂಡ ಸುಸ್ಥಿರ ಅಭಿವೃದ್ಧಿ ಕಾರ್ಯಾಗಾರವನ್ನು ಏರ್ಪಡಿಸಿರುವುದು ತಮಗೆ ತಿಳಿದಿದೆ ಎಂದು ಭಾವಿಸಿದ್ದೇನೆ. ಈ ಕಾರ್ಯಾಗಾರ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಒತ್ತನ್ನು ನೀಡಲು ಸಾಧ್ಯವಾಗುತ್ತದೆ ಎಂದು ನಾನು ಆಶಿಸಿದ್ದೇನೆ.

# ಸೌಹಾರ್ದ ಸಹಕಾರಿ ಕ್ಷೇತ್ರ ಅಭಿವೃದ್ಧಿ ಪಥದತ್ತ ಸಾಗುವ ಭರವಸೆ ಹೆಚ್ಚಿಸಿದ ಜಿಲ್ಲಾ ಒಕ್ಕೂಟಗಳ ಸುಸ್ಥಿರ ಅಭಿವೃದ್ಧಿ ಚಿಂತನಾ ಕಾರ್ಯಾಗಾರ

**ಆತ್ಮೀಯ ಸಹಕಾರಿ ಬಂಧುಗಳೇ,**

ಮಹಾಶಿವರಾತ್ರಿಯ ಹಾಗೂ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಹಾರ್ದಿಕ ಶುಭಾಶಯಗಳು. ಮನೋಭಿಮಾನಿ ಸಕಲ ಸಂಕಟಗಳನ್ನು ಪರಿಹರಿಸಿ ಸಕಲ ಇಷ್ಟಾರ್ಥಗಳನ್ನು ಸುಖ ಸಂಪತ್ತು ವಿಶೇಷವಾಗಿ ಶಾಂತಿ ನೆಮ್ಮದಿಯನ್ನು ನೀಡುವ ಭಗವಂತ ಶ್ರೀ ಶಿವಪರಮಾತ್ಮ ಎಲ್ಲರಿಗೂ ಒಳ್ಳೆಯದನ್ನು ಮಾಡಲಿ. ಎಲ್ಲರೂ ನಿಮ್ಮ ಕುಟುಂಬ ಹಾಗೂ ಪರಿವಾರ ಸಮೇತರಾಗಿ ಆರೋಗ್ಯವಾಗಿ ಸಂತೋಷವಾಗಿರಿ ಎಂದು ಹಾರೈಸುತ್ತೇನೆ. ವಿಶೇಷವಾಗಿ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಮಹಿಳೆಯರಿಗೆ ಆರ್ಥಿಕ ಸಾಮಾಜಿಕ ಹಾಗೂ ಕೌಟುಂಬಿಕ ಸ್ವಾವಲಂಬನೆಗೆ ಪೂರಕವಾಗುವ ಎಲ್ಲ ಕ್ರಮಗಳನ್ನು ಸಮಾಜದ ಎಲ್ಲ ವರ್ಗದವರು ಹಾಗೂ ಸಹಕಾರಿ ಸಂಘಗಳ ಮೂಲಕವೂ ಪರಿಣಾಮಕಾ–ರಿಯಾಗಿ ನಿರ್ವಹಿಸುವುದು ಅಗತ್ಯ. ಈ ನಿಟ್ಟಿನಲ್ಲಿ ನಾವುಗಳು ಕಾರ್ಯನಿರ್ವಹಿಸೋಣ.

ದಿನಾಂಕ 15,16 ಫೆಬ್ರವರಿ 2022 ರಂದು ಬೆಂಗಳೂರಿನ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯ ಸಭಾಂಗಣದಲ್ಲಿ ರಾಜ್ಯದ 14 ಒಕ್ಕೂಟಗಳ ಪ್ರತಿನಿಧಿಗಳು ಹಾಗೂ ಒಕ್ಕೂಟಗಳು ಇಲ್ಲದ ಜಿಲ್ಲೆಗಳ ಆಯ್ದ ಪ್ರತಿನಿಧಿಗಳನ್ನೊಳಗೊಂಡ ಸುಸ್ಥಿರ ಅಭಿವೃದ್ಧಿ ಕಾರ್ಯಾಗಾರವನ್ನು ಏರ್ಪಡಿಸಿರುವುದು ತಮಗೆ ತಿಳಿದಿದೆ ಎಂದು ಭಾವಿಸಿದ್ದೇನೆ. ಈ ಕಾರ್ಯಾಗಾರ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಒತ್ತನ್ನು ನೀಡಲು ಸಾಧ್ಯವಾಗುತ್ತದೆ ಎಂದು ನಾನು ಆಶಿಸಿದ್ದೇನೆ. ಏಕೆಂದರೆ ಈ ಕಾರ್ಯಕ್ರಮದಲ್ಲಿ ರಾಜ್ಯದ ಒಟ್ಟಾರೆ 112 ಪ್ರತಿನಿಧಿಗಳು ಭಾಗವಹಿಸಿ ಕಾರ್ಯಕ್ರಮ ಪ್ರಯೋಜನ ಪಡೆದಿರುವುದು ಮತ್ತು ಕಾರ್ಯಕ್ರಮದಲ್ಲಿ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿ ವಿವಿಧ ವಿಷಯಗಳ ಪ್ರಯೋಜನಗಳ ಬಗ್ಗೆ ಆಸಕ್ತಿ ವಹಿಸಿ ಮಾತನಾಡಿರುವುದು ಅವರು ಹೆಚ್ಚು ಕ್ರೀಯಾಶೀಲರಾಗಿದ್ದಾರೆಂದು ನಂಬಿಕೆ ಹುಟ್ಟಿಸಿದೆ.

ಕಾರ್ಯಕ್ರಮದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಒಕ್ಕೂಟಗಳು ಮತ್ತು ಸೌಹಾರ್ದ ಸಹಕಾರಿಗಳು ಹಮ್ಮಿಕೊಳ್ಳಬಹುದಾದ ಅಳವಡಿಸಿಕೊಳ್ಳಬಹುದಾದ ಸುಮಾರು 21 ಕ್ಕೂ ವಿಷಯಗಳ ಪ್ರಸ್ತಾವನೆಯಾಗಿದೆ. ವಿಷಯಗಳ ಬಗ್ಗೆ ಸುದೀರ್ಘವಾದ ಚರ್ಚೆ ನಡೆದಿದೆ. ಪ್ರತಿನಿಧಿಗಳು ಆಸಕ್ತಿ ವಹಿಸಿ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಇವೆಲ್ಲವುಗಳ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ ಈ ಪ್ರಯತ್ನ ಸಾರ್ಥಕವಾಯಿತು ಎಂದು ನಾನು ಭಾವಿಸುತ್ತೇನೆ.

ಸೌಹಾರ್ದ ಸಹಕಾರಿ ಕಾಯ್ದೆ, ಸಂಯುಕ್ತ ಸಹಕಾರಿಯ ವ್ಯವಸ್ಥೆ, ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿಯ ಬೆಳವಣಿಗೆ ಇಡೀ ದೇಶಕ್ಕೆ ಮಾದರಿಯಾಗಿರುವುದರಿಂದ ಇದನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಆರೋಗ್ಯವಾಗಿ ಮತ್ತು ಅಧ್ಯಯನ ಯೋಗ್ಯವಾಗಿ ಬೆಳೆಸುವುದು ನಮ್ಮ ನಿಮ್ಮೆಲ್ಲರ ಪ್ರಥಮ ಕರ್ತವ್ಯ ಹಾಗೂ ಮುನ್ನಡೆಸುವ ಜವಾಬ್ದಾರಿಯಾಗಿದೆ. ಈ ಜವಾಬ್ದಾರಿಯನ್ನು ಅರಿತು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಒಕ್ಕೂಟಗಳ ಪ್ರಾರಂಭಿಸುವುದಕ್ಕೆ ಒತ್ತುಕೊಡುತ್ತ ಬಂದಿದೆ. ಪರಿಣಾಮವಾಗಿ 14 ಒಕ್ಕೂಟಗಳು ಪ್ರಾರಂಭವಾಗಿವೆ. ಇನ್ನು ಕೆಲವು ಜಿಲ್ಲೆಗಳಲ್ಲಿ ಒಕ್ಕೂಟಗಳ ರಚನೆ ಪ್ರಾರಂಭಿಸುವ ಕಾರ್ಯ ಪ್ರಗತಿಯಲ್ಲಿದೆ. ಈಗ ಎರಡನೇಯ ಹಂತದಲ್ಲಿ ಒಕ್ಕೂಟಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಒಕ್ಕೂಟಗಳು ತಮ್ಮ ಹಣಕಾಸಿನ ವ್ಯವಸ್ಥೆಯನ್ನು ಭದ್ರಪಡಿಸಿಕೊಳ್ಳುವುದಕ್ಕೆ ಪೂರಕವಾಗಿ ಏನೆಲ್ಲ ಚಟುವಟಿಕೆಗಳನ್ನು ಮಾಡಬಹುದು ಎಂಬುದರ ಬಗ್ಗೆ ತಿಳುವಳಿಕೆ ಕಾರ್ಯಕ್ರಮ ಇದಾಗಿತ್ತು. ಎಲ್ಲರೂ ಉತ್ತಮವಾಗಿ ಭಾಗವಹಿಸಿ ಪ್ರಯೋಜನ ಪಡೆದಿದ್ದಿರಾಗಿ ಭಾವಿಸಿದ್ದೇನೆ. ಅವುಗಳನ್ನು ಕಾರ್ಯರೂಪಕ್ಕೆ ತರಲು ಕ್ರೀಯಾಯೋಜನೆಗಳನ್ನು ಸಿದ್ಧಪಡಿಸಿ. ನಿಮ್ಮ ಜೊತೆಗೆ ಸಹಕರಿಸಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಯಾವಾಗಲೂ ಸಿದ್ಧವಿದೆ.

**ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ**

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

**ಒಳಪುಟಗಳಲ್ಲಿ. . .**

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 05–15
ಸರ್ಕಾರದ ಸುತ್ತೋಲೆ ........................ 16
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ........................................ 17
**ಲೇಖನಗಳು :**
"ಸೌಹಾರ್ದ ಸಹಕಾರಿ ಕಾಯ್ದೆ ಆಶಯ ಮತ್ತು ಚಟುವಟಿಕೆಗಳ ಬಗ್ಗೆ ವಿಸ್ತೃತ ಅರಿವು ಹಾಗೂ ಪ್ರಚಾರ ಅಗತ್ಯ" ............................ 18–21
ಸಮಾನತೆ ........................................ 24–25

# ಸಂಪಾದಕೀಯ

## ಆರ್ಥಿಕ ವರ್ಷ ಮುಕ್ತಾಯ : ಲೆಕ್ಕಪತ್ರಗಳ ನಿರ್ವಹಣೆ : ಅಗತ್ಯ ಕ್ರಮಗಳ ಬಗ್ಗೆ ಗಮನ :

ಪ್ರತಿ ವರ್ಷ 31 ಮಾರ್ಚ ಸಹಕಾರಿ ಸಂಸ್ಥೆಗಳಿಗೆ ಅತ್ಯಂತ ಮಹತ್ವ ದಿನ. ಸಹಕಾರಿಯ ಎಲ್ಲ ಬರತಕ್ಕ ಬಾಬ್ತುಗಳನ್ನು ಹಾಗೂ ಸಾಲಗಳ ವಸೂಲಾತಿಗಳನ್ನು ಸಂಪೂರ್ಣವಾಗಿ ಜಮಾ ಮಾಡಿಕೊಳ್ಳುವುದು. ವರ್ಷವಿಡೀ ಸಾಲ ವಸೂಲಾತಿಗೆ ತೆಗೆದುಕೊಂಡಿರುವ ಕ್ರಮಗಳ ಸಂಪೂರ್ಣ ಫಲ 31 ಮಾರ್ಚಗೆ ನಗದೀಕರಣವಾಗುವ ಸಮಯ. ಬಂದಿರುವುದನ್ನು ಮೊತ್ತ ಲೆಕ್ಕತೆಗೆದುಕೊಂಡು ಕೊಡುವುದನ್ನು ಮತ್ತು ಕೊಡಲೇ ಬೇಕಾಗಿರುವುದನ್ನು ಪ್ರಾವಧಾನ ಮಾಡಿಕೊಂಡು ನಮ್ಮ ನಿವ್ವಳ ಲಾಭಾಂಶವನ್ನು ಕಂಡುಕೊಳ್ಳುವ ಹಾಗೂ ನಮ್ಮ ಆರ್ಥಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವ ಹಾಗೂ ಇನ್ನೂ ಹೆಚ್ಚಿನ ಪ್ರಗತಿಗೆ ಮುಂಬರುವ ವರ್ಷದಲ್ಲಿ ಯೋಚನೆ ಯೋಜನೆ ಮಾಡುವ ಸಮಯ ಇದಾಗಿದೆ.

ಈ ಸಂದರ್ಭದಲ್ಲಿ ಸಹಕಾರಿಯ ಲೆಕ್ಕವಿಭಾಗದವರು ಅನೇಕ ವಿಷಯಗಳ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಹೆಚ್ಚು ಮಹತ್ವವನ್ನು ನೀಡುವುದಕ್ಕೆ ಆದ್ಯತೆ ಅಗತ್ಯ.

ಸದಸ್ಯರಿಂದ ಷೇರು ಸಂಗ್ರಹಣೆ, ಹೆಚ್ಚಿನ ಸದಸ್ಯರ ನೊಂದಾವಣಿ, ಠೇವಣಿ ಸಂಗ್ರಹಣೆ, ಸದಸ್ಯರಿಗೆ ನೀಡಿರುವ ಸಾಲಗಳ ಮರುಪಾವತಿಗೆ ಕ್ರಮವಿಡುವುದು, ಹೂಡಿಕೆಗಳ ಮೇಲಿನ ಬಡ್ಡಿ, ಗ್ರಾಹಕ ಹಾಗೂ ಮಾರಾಟ ವ್ಯವಹಾರಗಳಿದ್ದಲ್ಲಿ ಬರಬೇಕಾದ ಬಾಬ್ತುಗಳು ಪಾವತಿಸಬೇಕಾದ ಬಾಬ್ತುಗಳು, ಕಮೀಷನ್ ಪಾವತಿಸುವುದು ಬ್ಯಾಂಕಗಳಲ್ಲಿ ಮತ್ತು ವ್ಯವಹಾರಗಳಲ್ಲಿ ಕಮೀಷನ್ ಜಮಾ ಬಂದಿರುವುದನ್ನು ಇಂದೀಕರಿಸುವುದು ಮತ್ತು ಸವಕಳಿಗಳಿಗೆ ಅವಕಾಶ ಮಾಡುವುದು, ಆಯಾ ವರ್ಷಕ್ಕೆ ಸಂಬಂಧಿಸಿದ ಸಂಬಳ ಬಾಡಿಗೆ ಮುಂತಾದ ವೆಚ್ಚಗಳನ್ನು ಆಯಾ ವರ್ಷದಲ್ಲಿಯೇ 31 ಮಾರ್ಚಗೆ ಖರ್ಚು ಹಾಕುವುದು ಹೀಗೆ ಸಮಗ್ರ ಪಾವತಿ ವಿವರಗಳನ್ನು ಮಾರ್ಚ 31 ರಂದು ಅಂತಿಮಗೊಳಿಸಲು ಕ್ರಮವಿಡುವ ಜವಾಬ್ದಾರಿ ಸಹಕಾರಿಯ ಲೆಕ್ಕಪತ್ರಗಳ ನಿರ್ವಾಹಕರ ಜವಾಬ್ದಾರಿ ಎಂಬುದನ್ನು ಸಹಕಾರಿಗಳು ಗಮನಿಸಬೇಕು.

ಪ್ರಸಕ್ತ ಸಾಲಿನಲ್ಲಿ ಪಾವತಿಸಬೇಕಾದ ತೆರಿಗೆಗಳು, ಶುಲ್ಕಗಳು, ಫೀಗಳು ಇತ್ಯಾದಿಗಳ ಬಗ್ಗೆ ಗಮನವಿರುವುದು ಅಗತ್ಯ. ಇವುಗಳನ್ನು ಸಹಕಾರಿಗಳ ಲೆಕ್ಕಪತ್ರ ನಿರ್ವಾಹಕರೆ ಮುಖ್ಯ ಕಾರ್ಯನಿರ್ವಾಹಕರ ಅನುಮತಿ ಪಡೆದು ಪಾವತಿಸುವ ಕ್ರಮವಿಡಬೇಕು. ಇದರ ಜೊತೆಗೆ ಹಿಂದಿನ ವರ್ಷದಲ್ಲಿ ಆಸ್ತಿ ಜವಾಬ್ದಾರಿ ತಃಖ್ತೆಯಲ್ಲಿ ಎರಡು ಕಡೆಗಳಲ್ಲಿ ಹೊಂದಾಣಿಕೆ ಬಾಬ್ತುಗಳು ಇದ್ದರೆ ಅವುಗಳನ್ನು ಕಾನೂನು ಹಾಗೂ ಉಪವಿಧಿಗಳಲ್ಲಿ ವಿವರಿಸಿದಂತೆ ವಾರ್ಷಿಕ ಮಹಾಸಭೆಯ ಹಾಗೂ ಆಡಳಿತ ಮಂಡಳಿ ಅನುಮತಿ ಪಡೆದು ಜಮಾ ಖರ್ಚು ಮಾಡಿ ಲೆಕ್ಕಗಳನ್ನು ಮುಕ್ತಾಯಮಾಡುವ ಕ್ರಮ ಅಗತ್ಯವಾಗಿ ಮಾಡಬೇಕು. ನಂತರದಲ್ಲಿ ಲೆಕ್ಕ ಪತ್ರಗಳನ್ನು ಮುಕ್ತಾಯಮಾಡಿ ತಾತ್ಕಾಲಿಕ ಅಂತಿಮ ಲೆಕ್ಕ ಪತ್ರಗಳನ್ನು ಸಿದ್ಧಪಡಿಸಿ ಏಪ್ರಿಲ್ 30ರ ಒಳಗಾಗಿ ಆಡಳಿತ ಮಂಡಲಿ ಸಭೆಗೆ ಮಂಡಿಸಿ ಅನುಮತಿ ಪಡೆದು ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವ ಕ್ರಮವಿಡಬೇಕು.

ಒಂದು ಸಹಕಾರಿಯ ಲೆಕ್ಕಪತ್ರಗಳು ಅಂದರೆ ಸಹಕಾರಿಯ ಒಂದು ವರ್ಷದ ಕೈಗನ್ನಡಿಯಂತಿ–ರಬೇಕು. ವಾರ್ಷಿಕ ಲೆಕ್ಕಪತ್ರಗಳನ್ನು ಸಹಕಾರಿಯ ಎಲ್ಲ ಸದಸ್ಯರಿಗೆ ಓದಿಕೊಳ್ಳಲು ಹಾಗೂ ಅಧ್ಯಯನ ಮಾಡಿ ತಮ್ಮ ಸಹಕಾರಿಯ ಹಣಕಾಸಿನ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲು ಮುಕ್ತವಾಗಿ ಒದಗಿಸುವುದು ಅಗತ್ಯ. ಲೆಕ್ಕಪತ್ರಗಳನ್ನು ಶಾಸ್ತ್ರೀಯ ರೀತಿಯಲ್ಲಿ ಬರೆಯುವ ವಿಶೇಷವಾಗಿ ಆಧುನಿಕ ತಂತ್ರಜ್ಞಾನವನ್ನು ಬಳಸಿ ಸಿದ್ಧಪಡಿಸುವುದನ್ನು ರೂಢಿಕೊಂಡಾಗ ಲೆಕ್ಕಪತ್ರಗಳು ಸ್ವವಿರಣಾತ್ಮವಾಗಿ ಸಂಪೂರ್ಣ ಪಾರದರ್ಶಕವಾಗುವಂತೆ ಮತ್ತು ವೃತ್ತಿಪರತೆಯನ್ನು ರೂಢಿಸಿ ಕ್ರಮವಿಡುವುದು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿಯು ಅಗತ್ಯವಿರುವ ಎಲ್ಲಾ ಸಹಕಾರಿಯ ಸಿಬ್ಬಂದಿಯವರಿಗೆ ಹೆಚ್ಚಿನ ತರಬೇತಿಯನ್ನು ಒದಗಿಸಲು ಸಿದ್ಧವಾಗಿದೆ. ಇದರಿಂದ ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಮಟ್ಟವನ್ನು ಹೆಚ್ಚಿಸಲು ಸಹಕಾರಿಗಳು ಕ್ರಮವಿಡುವುದು ಅಗತ್ಯ.



## ಜ್ಞಾನ ಜ್ಯೋತಿ

ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ

## "ಹುಟ್ಟಿನಿಂದ ಆರಂಭವಾದ ಈ ಯಾತ್ರೆ"

ನಾವೆಲ್ಲಾ ಈ ಸುಂದರವಾದ ಜಗತ್ತಿನ ಯಾತ್ರಿಕರು, ಯಾತ್ರೆ ಮಾಡುವಾಗ ಅಲ್ಲಲ್ಲಿ ಸುಂದರವಾದ ನೋಟಗಳು, ಫಲಭರಿತ ತೋಟಗಳು ಸಿಗುತ್ತವೆ. ಅವುಗಳನ್ನು ನೋಡುತ್ತಾ, ಅನುಭವಿಸುತ್ತಾ ಮುಂದೆ ಮುಂದೆ ಸಾಗಬೇಕು. ಯಾತ್ರೆ ನಿಲ್ಲಬಾರದು. ಯಾತ್ರೆಯುದ್ದಕ್ಕೂ ನಾವು ನಮ್ಮನ್ನು ಮರೆಯಬೇಕು.... ವಿಶ್ವದ ಅಪ್ರತಿಮ ಸೌಂದರ್ಯದಲ್ಲಿ ಬೆರೆಯಬೇಕು. ಹುಟ್ಟಿನಿಂದ ಆರಂಭವಾದ ಈ ಯಾತ್ರೆ, ಕೊನೆಯವರೆಗೂ ನಿರಂತರವಾಗಿ ಮುಂದುವರೆಯಬೇಕು. ಯಾತ್ರೆ ಎಂದರೇ ಪವಿತ್ರವಾದ ಪ್ರಯಾಣ.

ದೇವಲೋಕ–ಮರ್ತ್ಯಲೋಕ, ಸ್ವರ್ಗ–ನರಕ ಎಲ್ಲವೂ ಇಲ್ಲೇ ಇವೆ. ಇದು ಅನಂತ ಲೋಕಗಳು ಜಗತ್ತು. ಭಕ್ತನಿರುವ ತಾಣವೇ ದೇವಲೋಕ. ಭಕ್ತನ ಅಂಗಳವೇ ಮಹಾಕಾಶಿ. ಭಕ್ತನ ಕಾಯವೇ ಕೈಲಾಸ. ನಗು ಮುಖದ ದರ್ಶನವೇ ಸ್ವರ್ಗ. ಕಾಮ ಕ್ರೋಧಾದಿಗಳು ಇರುವಲ್ಲೇ ನರಕ. ಮನೆ ಅದೆಷ್ಟು ದೊಡ್ಡದಾದರೇನು. ಭವ್ಯವಾದರೇನು ? ಅಲ್ಲಿ ಮಾತ್ಸರ್ಯದ ಹೊಗೆಯಾಡುತ್ತಿದ್ದರೆ ಅದೆಂಥ ಮನೆ ? ಕಲ್ಲು–ಮಣ್ಣು–ಸಿಮೆಂಟುಗಳಿಂದ ಮನೆ ಕಟ್ಟಲಾದೀತೇ? ಪ್ರೀತಿ ವಿಶ್ವಾಸಗಳಿಂದ ಮಾತ್ರ ಒಂದು ಮನೆ ವಾಸ ಯೋಗ್ಯ ಮನೆ ಎನಿಸಿಕೊಳ್ಳುತ್ತದೆ.

ಜಗತ್ತಿನಲ್ಲಿ ಒಬ್ಬೊಬ್ಬರದು ಒಂದೊಂದು ಲೋಕ. ವ್ಯಾಪಾರಿಗಳಿಗೆ ಗಿರಾಕಿಗಳ ಲೋಕ. ವಕೀಲರಿಗೆ ಜಗಳವಾಡುವವರ ಲೋಕ, ವೈದ್ಯರಿಗೆ ರೋಗಿಗಳ ಲೋಕ, ಮಕ್ಕಳಿಗೆ ಗೊಂಬೆ–ಆಟಿಕೆಗಳ ಲೋಕ. ಹೀಗೆ ಜಗತ್ತಿನಲ್ಲಿ ಅದೆಷ್ಟು ಲೋಕಗಳಿವೆಯೋ ? ಅವರವರಿಗೆ ಅವರವರ ಲೋಕವೇ ಎಲ್ಲ. ಬೇರೆ ಲೋಕಗಳು ಗೋತ್ತೇ ಇಲ್ಲ. ಬಡ ರೈತ ಹವಾ ನಿಯಂತ್ರಿತ ಕೋಣೆ ಎಂದರೇನು ಎಂಬುದನ್ನು ಅರಿಯ. ನಿಸರ್ಗದ ತಂಗಾಳಿ, ಸೂರ್ಯನ ಕಿರಣ, ಹೂ–ಹಣ್ಣು–ಫಲ–ಬೀಜ–ವೃಕ್ಷ... ಎಲ್ಲವೂ ಆತನಿಗೆ ಗೊತ್ತು. ರೈತನಿಗೆ ಗೊತ್ತಿರುವುದು ಹವಾನಿಯಂತ್ರಿತ ಕಾರುಗಳಲ್ಲಿ ಓಡಾಡುವ ಧನಿಕರಿಗೆ ಗೊತ್ತಾಗುವುದಿಲ್ಲ.

ನುಡಿಯಿಂದ ಜನರನ್ನು ಸೆಳೆಯುವ ಜನಕ್ಕೆ ಈ ಲೋಕದಲ್ಲಿ ಕೊರತೆ ಇಲ್ಲ. ಆದರೆ ಅದರ ಪರಿಣಾಮ ಕೇಳುಗನ ಆಳಕ್ಕಿಳಿಯುವುದಿಲ್ಲ. ಉತ್ತಮ ಮಾರ್ಗದಲ್ಲಿ ನಡೆದು, ಅದನ್ನೇ ಹೃದಯದಲ್ಲಿ ತುಂಬಿಕೊಂಡ ನಂತರ, ತಮ್ಮ ಹೃದಯದಲ್ಲಿ ಮೂಡಿದ ಸದ್ಭಾವದ ಪಾಕವನ್ನೇ ಮಾತಿನಾನುಭೂತಿಯಲ್ಲಿ ಅಭಿವ್ಯಕ್ತಿಸುವ ನಡೆಯೇ ಮಹಾತ್ಮರ ಹಾದಿ.

ಸುಂದರವಾದ ಜಗತ್ತನ್ನು ಅನುಭವಿಸುವುದು, ಆನಂದಿಸುವುದು ಒಂದು ಕಲೆ, ಜೊತೆ ಜೊತೆಗೆ ಜಗತ್ತನ್ನು ಇನ್ನಷ್ಟು ಸುಂದರಗೊಳಿಸುವುದು ಒಂದು ಸಾಧನೆ, ಅದೇ ಮಾನವನ ಪರಮ ಸಿದ್ಧಿಯೂ ಕೂಡ.

## ಜ್ಞಾನ ಜ್ಯೋತಿಯ ಅಂಕಣಕಾರ ಶ್ರೀ ಎಂ. ಬಸಪ್ಪ ದೈವಾಧೀನ



ಇವರು ದಿನಾಂಕ 24.02.2022 ರ ಗುರುವಾರ ದಂದು ದೈವಾಧೀನರಾದರು. ಶ್ರೀಯುತರು ಸಂಯುಕ್ತ ಸಹಕಾರಿಯ ಸ್ವಾಭಿಮಾನಿ ಸಹಕಾರಿ ಮಾಸಪತ್ರಿಕೆಯ 70 ಜ್ಞಾನ ಜ್ಯೋತಿ ಅಂಕಣಗಳನ್ನು ಬರೆದಿರುತ್ತಾರೆ ಹಾಗೂ ಡಿ.ವಿ.ಜಿಯವರ ಮಂಕು ತಿಮ್ಮನ ಕಗ್ಗ ಪದ್ಯಗಳನ್ನು ಆಯ್ಕೆ ಮಾಡಿ ಸಹಕಾರಿಗಳಿಗೆ ಮಾರ್ಗದರ್ಶನ ನೀಡಿರುತ್ತಾರೆ. ಶ್ರೀಯುತರ ನಿಧನದಿಂದ ಸಹಕಾರ ಕ್ಷೇತ್ರಕ್ಕೆ ಅತೀವ ನಷ್ಟ ಉಂಟಾಗಿದೆ.

ಶ್ರೀಯುತರ ನಿಧನಕ್ಕೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಸಂತಾಪ ವ್ಯಕ್ತಪಡಿಸಿದ್ದಾರೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 21061 ಆಗಿರುತ್ತದೆ. ಇವುಗಳ ಪೈಕಿ 11476 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 9,585.

**ಫೆಬ್ರವರಿ ತಿಂಗಳ ಪ್ರಕರಣಗಳು :** ಒಟ್ಟು ದಾವಾಪ್ರಕರಣ 342 ಒಟ್ಟು ಇತ್ಯರ್ಥಗೊಂಡ ಪ್ರಕರಣಗಳು 142.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 4061 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 677 ಪ್ರಕರಣಗಳು ಇತ್ಯರ್ಥಗೊಂಡಿದ್ದು. 3384 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1023 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 581 ಪ್ರಕರಣಗಳು ಇತ್ಯರ್ಥಗೊಂಡಿದ್ದು 442 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಫೆಬ್ರವರಿ ತಿಂಗಳಿನಲ್ಲಿ 148 ಪ್ರಕರಣ ದಾಖಲಾಗಿರುತ್ತವೆ.

# ಸೌಹಾರ್ದ ಸಹಕಾರಿಗಳ ಜಿಲ್ಲಾ ಒಕ್ಕೂಟಗಳ ಸುಸ್ಥಿರ ಅಭಿವೃದ್ಧಿ ಚಿಂತನ ಕಾರ್ಯಾಗಾರ

## ದಿನಾಂಕ 15, 16 ಫೆಬ್ರವರಿ 2022. ಸ್ಥಳ : ಸೌಹಾರ್ದ ಸಹಕಾರಿ ಸೌಧ, ಮಲ್ಲೇಶ್ವರಂ, ಬೆಂಗಳೂರು



**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾ–ರಿಯು ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಾತ್ಮಕ ಅಭಿವೃದ್ಧಿ ದೃಷ್ಟಿಯಿಂದ ರಾಜ್ಯದ ಎಲ್ಲ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಒಕ್ಕೂಟಗಳ ಸಹಯೋಗದೊಂದಿಗೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟಗಳ ಸುಸ್ಥಿರ ಅಭಿವೃದ್ಧಿ ಚಿಂತನಾ ಕಾರ್ಯಾಗಾರವನ್ನು ದಿನಾಂಕ 15,16 ಫೆಬ್ರವರಿ 2022 ಈ ಎರಡು ದಿನಗಳಂದು ಬೆಂಗಳೂರಿನ ಕೇಂದ್ರ ಕಛೇರಿಯಲ್ಲಿ ಆಯೋಜಿಸಲಾಗಿತ್ತು. ರಾಜ್ಯದ 15 ಒಕ್ಕೂಟಗಳ ಮತ್ತು ಒಕ್ಕೂಟಗಳು ಇನ್ನು ಪ್ರಾರಂಭದ ಹಂತದಲ್ಲಿರುವ ಜಿಲ್ಲೆಗಳಿಂದ ಆಯ್ದ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸೇರಿದಂತೆ ಒಟ್ಟಾರೆ 112 ಪ್ರತಿನಿಧಿಗಳು ಹಾಗೂ ಹಲವಾರು ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದರು.

ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಶ್ರೀಧರರವರು ಸ್ವಾಗತ ಮಾಡಿದರು. ಬೆಂಗಳೂರು, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷ ಶ್ರೀ ಶ್ರೀಧರ ಎನ್ ರಾವ ರವರು ವಂದನಾರ್ಪಣೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ತಿಮ್ಮಯ್ಯಶೆಟ್ಟಿ, ಶ್ರೀ ಸಂಜೀವ ಮಹಾಜನ, ಬಿ.ಎಸ್.ಗುಂಡೂರಾವ, ಶ್ರೀ ಎ.ಆರ್.ಪ್ರಸನ್ನಕುಮಾರ, ಶ್ರೀಮತಿ ಸರಸ್ವತಿ, ಶ್ರೀ ಮಂಜುನಾಥ ರವರು ಉಪಸ್ಥಿತರಿದ್ದರು.

**ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು ಹಾಗೂ ಸಾಧನೆ ಶ್ಲಾಘನೀಯ : ಪ್ರಮೋದ ಹೆಗಡೆ**

ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮದ ಉದ್ಘಾಟನೆಯನ್ನು ರಾಜ್ಯದ ಹಿರಿಯ ಸಹಕಾರಿ ಹಾಗೂ ಕರ್ನಾಟಕ ರಾಜ್ಯ ಪಂಚಾಯತ ರಾಜ್ಯ ಪರಿಷತ್ ಅಧ್ಯಕ್ಷರೂ ಆಗಿರುವ ಶ್ರೀ ಪ್ರಮೋದ ಹೆಗಡೆಯವರು ನೇರವೇ–ರಿಸಿದ ನಂತರ ರಾಜ್ಯದ ಸೌಹಾರ್ದ ಸಹಕಾರಿಯ ನೇತಾರನಾಗಿ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು ಹಾಗೂ ಸಾಧನೆಗಳು ಶ್ಲಾಘನೀಯ. ಶ್ರೀಯುತ ಬಿ.ಹೆಚ್.ಕೃಷ್ಣಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಮಾಡುತ್ತಿರುವ ಕೆಲಸಕಾರ್ಯಗಳು ಉತ್ತಮವಾಗಿ ನೆರವೇರುತ್ತಿರುವುದು ನಮಗೆಲ್ಲ ಸಂತೋಷವನ್ನು ತಂದಿದೆ ಎಂದು ತಿಳಿಸಿದರು. ವಿಶೇಷವಾಗಿ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ತೊಂದರೆಗಳನ್ನು ನಿವಾರಿಸುವಲ್ಲಿ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿ ಮಾಡಿಸುವಲ್ಲಿ ಮತ್ತು ಸರಕಾರ ಹಾಗೂ ಸಾರ್ವಜನಿಕರಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಹೆಚ್ಚಿನ ಶ್ರಮವಹಿಸಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರೆಲ್ಲರಿಗೂ ರಾಜ್ಯದ ಸೌಹಾರ್ದ ಸಹಕಾ–ರಿಗಳ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ತಿಳಿಸಿದರು.

**ಸೌಹಾರ್ದ ಸಹಕಾರಿಗಳ ಹಾಗೂ ಸೌಹಾರ್ದ ಸಹಕಾರಿ ಜಿಲ್ಲಾ ಒಕ್ಕೂಟಗಳ ಸುಸ್ಥಿರ ಅಭಿವೃದ್ಧಿ ಸಂಯುಕ್ತ ಸಹಕಾರಿಯ ಆಶಯ : – ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ.**

ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾ–ರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು "ಸಂಯುಕ್ತ ಸಹಕಾ–ರಿಯ ನಡೆ ಗುಣಮಟ್ಟದ ಕಡೆ" ಎಂಬ ಘೋಷವಾಕ್ಯವನ್ನು ಕಾರ್ಯರೂಪಕ್ಕೆ ತರುವ ದೃಷ್ಟಿಯಿಂದ ಸೌಹಾರ್ದ ಸಹಕಾರಿಗಳಿಗೆ ಒಕ್ಕೂಟಗಳ ಮೂಲಕ ಹೆಚ್ಚಿನ ಸೇವೆಯನ್ನು ಅವರುಗಳ ಹಾಗೂ ಒಕ್ಕೂಟಗಳ ಆರ್ಥಿಕ ವ್ಯವಹಾರಗಳನ್ನು ಹೆಚ್ಚಿಸುವ ಅಗತ್ಯತೆಯನ್ನು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಈ ರೀತಿ ಕಾರ್ಯಾಗಾರವನ್ನು ಹಮ್ಮಿಕೊಂಡಿದೆ. ಇದರಲ್ಲಿ ಸೌಹಾರ್ದ ಸಹಕಾರಿಗಳ ಒಕ್ಕೂಟಗಳು ಹಮ್ಮಿಕೊಳ್ಳಬಹುದಾದ ಹಲವಾರು ವಿಷಯಗಳ ಬಗ್ಗೆ ವಿವರಗಳನ್ನು ನೀಡಲಾಗುತ್ತದೆ. ಇವೆಲ್ಲವುಗಳನ್ನು ಕೂಲಂಕುಶವಾಗಿ ಅಧ್ಯಯನ ಮಾಡಿ ಯಾವುದನ್ನು ತಕ್ಷಣದಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ ಯಾವುದು ಮುಂಬರುವ ದಿನಗಳಲ್ಲಿ ಮಾಡಬಹುದು ಎಂಬ ಬಗ್ಗೆ ಒಕ್ಕೂಟಗಳು ನಿರ್ಧ–ರಿಸಬಹುದಾಗಿದೆ ಎಂದು ತಿಳಿಸಿದರು.

**ಸಹಕಾರ ಸಂಸ್ಥೆಗಳು ಸಾರ್ವಜನಿಕರಿಗೆ ಸರಕಾರದ ಸೇವೆಗಳನ್ನು ಒದಗಿಸುವ ಮಾಧ್ಯಮಗಳು : ಶ್ರೀ ವಿರೂಪಾಕ್ಷಪ್ಪ, ಮಾಜಿ ಸಂಸದರು ಕೊಪ್ಪಳ.**

ಮಾಜಿ ಸಂಸದ ಹಾಗೂ ರಾಯಚೂರು ಜಿಲ್ಲಾ ಸೌಹಾರ್ದ ಸಹಕಾ–ರಿಗಳ ಒಕ್ಕೂಟದ ಅಧ್ಯಕ್ಷ ಶ್ರೀ ವಿರೂಪಾಕ್ಷಪ್ಪನವರು ಮಾತನಾಡಿ ಸಹಕಾರ ಸಂಸ್ಥೆಗಳು ಒಂದು ಶತಮಾನದಿಂದ ಸಾರ್ವಜನಿಕರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗಾಗಿ ಶ್ರಮಿಸುತ್ತ ಬಂದಿವೆ. ಸರಕಾರದ ಹಲವಾರು ಕಾರ್ಯಕ್ರಮಗಳನ್ನು ಸಾರ್ವಜನಿಕರಿಗೆ ಒದಗಿಸುವ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುತ್ತ ಬಂದಿವೆ. ಸಹಕಾರಿ ಕ್ಷೇತ್ರಕ್ಕೆ ಸರಕಾರಗಳು

ಪ್ರೋತ್ಸಾಹಿಸುವುದು ಅಗತ್ಯ. ಆಡಳಿತದ ಹಿತ ದೃಷ್ಟಿಯಿಂದ ಸಹಕಾರಿ ಕಾನೂನುಗಳಲ್ಲಿ ಅಗತ್ಯ ತಿದ್ದುಪಡಿಗಳನ್ನು ಮಾಡಿಕೊಡುವುದು ಅಗತ್ಯ. ಸೌಹಾರ್ದ ಸಹಕಾರಿಗಳ ಒಕ್ಕೂಟಗಳಿಗೆ ಈ ರೀತಿ ಹಲವಾರು ಕಾರ್ಯಕ್ರಮಗಳ ಬಗ್ಗೆ ತಿಳುವಳಿಕೆ ನೀಡುವ ಉದ್ದೇಶದಿಂದ ಹಮ್ಮಿಕೊಂಡಿರುವ ಈ ಕಾರ್ಯಕ್ರಮ ಯಶಸ್ವಿಯಾಗಲಿ ಒಕ್ಕೂಟಗಳು ಈ ಎಲ್ಲ ಯೋಜನೆಗಳನ್ನು ಜಾರಿಮಾಡಿ ತಮ್ಮ ಆರ್ಥಿಕತೆಯನ್ನು ಬಲಪಡಿಸುವುದರ ಜೊತೆಗೆ ಸೌಹಾರ್ದ ಸಹಕಾರಿಗಳಿಗೆ ಹೆಚ್ಚಿನ ಚಟುವಟಿಕೆಗಳನ್ನು ನೀಡಿದಂತಾಗುತ್ತದೆ ಎಂದು ತಿಳಿಸಿದರು.

**ವಿಶ್ವಾಸಾರ್ಹತೆ ಹಾಗೂ ಕ್ರೀಯಾಶೀಲತೆ ಅಗತ್ಯ. : ಶ್ರೀ ಗುರುನಾಥ ಜ್ಯಾಂತೀಕರ**

ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರೂ ಹಾಗೂ ಕರ್ನಾಟಕ ಸುದ್ದಿಮಾಧ್ಯಮ ಸಹಕಾರ ಮಹಾಮಂಡಳದ ಅಧ್ಯಕ್ಷರೂ ಆಗಿರುವ ಶ್ರೀ ಗುರುನಾಥ ಜಾಂತಿಕರರವರು ಮಾತನಾಡಿ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಕ್ಷೇತ್ರದ ಬಗ್ಗೆ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸಹಕಾರಿಗಳ ಪದಾಧಿಕಾರಿಗಳು ಹಾಗೂ ಸಿಬ್ಬಂದಿವರ್ಗದವರು ಹೆಚ್ಚಾಗಿ ಶ್ರಮಿಸಬೇಕಿದೆ. ವಿಶ್ವಾಸಾರ್ಹತೆಯ ನಂತರದ ಅತ್ಯಂತ ಮಹತ್ವದ ವಿಷಯ ಕ್ರೀಯಾಶೀಲತೆ. ಪದಾಧಿಕಾರಿಗಳು ಹಾಗೂ ಸಿಬ್ಬಂದಿಯವರು ಸಹಕಾರಿಯ ಅಭಿವೃದ್ಧಿಯ ಬಗ್ಗೆ ಹೆಚ್ಚು ಕ್ರೀಯಾಶೀಲರಾಗುವುದರಿಂದ ಸಹಕಾರಿಗಳು ಅಭಿವೃದ್ಧಿಯತ್ತ ದಾಪುಗಾಲ ಹಾಕಬಹುದಾಗಿದೆ. ಈ ನಿಟ್ಟಿನಲ್ಲಿ ಸಹಕಾರಿ ಒಕ್ಕೂಟಗಳು ಕಾರ್ಯನಿರ್ವಹಿಸುವುದು ಅಗತ್ಯ ಎಂದು ತಿಳಿಸಿದರು.

## ಕಾರ್ಯಕ್ರಮಗಳ ವಿವರಗಳು

**ದಿನಾಂಕ 15-2-2022 :**

**1. ವಿಮಾಯೋಜನೆಗಳು :** ಮಹೇಂದ್ರ ಬೋಕರೇಜ ಕಂಪನಿಯಿಂದ ಶ್ರೀ ಅಜೆಯರವರು ಸೌಹಾರ್ದ ಸಹಕಾರಿಗಳ ಸದಸ್ಯರಿಗೆ ಅವರ ಜೀವ ವಿಮೆ ಅವರ ವಾಹನಗಳ ವಿಮೆ, ಅವರ ಆಸ್ತಿ ಪಾಸ್ತಿಗಳ ವಿಮೆ ಸಹಕಾರಿಯ ಕಟ್ಟಡ ಹಾಗೂ ಯಂತ್ರೋಪಕರಣಗಳ ವಿಮೆ, ಸಾಲಗಳ ವಿಮೆ ಹಾಗೂ ಬೇರೆ ಬೇರೆ ವಿಧವಾದ ವಿಮೆಗಳನ್ನು ಮಾಡಿಸುವುದರ ಮೂಲಕ ಸಹಕಾರಿಗೆ ಹಾಗೂ ಒಕ್ಕೂಟಗಳಿಗೆ ಲಾಭಾಂಶವನ್ನು ಪಡೆಯಬಹುದು ಎಂಬ ಬಗ್ಗೆ ವಿವರಗಳನ್ನು ನೀಡಿದರು.

**2 ಠೇವಣಿ ಸುರಕ್ಷಿತ ವಿಮಾ ಯೋಜನೆಗಳು :** ಠೇವಣಿ ಸುರಕ್ಷಿತ ಯೋಜನೆಗಳನ್ನು ವಿಮಾ ಕಂಪನಿಯವರೊಡನೆ ಒಡಂಬಡಿಕೆ ಮಾಡಿಕೊಂಡು ಜಾರಿ ಮಾಡಿದಾಗ ಸದಸ್ಯರಿಗೆ ತಮ್ಮ ಠೇವಣಿಗೆ ಭದ್ರತೆ ಇದೆ ಎಂಬುದರ ಬಗ್ಗೆ ಖಾತರಿಯಾಗುತ್ತದೆ ಮತ್ತು ವಿಶ್ವಾಸಾರ್ಹತೆ ಹೆಚ್ಚುತ್ತದೆ ಈ ಕೆಲಸವನ್ನು ಒಕ್ಕೂಟಗಳು ವಿಮಾಕಂಪನಿಯವರೊಂದಿಗೆ ಒಡಂಬಡಿಕೆ ಮಾಡಿಕೊಂಡು ಜಾರಿಗೆ ಕ್ರಮವಿಡಬಹುದಾಗಿದೆ ಎಂದು ತಿಳಿಸಲಾಯಿತು.

**3. ಸಾಲ ವಸೂಲಾತಿ ಕ್ರಮಗಳು :** ರಾಜ್ಯದಾದ್ಯಂತ ಹಲವಾರು ಸೌಹಾರ್ದ ಸಹಕಾರಿಗಳಲ್ಲಿ ಸಾಲ ವಸೂಲಾತಿ ಸಮಸ್ಯೆಯ ಗಂಭೀರತೆಯ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು.

ಶ್ರೀ ಬಿ.ಹೆಚ್.ದಯಾಕರರೆಡ್ಡಿ, ಮಾನ್ಯ ವೃತ್ತಿಪರ ನಿರ್ದೇಶಕರು, ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್‌ಕೋ-ಆಪರೇಟಿವ್ ಲಿ ಹಾಗು ಶ್ರೀ ಶಿವಶಂಕರ್, ಮಾನ್ಯ ವಕೀಲರು ಇವರುಗಳು ವಿಷಯ ಮಂಡನೆ ಮಾಡಿ ಶಾಖಾವಾರು ಜಿಲ್ಲಾವಾರು ಸಾಲ ವಸೂಲಾತಿಗಾಗಿ ಸಮಿತಿಗಳನ್ನು (Legal and physical recovery teams) ರಚಿಸುವ ಕುರಿತು ಕ್ರಮವಿಡುವುದು ಸೂಕ್ತ ಎಂದು ಅಭಿಪ್ರಾಯ ಮಂಡಿಸಿದರು. ಈ ಬಗ್ಗೆ ಸಂಯುಕ್ತ ಸಹಕಾರಿಯವರು ಆಯಾ ಜಿಲ್ಲೆಯ ಒಕ್ಕೂಟಗಳ ಅಧ್ಯಕ್ಷರುಗಳ ಜೊತೆಗೆ ಸಮಾಲೋಚಿಸಿ ಮುಂದಿನ ಕ್ರಮವಿಡಬಹುದು ಎಂದು ಅಭಿಪ್ರಾಯ ಪಡಲಾಯಿತು.

**4. ದಾವಾ ದಾಖಲಾತಿ ಪ್ರಕ್ರೀಯೆ ಹಾಗೂ ಕ್ರಮ ಬದ್ಧ ನೋಟೀಸು ನೀಡುವುದು ಅಗತ್ಯ : ಶಶಿಧರ**

ಸಂಯುಕ್ತ ಸಹಕಾರಿಯ ದಾವಾ ಪಂಚಾಯಿತಿ ನ್ಯಾಯಾಲಯದ ಪೀಠಾಧಿಕಾರಿ ಶ್ರೀ ಶಶಿಧರರವರು ಮಾತನಾಡಿ ಸಾಲ ವಸೂಲಾತಿಗಾಗಿ ಪ್ರಥಮವಾಗಿ ಸಾಲಗಾರರಿಗೆ ನೋಟೀಸು ನೀಡುವುದು ಅತ್ಯಂತ ಮಹತ್ವದ್ದಾಗಿದೆ. ಕಾನೂನು ಹಾಗೂ ಸಾಲ ವಸೂಲಾತಿ ಪ್ರಕ್ರಿಯೇಯಲ್ಲಿ ದಾಖಲಾತಿಗಳು ಅತ್ಯಂತ ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ಎಲ್ಲಕ್ಕೂ ಮೊದಲು ಕ್ರಮಬದ್ಧವಾದ ನೋಟೀಸನ್ನು ನೀಡುವುದು ಅಗತ್ಯ ಎಂದು ತಿಳಿಸಿದರು.

**5. ವಸೂಲಾಧಿಕಾರಿ ನೇಮಕ ಅಗತ್ಯ : ಪ್ರೇಮಾನಂದ**

ನಂತರ ಸಹಕಾರಿ ದಾವಾ ದಾಖಲಾತಿ ನ್ಯಾಯಾಲಯ & ಶ್ರೀ ಪ್ರೇಮಾನಂದ, ವಸೂಲಾಧಿಕಾರಿ ಇವರು ಮಾತನಾಡಿ ಸಾಲ ವಸೂಲಾತಿ ಸಹಕಾರಿಯ ಬೆನ್ನೆಲುಬು. ಅದು ಕ್ರಮ ಬದ್ಧವಾಗಿ ಕಾನೂನು ರೀತಿಯಲ್ಲಿ ನಡೆಯಬೇಕಾಗುತ್ತದೆ. ಪ್ರತಿಯೊಂದು ಸಹಕಾರಿಯವರು ತಮ್ಮ ಸಹಕಾರಿಯ ಅಧಿಕಾರಿ ಒಬ್ಬರನ್ನು ವಸೂಲಿ ಅಧಿಕಾರಿಯನ್ನಾಗಿ ನೇಮಿಸಿಕೊಳ್ಳಲು ಅವಕಾಶವಿದೆ. ಪ್ರಸ್ತಾವನೆಗಳನ್ನು ಕಳುಹಿಸಿ. ಅವರನ್ನು ನೇಮಕಮಾಡಿಕೊಡಲಾಗುವುದು. ಅವಶ್ಯವಿರುವಲ್ಲಿ ನನ್ನನ್ನೆ ಕರೆಯಿರಿ. ನಾನು ಬರುತ್ತೇನೆ ಸಾಲ ವಸೂಲಾತಿಗೆ ಸಹಕರಿಸುತ್ತೇನೆ ಎಂದು ತಿಳಿಸಿದರು

**6.ಅಧ್ಯಯನ ಪ್ರವಾಸ :** ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟಗಳ ಮೂಲಕ ರಾಜ್ಯ, ಅಂತರರಾಜ್ಯ ಹಾಗು ವಿದೇಶ ಅಧ್ಯಯನ ಪ್ರವಾಸಗಳನ್ನು ಆಯೋಜಿಸುವುದರಿಂದ ಸಹಕಾರಿಗಳ ಸದಸ್ಯರಿಗೆ ಸಹಕಾರಿ ಕ್ಷೇತ್ರದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಒದಗಿಸುವುದು ಆಗುತ್ತದೆ. ಈ ಮೂಲಕ ಸಹಕಾರಿ ಒಕ್ಕೂಟಗಳು ಲಾಭವನ್ನು ಗಳಿಸಬಹುದಾಗಿದೆ ಎಂದು ಶ್ರೀ ಶಾನಬಾಗ, ಚಾರಿಯೇಟ್ ವರ್ಲ್ಡ್‌ಟೂರ್ಸ್ ಲಿ, ಬೆಂಗಳೂರು ಹಾಗೂ ಶ್ರೀ ಧನಂಜಯ, ಟೂರ್ಸ್&ಟ್ರಾವಲ್ಸ್ ಬೆಂಗಳೂರು ಇವರು ವಿಷಯ ತಿಳುವಳಿಕೆ ಮಾಡಿಕೊಟ್ಟರು.

**7. ಚಿಟ್ ಫಂಡ್ ನಿರ್ವಹಣೆ :** ಸಹಕಾರಿಗಳ ಹಾಗೂ ಒಕ್ಕೂಟಗಳ

ಮೂಲಕ ರಾಜ್ಯ ಮಟ್ಟದಲ್ಲಿ ಚಿಟ್ ವ್ಯವಹಾರಗಳನ್ನು ಪ್ರಾರಂಭಿಸುವ ಬಗ್ಗೆ ಉದಯ ಸೌಹಾರ್ದ ಸಹಕಾರಿ ಉಪಾಧ್ಯಕ್ಷರಾದ ಶ್ರೀ ಚಂದ್ರಶೇಖರವರು, ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಕರಿಯಪ್ಪನವರು ಮತ್ತು ಮಹಾಯೋಗಿ ವೇಮನ ಸೌಹಾರ್ದ ಸಹಕಾರಿಯ ಅಧಿಕಾರಿ ಶಿವಕುಮಾರ ಆರ್ ಇವರುಗಳು ಸಹಕಾರಿಗಳ ಮೂಲಕ ಚಿಟ್ ಫಂಡ ವ್ಯವಹಾರ ನಡೆಸುವ ಬಗ್ಗೆ ವಿವರ ನೀಡಿದರು. ಮತ್ತು ಇದು ಸಹಕಾರಿಗೆ ಹೇಗೆ ಲಾಭದಾಯಕವಾಗುತ್ತದೆ ಎಂಬ ಬಗ್ಗೆ ಮಾಹಿತಿ ನೀಡಿದರು.

**8. ಸಾವಯವ ಕೃಷಿ ಹಾಗೂ ಸೌಲಭ್ಯಗಳು :** ಸಾವಯವ ಸಾಮಾಗ್ರಿಗಳ ವ್ಯವಹಾರ ಕೈಗೊಳ್ಳುವುದು ಹೇಗೆ ಇದರಿಂದ ಸೌಹಾರ್ದ ಸಹಕಾರಿಗಳು ಹಾಗೂ ಒಕ್ಕೂಟಗಳು ರೈತರಿಗೆ ಹೇಗೆ ನೆರವಾಗಬಹುದು ಮತ್ತು ತನ್ಮೂಲಕ ಒಕ್ಕೂಟಗಳಿಗೂ ಆದಾಯವನ್ನು ಹೇಗೆ ಮಾಡಿಕೊಳ್ಳಲು ಅವಕಾಶವಾಗುತ್ತದೆ ಎಂಬ ವಿಷಯದ ಬಗ್ಗೆ ಶ್ರೀ ಆನಂದ್.ಅ. ಶ್ರೀ, ಮಾನ್ಯಅಧ್ಯಕ್ಷರು ಸಾವಯವ ಕೃಷಿ ಮಿಶನ್, ಬೆಂಗಳೂರು ಇವರು ಉಪನ್ಯಾಸ ನೀಡಿದರು.

**9. ಸೌಹಾರ್ದ ಸಹಕಾರಿಗಳಲ್ಲಿ ನೌಕರರ ESI & PF :** ಸೌಹಾರ್ದ ಸಹಕಾರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಯವರಿಗೆ ಅವರ ಕೆಲಸದಲ್ಲಿ ಆಸಕ್ತಿ ಹೆಚ್ಚಿಸುವ ದೃಷ್ಟಿಯಿಂದ ಅವರಿಗೆ ತಮ್ಮ ಭವಿಷ್ಯದ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಭವಿಷ್ಯ ನಿಧಿ ಅನುಕೂಲ ಕಲ್ಪಿಸುವುದರ ಜೊತೆಗೆ ಅವರುಗಳಿಗೆ ಆರೋಗ್ಯದ ಬಗ್ಗೆ ಸೌಲಭ್ಯವನ್ನು ಒದಗಿಸುವ ದೃಷ್ಟಿಯಿಂದ ಬಗ್ಗೆ ಶ್ರೀ ಪ್ರವೀಣ, ಮಾನ್ಯತೆರಿಗೆ ಸಲಹೆಗಾರರು, ಬೆಂಗಳೂರು ಇವರು ವಿವರ ನೀಡಿದರು. ಮಾನ್ಯ ಅಧ್ಯಕ್ಷರು ಮಾತನಾಡಿ ಸೌಹಾರ್ದ ಸಹಕಾರಿಗಳ ಒಕ್ಕೂಟಗಳ ಮೂಲಕ ಎಲ್ಲ ಸೌಹಾರ್ದ ಸಹಕಾರಿಗಳಲ್ಲ ಈ ವ್ಯವಸ್ಥೆಯನ್ನು ಕಲ್ಪಿಸುವ ವ್ಯವಸ್ಥೆ ಮಾಡಲು ಕೋರಿದರು.

**ದಿನಾಂಕ 16.02.2022 :**

**10. ಸುಸ್ಥಿರ ಅಭಿವೃದ್ಧಿ ಸಹಕಾರಿಗಳ ಪಾತ್ರ :** ಸೌಹಾರ್ದ ಸಹಕಾರಿಗಳಲ್ಲಿ ಸುಸ್ಥಿರ ಅಭಿವೃದ್ಧಿಯಲ್ಲಿ ಸಹಕಾರಿಗಳ ಪಾತ್ರದ ಬಗ್ಗೆ ಆನ್‌ಲೈನ್ ಮೂಲಕ ಡಾ.ಯಶವಂತ ಡೋಂಗ್ರೆ, ಮಾನ್ಯ ಕುಲಪತಿಗಳು (ನಿ), ಮೈಸೂರು ವಿಶ್ವವಿದ್ಯಾಲಯ ಇವರು ಉಪನ್ಯಾಸ ನೀಡಿದರು.

**11. ಕಿರು ಹಣಕಾಸು ಬ್ಯಾಂಕುಗಳನ್ನು (Small finance bank) :** ಆರ್‌ಬಿಐ ನ ಕಾಯ್ದೆ ಹಾಗೂ ನಿಯಮಗಳು ಎಂಬ ವಿಷಯದ ಬಗ್ಗೆ ಶ್ರೀ ಮಹಾದೇವಸ್ವಾಮಿ, ಮಾನ್ಯ ಎ.ಜಿ.ಎಮ್ (ನಿ) ಆರ್ ಬಿ ಐ & ಶ್ರೀ ಸುಧಾಕರ ಭಟ್, ಮಾನ್ಯ ಎ.ಜಿ.ಎಮ್ (ನಿ) ಆರ್ ಬಿ ಐ. ಇವರು ವಿಷಯ ಮಂಡನೆ ಮಾಡಿದರು.

**12. ಬ್ಯಾಂಕೇತರ ಹಣಕಾಸು ಕಂಪನಿಗಳ ಕಾರ್ಯನಿರ್ವಹಣೆ (Working of Nonbanking finance companies) :** ವಿಷಯದ ಬಗ್ಗೆ ಶ್ರೀ ನಾಗೇಂದ್ರ ಮಾಳಿ, ಮಾನ್ಯ ಅಧ್ಯಕ್ಷರು, ನವಚೇತನ ಸೌಹಾರ್ದ ಸಹಕಾರಿ ನಿ., ಹಾವೇರಿ ಇವರು ವಿವರಣೆ ನೀಡಿದರು.

**13. ರಾಜ್ಯ ಮಟ್ಟದ ಸೌಹಾರ್ದ ಸಹಕಾರಿ ಬ್ಯಾಂಕ್ ಪ್ರಾರಂಭಿಸುವ ಕುರಿತು :** ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿ ವೇಗವಾಗಿ ಬೆಳೆಯುತ್ತಿದ್ದು ಸಂಖ್ಯೆ ಈಗಾಗಲೇ 5500ಕ್ಕಿಂತಲೂ ಹೆಚ್ಚಿಗೆಆಗುತ್ತಿದೆ. ಸೌಹಾರ್ದ ಸಹಕಾರಿಗಳಲ್ಲಿ ಸದಸ್ಯರ ಠೇವಣಿ, ಸಹಕಾರಿಗಳ ಹೂಡಿಕೆ ಮತ್ತು ಹಣಕಾಸಿನ ಅಗತ್ಯವಿರುವ ಸಹಕಾರಿಗಳಿಗೆ ಹಣಕಾಸು ಒದಗಿಸುವ ದೃಷ್ಟಿಯಿಂದ ಸೌಹಾರ್ದ ಸಹಕಾರಿಗಳ ರಾಜ್ಯ ಮಟ್ಟದ ಸಹಕಾರಿ ಸಂಸ್ಥೆ / ಬ್ಯಾಂಕು ಪ್ರಾರಂಭಿಸುವ ಅಗತ್ಯತೆ ಇದೆ. ಈ ಬಗ್ಗೆ ಆರ್.ಬಿ.ಐ ನವರನ್ನು ಸಂಪರ್ಕಿಸಲಾಗಿದೆ ಪತ್ರ ಬರೆಯಲಾಗಿದೆ. ಆದರೆ ಈಗ ಪ್ರಸ್ತುತ ಯಾವುದೆ ಹೊಸ ಬ್ಯಾಂಕನ್ನು ತೆರೆಯಲು ಅವಕಾಶ ನೀಡಲಾಗುವುದಿಲ್ಲ ವೆಂಬುದಾಗಿ ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಕಾರ್ಯನಿರ್ವಹಿಸುತ್ತಿರುವ ಬ್ಯಾಂಕನ್ನು ಆಯ್ಕೆ ಮಾಡಿಕೊಂಡು ಅದಕ್ಕೆ ಸಹಕಾರಿ ಸಂಸ್ಥೆಗಳಿಗೆ ಸದಸ್ಯತ್ವವನ್ನು ನೀಡುವ ಬಗ್ಗೆ ಮಾನ್ಯ ಸಹಕಾರ ಸಂಘಗಳ ನಿಬಂಧಕರನ್ನು ಕೋರಿದೆ. ಮಾನ್ಯ ನಿಬಂಧಕರು ಆರ್.ಬಿ.ಐಗೆ ಪತ್ರ ಬರೆದು ಪ್ರಾಥಮಿಕ ಸಹಕಾರ ಬ್ಯಾಂಕುಗಳಲ್ಲಿ ಪ್ರಾಥಮಿಕ ಸಹಕಾರಿಗಳು ಸದಸ್ಯತ್ವ ಪಡೆಯಲು ಅವಕಾಶವಾಗಬಹುದೇ ಎಂಬ ಬಗ್ಗೆ ವಿವರ ಕೋರಿದ್ದಾರೆ.

ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಹಾಗೂ ಮಾನ್ವಿ ಪಟ್ಟಣ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಆರ್. ತಿಮ್ಮಯ್ಯಶೆಟ್ಟಿಯವರು ಮಾತನಾಡಿ ಮಾನವಿ ಸಹಕಾರ ಬ್ಯಾಂಕಿನ ಕಾರ್ಯಚಟುವಟಿಕೆಗಳ ವಿವರ ನೀಡಿ ತಮ್ಮ ಬ್ಯಾಂಕಿನಲ್ಲಿ ಸೌಹಾರ್ದ ಸಹಕಾರಿಗಳು ಸದ್ಯಕ್ಕೆ ಅಸೋಸಿಯೇಟ್ (ಸಹ ಸದಸ್ಯತ್ವ ) ಮೆಂಬರ ಆಗಬಹುದು ಎಂಬ ಬಗ್ಗೆ ಚರ್ಚೆ ನಡೆಯುತ್ತಿದೆ. ಅದಕ್ಕೆ ಅವಕಾಶವಾದಲ್ಲಿ ಸೌಹಾರ್ದ ಸಹಕಾರಿಗಳು ನಮ್ಮ ಬ್ಯಾಂಕಿನಲ್ಲಿ ಸಹ ಸದಸ್ಯತ್ವ ಪಡೆದು ನಂತರ ಪೂರ್ಣ ಪ್ರಮಾಣದ ಸದಸ್ಯತ್ವಕ್ಕೆ ವರ್ಗಾಯಿಸುವ ಬಗ್ಗೆ ಕ್ರಮವಿಡುವ ಯೋಚನೆ ಇದೆ. ಈ ಬಗ್ಗೆ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಹೆಚ್ಚಿನ ವಿವರ ನೀಡಲಿರುವರು ಎಂದು ತಿಳಿಸಿದರು.

ಅವಧಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಶ್ರೀ ತಿಮ್ಮಯ್ಯಶೆಟ್ಟಿಯವರು ಪ್ರಸ್ತುತ ಪಡಿಸಿದ ವಿಷಯ ಉತ್ತಮವಾಗಿದೆ. ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ರಾಜ್ಯ ಮಟ್ಟದ ಬ್ಯಾಂಕಿನ ಅವಶ್ಯಕತೆ ಇದೆ. ಅದನ್ನು ಪ್ರಾರಂಭಿಸಲು ಯಾವುದಾದರೊಂದು ಪರ್ಯಾಯ ವ್ಯವಸ್ಥೆ ಬಗ್ಗೆ ಚಿಂತನೆ ಮಾಡುತ್ತಿರುವಾಗ ಮಾನ್ಯ ತಿಮ್ಮಯ್ಯ ಶೆಟ್ಟಯವರು ಈ ಪ್ರಸ್ತಾವನೆಯನ್ನು ನೀಡಿರುವುದು ಸಮಯೋಚಿತವಾಗಿದೆ ಹಾಗೂ ಶ್ಲಾಘನೀಯ ಅವರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಪರವಾಗಿ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದು ತಿಳಿಸಿದರು ಹಾಗೂ ಸೌಹಾರ್ದ ಸಹಕಾರಿಗಳು ಈ ಬ್ಯಾಂಕಿನಲ್ಲಿ ಅಸೊಸಿಯೇಟ್ ಸದಸ್ಯತ್ವ ಪಡೆದು ರಾಜ್ಯ ಮಟ್ಟದ ಸಹಕಾರಿ ಬ್ಯಾಂಕ ಸ್ಥಾಪನೆಗೆ ಸಹಕರಿಸಬೇಕು. ಎಂದು ತಿಳಿಸಿದರು. ಉಪಸ್ಥಿತರಿದ್ದ ಸೌಹಾರ್ದ ಸಹಕಾರಿಗಳು ಇದು ಒಳ್ಳೆಯ ಪ್ರಸ್ತಾವನೆ ಇದು ಬೇಗ ಫಲಕಾರಿಯಾಗುವಂತೆ ಪ್ರಯತ್ನ ಮಾಡಿ

ಎಂದು ತಿಳಿಸಿದರು. ಒಂದೆರಡು ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ತಾವು ಮಾನ್ವಿ ಪಟ್ಟಣ ಸಹಕಾರ ಬ್ಯಾಂಕಿನಲ್ಲಿ ಸಹ ಸದಸ್ಯತ್ವವನ್ನು ಪಡೆಯುವುದಾಗಿ ಘೋಷಿಸಿದರು.

**14. ಶಿವಮೊಗ್ಗ ಜಿಲ್ಲೆಯ ಕೊಡಚಾದ್ರಿ ಪರಿಸರದಲ್ಲಿ "ಅಂತರ ರಾಷ್ಟ್ರೀಯ ಸಹಕಾರಿ ಪರಿಸರ ಸ್ನೇಹಿ ಶಿಕ್ಷಣ ತರಬೇತಿ ಮತ್ತು ಸಂಶೋಧನಾ ಕೇಂದ್ರ "ವನ್ನು ಪ್ರಾರಂಭಿಸುವ ಕುರಿತು :** ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎ ಆರ್ ಪ್ರಸನ್ನಕುಮಾರ್ ಇವರು ಈ ವಿಷಯದ ಬಗ್ಗೆ ಶಿವಮೊಗ್ಗದ ಕೊಡಚಾದ್ರಿಯ ಉತ್ತಮ ಪರಿಸರದಲ್ಲಿ ಸಹಕಾ–ರಿಗಳಿಗಾಗಿ ಒಂದು ಅತ್ಯಂತ ಸುಸಜ್ಜಿತ ತರಬೇತಿ ಕೇಂದ್ರವನ್ನು ಪ್ರಾರಂಭಿಸುವುದರಿಂದ ಸಹಕಾರಿಗಳು ಉತ್ತಮ ಪರಿಸರದಲ್ಲಿ ತರಬೇತಿಯನ್ನು ಮಾಡುವುದಕ್ಕಾಗಿ ರೆಸಾರ್ಟಗಳನ್ನು ಹುಡುಕಿಕೊಂಡು ಹೋಗುವುದು ತಪ್ಪುತ್ತದೆ. ಸಹಕಾರಿ ಕ್ಷೇತ್ರದಲ್ಲಿಯೇ ಇಂತಹ ಉತ್ತಮ ಪರಿಸರವನ್ನು ಒದಗಿಸಿಕೊಡುವುದರಿಂದ ಸಹಕಾರ ಕ್ಷೇತ್ರದವರಿಗೆ ಹೆಚ್ಚಿನ ಅನುಕೂಲವಾಗುತ್ತದೆ ಈ ಬಗ್ಗೆ ಸಹಕಾರಿಗಳು ಉದಾರವಾಗಿ ತಮ್ಮ ನೆರವನ್ನು ನೀಡುವುದರಿಂದ ಈ ಕೇಂದ್ರವನ್ನು ಪ್ರಾರಂಭಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಭಾಗವಹಿಸಿದ್ದ ಪ್ರತಿನಿಧಿಗಳು ಇದೊಂದು ಉತ್ತಮ ಪ್ರಸ್ತಾವನೆಯಾಗಿದೆ. ಆದಷ್ಟು ಬೇಗನೆ ಇದನ್ನು ಕಾರ್ಯಗತ ಮಾಡಿರಿ. ನಾವೆಲ್ಲ ಸಹಕರಿಸುತ್ತೇವೆ ಎಂದರು.

**15. ಸೌಹಾರ್ದ ಸಹಕಾರಿಗಳಿಗೆ ಕಾಮನ್ ಸಾಫ್ಟ್‌ವೇರ್ ಸಿದ್ದಪಡಿಸಿ ಒದಗಿಸುವುದು :** ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಒಂದು ಕಾಮನ್ ಸಾಫ್ಟ್ ಅವಶ್ಯಕತೆಯ ಬಗ್ಗೆ ಹಾಗೂ ಅದರ ಅಳವಡಿಕೆಯ ಬಗ್ಗೆ ಎಂಬ ವಿಷಯದ ಬಗ್ಗೆ ಚಿಪ್ಸ್‌ಆಫ್ ಸಾಫ್ಟ್‌ವೇರ್ ಸಂಸ್ಥೆ, ಬೆಂಗಳೂರು ಇವರು ವಿವರಣೆ ನೀಡಿದರು.

ಈ ಬಗ್ಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಮಾತನಾಡಿ ಸಂಯುಕ್ತ ಸಹಕಾರಿಯು ಕಳೆದ ಕೆಲವು ದಿನಗಳಿಂದ ವರ್ಷಗಳಲ್ಲಿ ಸೌಹಾರ್ದ ಸಹಕಾರಿಗಳ ಬೇಡಿಕೆಯನ್ನು ಪರಿಗಣಿಸಿ ಹಲವಾರು ಸಾಫ್ಟ್ ವೇರ್ ಕಂಪನಿಗಳನ್ನು ಕರೆದು ಸಾಕಷ್ಟು ಪರಿಶೀಲನೆ ಮಾಡಿದಂತೆ 5 ಸಾಫ್ಟವೇರ್ ಕಂಪನಿಗಳನ್ನು ಆಯ್ಕೆ ಮಾಡಿ ಸೌಹಾರ್ದ ಸಹಕಾರಿಗಳು ಅದಕ್ಕೆ ಪಾವತಿಸಬಹುದಾದ ಮೊತ್ತವನ್ನು ನಿಗದಿಪಡಿಸಿ ಅದನ್ನು ಸೌಹಾರ್ದ ಸಹಕಾರಿಗಳು ಉಪಯೋಗಿಸ ಬಹುದೆಂದು ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ತಿಳಿಸಲಾಯಿತು. ಆದರೆ ಈ ಪ್ರಯತ್ನ ಅಷ್ಟು ಫಲಕಾರಿಯಾಗಲಿಲ್ಲ. ಎಲ್ಲ ಸೌಹಾರ್ದ ಸಹಕಾರಿಗಳು ತಮ್ಮದೇ ಆದ ಸಾಫ್ಟ ವೇರ್ ಗಳನ್ನು ಅಳವಡಿಸಿಕೊಂಡಿದ್ದಾರೆ. ಹೀಗಾಗಿ ಕಾಮನ್ ಸಾಫ್ಟ್‌ವೇರ ಬಗ್ಗೆ ತೀರ್ಮಾನಿಸುವುದು ಕಷ್ಟಸಾಧ್ಯವಾಗುತ್ತದೆ ಎಂದು ತಿಳಿಸಿದರು.

**16. ಸೌಹಾರ್ದ ಸಹಕಾರಿಗಳ ಅನುಕೂಲಕ್ಕಾಗಿ ಸೌಹಾರ್ದ ಕಾರ್ಪೋರೇಟ್ ಕಂಪನಿಯನ್ನು ಪ್ರಾರಂಭಿಸುವುದು :** ರಾಜ್ಯದ ಸೌಹಾರ್ದ ಸಹಕಾರಿಗಳ ಅಭಿವೃದ್ಧಿ ಹಾಗೂ ಕೆಲವು ಅನುಕೂಲತೆಗಳನ್ನು ಮಾಡಿಕೊಳ್ಳಲು ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುವ ಸಂಯುಕ್ತ ಸಹಕಾರಿಗಾಗಲಿ ಅಥವಾ ಜಿಲ್ಲಾ ಒಕ್ಕೂಟಗಳಿಗಾಗಲಿ ಸಾಧ್ಯವಾಗದ ಸಂದರ್ಭಗಳಲ್ಲಿ ಕಾರ್ಪೋರೇಟ್ ಕಂಪನಿ ಮಾಡಿ ಅದರ ಮೂಲಕ ಹೆಚ್ಚಿನ ಕಾರ್ಯಗಳನ್ನು ಮಾಡಬಹುದಾಗಿದೆ ಎಂಬ ವಿಷಯವನ್ನು ಚರ್ಚಿಸಿ ತೀರ್ಮಾನಿಸಬೇಕಾಗಿದೆ ಎಂದು ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ತಿಳಿಸಿದರು ಈ ಸೌಹಾರ್ದ ಸಹಕಾರಿ ಕಾರ್ಪೋರೇಟ್ ಕಂಪನಿಯನ್ನು ಹೇಗೆ ಸ್ಥಾಪಿಸಬೇಕು ಅದರ ರೂಪರೇಷೆಗಳ ಬಗ್ಗೆ ಶ್ರೀ ಬಾಲಸುಬ್ರಮಣ್ಯ, ಮಾನ್ಯ ಸನ್ನದು ಲೆಕ್ಕಪರಿಶೋಧಕರು, ಬೆಂಗಳೂರು ಹಾಗು ಶ್ರೀ ಮೋಹನ್, ಕಂಪನಿ ಕಾರ್ಯದರ್ಶಿ, ಬೆಂಗಳೂರು ಇವರು ವಿವರ ನೀಡಿದರು.


**17. ಗ್ರಾಹಕ ಸೇವೆಗಳ ಸರಬರಾಜು, ಪ್ರಿಂಟಿಂಗ ಮತ್ತು ಕೊರಿಯರ ಸೇವೆಗಳು :** ಸಹಕಾರಿಗಳಿಗೆ ಅಗತ್ಯವಾದ ಗ್ರಾಹಕ (Consumer) ಮತ್ತು ಪ್ರಿಂಟಿಂಗ್ ಸಾಮಾಗ್ರಿಗಳನ್ನು ಒಳಗೊಂಡಂತೆ ಪ್ರಿಂಟರ್, ಕಾಟ್ರೇಜ್ ಹಾಗು ಇತರೆ ಎಲ್ಲಾ ಅಗತ್ಯ ಸಾಮಾಗ್ರಿಗಳನ್ನು ಒದಗಿಸುವ ಕುರಿತು ಮತ್ತು ಕೋರಿಯರ್ ಸೇವೆಗಳನ್ನು ಪ್ರಾರಂಭಿಸುವ ಕುರಿತು ಶ್ರೀ ಶ್ರೀಧರ್. ಎನ್‌ರಾವ್, ಮಾನ್ಯ ಅಧ್ಯಕ್ಷರು, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೆಂಗಳೂರು ಇವರು ವಿಷಯ ಪ್ರಸ್ತಾವನೆ ಮಂಡಿಸುತ್ತ ಸೌಹಾರ್ದ ಸಹಕಾರಿಗಳ ಒಕ್ಕೂಟಗಳ ನೇತೃತ್ವದಲ್ಲಿ ಸೌಹಾರ್ದ ಸಹಕಾರಿಗಳಿಗೆ ಬೇಕಾಗುವ ಮುದ್ರಣ ಸ್ಟೇಶನರಿ, ಗ್ರಾಹಕ ವಸ್ತುಗಳ ಸರಬರಾಜುಗಳನ್ನು ಮಾಡಿದಲ್ಲಿ ಒಕ್ಕೂಟಗಳಿಗೆ ಉತ್ತಮ ಆದಾಯ ಮಾಡಿಕೊಳ್ಳಬಹುದಾಗಿದೆ. ಎಂದು ತಿಳಿಸಿದರು.

**20. ಸರ್ಕಾರದ ಇ–ಗರ್ವನೆನ್ಸ್ (E-Governance) ಸೇವೆಗಳ ಉಪಯೋಗ :** ಕರ್ನಾಟಕ ಸರಕಾರ ರಾಜ್ಯದಲ್ಲಿ ಇ ಗರ್ವನೆನ್ಸ್ ಎಂಬ ಇಲಾಖೆಯನ್ನು ತೆರೆಯಲಾಗಿದೆ. ಹೆಚ್ಚಿನ ಕೆಲಸ ಕಾರ್ಯಗಳನ್ನು ಇ ಗವರ್ನೆನ್ಸ ಮಾಡಲು ಅವಕಾಶವಿದೆ. ಕೆಲಸ ಕಾರ್ಯಗಳು ಪಾರದರ್ಶಕವಾಗುತ್ತವೆ. ವೇಗವಾಗಿ ಆಗುತ್ತವೆ. ವೃತ್ತಿಪರತೆಯನ್ನು ಬೆಳೆಸುತ್ತವೆ ಎಂಬ ಹಿನ್ನೆಲೆಯನ್ನು ಈ ವಿಷಯವನ್ನು ಪ್ರಸ್ತಾಪಿಸಲಾಗಿದೆ. ಇ ಗವರ್ನೆನ್ಸ ಮೂಲಕ ಲಭ್ಯವಿರುವ ಎಲ್ಲಾ ಸೇವೆಗಳನ್ನು ಕೈಗೊಳ್ಳುವದು ಮತ್ತು ಅವುಗಳನ್ನು ಸೌಹಾರ್ದ ಸಹಕಾರಿಗಳು ಹೇಗೆ ಉಪಯೋಗ ಮಾಡಿಕೊಳ್ಳಬೇಕು ಎಂಬ ಬಗ್ಗೆ ಕುರಿತು ಕರ್ನಾಟಕ ಸರ್ಕಾರ ಇ–ಗರ್ವನೆನ್ಸ್ ಇಲಾಖೆ ಅಧಿಕಾರಿಯಾದ ಶ್ರೀ ಅಭಿಷೇಕ್ ವಸಂತ ನಾಯಕ ಇವರು ಉಪನ್ಯಾಸ ನೀಡಿದರು.

**21. ಸಹಕಾರಿ ಶಿಕ್ಷಣ, ತರಬೇತಿ, ಪ್ರಚಾರ, ಸಂಶೋಧನೆ ಹಾಗೂ ಟಾಸ್ಕ್‌ಫೋರ್ಸ್ ಕಾರ್ಯಗಳ ನಿರ್ವಹಣೆ :** ಶ್ರೀ ಶರಣಗೌಡ ಜಿ ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ

ಸಂಯುಕ್ತ ಸಹಕಾರಿ ನಿ.,ಇವರು ಮಾತನಾಡುತ್ತ ಸಂಯುಕ್ತ ಸಹಕಾರಿ ಪ್ರಾರಂಭದಿಂದಲೂ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಉತ್ತಮ ಮಾರ್ಗದರ್ಶನ ನೀಡುವ ದೃಷ್ಟಿಯಿಂದ ಸಹಕಾರ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಪರಿಣಾಮಕಾರಿ ನಡೆಸುತ್ತ ಬಂದಿದೆ. ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳು ಅತ್ಯಂತ ಗುಣಮಟ್ಟದ್ದಾಗಿರುತ್ತವೆ ಎಂದು ಸಂಪನ್ಮೂಲ ವ್ಯಕ್ತಿಗಳು, ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸರಕಾರಿ ಅಧಿಕಾರಿಗಳು ಕೂಡ ಅಭಿಪ್ರಾಯ ವ್ಯಕ್ತ ಮಾಡುತ್ತಿರುತ್ತಾರೆ. ಪ್ರಸಕ್ತ ಡಿ.ಸಿ.ಬಿ.ಎಮ್ 4ನೇ ತಂಡ ಪ್ರಾರಂಭವಾಗಿ 531 ಅಭ್ಯರ್ಥಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಮುಂಬರುವ ದಿನಗಳಲ್ಲಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಇದರ ಪ್ರಯೋಜನ ಪಡೆಯಬೇಕು ಎಂದು ತಿಳಿಸಿದರು. ಮುಂದುವರೆದು ಮಾತನಾಡುತ್ತ ರಾಜ್ಯದ ಸಮಸ್ಯಾತ್ಮಕ ಸಹಕಾರಿಗಳು ಇನ್ನು ಮುಂದೆ ಬೆಳೆಯಬಾರದು ಈಗ ಸಮಸ್ಯೆಗಳು ಇದುವ ಸಹಕಾರಿಗಳನ್ನು ಗುರುತಿಸಿ ಅವರುಗಳಿಗೆ ಸಮಸ್ಯೆಯಿಂದ ಹೊರಬರಲು ಸಾಧ್ಯವಾಗುವಂತೆ ಮಾರ್ಗದರ್ಶನಮಾಡಲು ಟಾಸ್ಕ ಫೋರ್ಸ ರಚಿಸಲಾಗಿದೆ. ಸಂಯುಕ್ತ ಸಹಕಾರಿಯ ಹಿರಿಯ ಅಧಿಕಾರಿಗಳನ್ನು ಈ ಕಾರ್ಯಕ್ಕಾಗಿ ನೇಮಕ ಮಾಡಿ ಅವರುಗಳಿಗೆ ಜವಾಬ್ದಾರಿ ವಹಿಸಲಾಗಿದೆ. ಎಂದು ತಿಳಿಸಿದರು.

**ಸಮಾರೋಪ ಕಾರ್ಯಕ್ರಮ :**




ಸಮಾರೋಪ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಯವರು ವಹಿಸಿದ್ದರು. ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ತಿಮ್ಮಯ್ಯ ಶೆಟ್ಟಿ, ಶ್ರೀ ಗುರುನಾಥ ಜ್ಯಾಂತಿಕರ, ಶ್ರೀ ಬಿ.ಎಸ್.ಗುಂಡೂರಾವ ಶ್ರೀ ಪ್ರಸನ್ನಕುಮಾರ, ಶ್ರೀಮತಿ ಸರಸ್ವತಿ ಶ್ರೀ ಶ್ರೀಧರ ಹಾಗೂ ವದತವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ.ಜಿ.ಪಾಟೀಲ್ ರವರುಗಳು ಭಾಗವಹಿಸಿದ್ದರು

ಪ್ರಾರಂಭದಲ್ಲಿ ಸ್ವಾಗತ ಕಾರ್ಯಕ್ರಮವಾದ ಮೇಲೆ ಕಾರ್ಯಾಗಾರದಲ್ಲಿ ಭಾಗವಹಿಸಿದ ಅನೇಕರು ಕಾರ್ಯಕ್ರಮದ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತ ಪಡಿಸಿದರು. ಇಂತಹ ಕಾರ್ಯಕ್ರಮಗಳನ್ನು ವಿಭಾಗದ ಮೂಲಕ ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಎಲ್ಲ ಸೌಹಾರ್ದ ಸಹಕಾರಿಗಳನ್ನು ಕರೆದು ಮಾಡಿದರೆ ಸೌಹಾರ್ದ ಸಹಕಾರಿಗಳು ಸುಸ್ಥಿರ ಅಭಿವೃದ್ಧಿಯತ್ತ ಸಾಗುವುದು ಸಾಧ್ಯವಾಗುತ್ತದೆ ಹಾಗೂ ಜಿಲ್ಲಾ ಸಹಕಾರಿ ಒಕ್ಕೂಟಗಳು ಸುಸ್ಥಿರವಾಗಿ ಬೆಳೆಯುತ್ತವೆ.

ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಮಾತನಾಡಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟಗಳ ಸುಸ್ಥಿರ ಅಭಿವೃದ್ಧಿ ಚಿಂತನಾ ಕಾರ್ಯಾಗಾರದಲ್ಲಿ ಸಕ್ರೀಯವಾಗಿ ಭಾಗವಹಿಸಿದ ಎಲ್ಲ ಪ್ರತಿನಿಧಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತ ಈ ಕಾರ್ಯಾಗಾರದ ನಂತರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟಗಳು ಸಕ್ರೀಯವಾಗುವುದು ಅವಶ್ಯಕ. ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ ಇನ್ನೂ ಮುಂದೇ ಕೆಟ್ಟ ಸಹಕಾರಿಗಳು ಹುಟ್ಟಲೇಬಾರದು ಎಂಬ ನಿರ್ಣಯ ಮಾಡಿ ನಾವೆಲ್ಲರೂ ಕಾರ್ಯನಿರ್ವಹಿಸುವುದು ಅಗತ್ಯ. ಅದರಿಂದಾಗಿ ಸೌಹಾರ್ದ ಸಹಕಾರಿಯ ನಡೆ ಗುಣಮಟ್ಟದ ಕಡೆಗೆ ಎಂಬ ನಮ್ಮ ಧ್ಯೇಯ ಸಾರ್ಥಕವಾಗುತ್ತದೆ. ಈ ಎರಡು ದಿನಗಳಲ್ಲಿ ಇಲ್ಲಿ ಪ್ರಸ್ತಾಪಿಸಿದ ಎಲ್ಲ ವಿಷಯಗಳ ಅಳವಡಿಕೆಯ ಬಗ್ಗೆ ಚಿಂತನೆ ಮಾಡಿ ಕಾರ್ಯರೂಪಕ್ಕೆ ತರುವ ಜವಾಬ್ದಾರಿ ಬಗ್ಗೆ ಸೂಕ್ತ ಕ್ರಮವಿಡಲಾಗುವುದು ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ನಿರ್ದೇಶಕಿ ಶ್ರೀಮತಿ ಸರಸ್ವತಿಯವರು ವಂದನಾರ್ಪಣೆ ಮಾಡಿದರು.

## ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಿಗೆ ತರಬೇತಿ ಕಾರ್ಯಕ್ರಮ

### ಸೌಹಾರ್ದ ಸಹಕಾರಿಗಳ ಮೇಲೆ ಶಾಸನಾತ್ಮಕ ಕ್ರಮ ಜರುಗಿಸಲು ರಾಜಕೀಯ ಅಥವಾ ಯಾವುದೇ ಬಾಹ್ಯ ಒತ್ತಡಗಳಿಗೆ ಒಳಗಾಗಿ ನಿಷ್ಕ್ರೀಯತೆ ಹಾಗೂ ಅನಗತ್ಯ ವಿಳಂಬ ಸಲ್ಲದು – ಶ್ರೀ ಸಿ.ಎನ್. ಪರಶಿವಮೂರ್ತಿ

ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಿಗೆ ಶ್ರೀ ಸಿ.ಎನ್.ಪರಶಿವಮೂರ್ತಿ ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ) ಮೈಸೂರು ಇವರು ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಿಗೆ ಸೌಹಾರ್ದ ಸಹಕಾರಿಗಳಲ್ಲಿ ಅಧಿಕಾರ ದುರುಪಯೋಗ ಪಡಿಸಿಕೊಂಡು ಅವ್ಯವಹಾರ ಮಾಡಿದ ಸಂದರ್ಭಗಳಲ್ಲಿ ಸಂಯುಕ್ತ ಸಹಕಾರಿಯು ಜರುಗಿಸಬೇಕಾದ ಕ್ರಮಗಳ ಬಗ್ಗೆ ಆನ್‌ಲೈನ್‌ನಲ್ಲಿ ಉಪನ್ಯಾಸ ನೀಡಿದರು. ನಂತರ ನಡೆದ ಚರ್ಚೆಯಲ್ಲಿ ಶ್ರೀ ಪರಶಿವಮೂರ್ತಿಯವರು ನಿರ್ದೇಶಕರ ಅನೇಕ ಪ್ರಶ್ನೆಗಳಿಗೆ ಉತ್ತರ ನೀಡಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಹಾಗೂ ಈ ವ್ಯವಸ್ಥೆ ದೇಶಕ್ಕೆ ಮಾದರಿಯಾಗುವಂತೆ ಕಾರ್ಯನಿರ್ವಹಿಸಬೇಕೆಂದು ಸೂಚಿಸಿದರು. ಶ್ರೀ ಶರಣಗೌಡ ಜಿ. ಪಾಟೀಲರವರು ವಂದನಾರ್ಪಣೆ ಮಾಡಿದರು.

## "4ನೇ ತಂಡದ "ಸಹಕಾರ ಹಾಗೂ ಬ್ಯಾಂಕಿಂಗ್ ಮೆನೆಜ್‌ಮೆಂಟ್ ಡಿಪ್ಲೋಮಾ" (ಡಿ.ಸಿ.ಬಿ.ಎಮ್) 8 ಕೇಂದ್ರಗಳಲ್ಲಿ ಪ್ರಥಮ ಸಂಪರ್ಕ ವರ್ಗದ ಹಾಜರಾತಿ ವಿವರ ಹಾಗೂ ವರದಿ

| ಕ್ರಮ ಸಂಖ್ಯೆ | ಸಂಪರ್ಕ ವರ್ಗ ಕೇಂದ್ರ | ಅಭ್ಯರ್ಥಿಗಳ ಸಂಖ್ಯೆ | ಹಾಜರಾತಿ |
|---|---|---|---|
| 1 | ಬೆಂಗಳೂರು | 58 | 53 |
| 2 | ಶಿವಮೊಗ್ಗ | 49 | 46 |
| 3 | ಕಾರವಾರ | 40 | 40 |
| 4 | ಹೊಸಪೇಟೆ | 56 | 52 |
| 5 | ಪುತ್ತೂರು | 91 | 87 |
| 6 | ಚಿಕ್ಕೋಡಿ | 67 | 63 |
| 7 | ಮುಧೋಳ | 101 | 99 |
| 8 | ಬಳ್ಳಾರಿ | 69 | 66 |
| **ಒಟ್ಟು** | | **531** | **506** |

**ಬೆಂಗಳೂರು :** ದಿನಾಂಕ 19.02.2022 ಮತ್ತು 20.02.2022 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವತಿಯಿಂದ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸಿನ 4ನೇ ತಂಡದ 1ನೇ ಸಂಪರ್ಕವರ್ಗ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುಂಡುರಾವ್ ಬಿ.ಎಸ್ ರವರು ವಹಿಸಿದ್ದರು. ಉದ್ಘಾಟಕರಾಗಿ ಶ್ರೀ ಎಂ.ಪಿ ಮಂಜುನಾಥ, ಸಹಕಾರಿಗಳ ಉಪ ನಿಬಂಧಕರು, ಬೆಂಗಳೂರು ಇವರು ಆಗಮಿಸಿದ್ದರು. ದೀಪವನ್ನು ಪ್ರಜ್ವಲಿಸುವ ಮೂಲಕ ಉದ್ಘಾಟನೆಯನ್ನು ಉದ್ಘಾಟಕರು ಹಾಗೂ ವೇದಿಕೆಯ ಮೇಲಿದ್ದ ಎಲ್ಲಾ ಅತಿಥಿ ಗಣ್ಯರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಬೆಂಗಳೂರು ನಗರ, ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೆಂಗಳೂರು, ಇದರ ಅಧ್ಯಕ್ಷರಾದ ಶ್ರೀ ಶ್ರೀಧರ್ ಎನ್ ರಾವ್ ಮತ್ತು ಸೌಹಾರ್ದ ಸಹಕಾರಿ ದಾವಾ ಪಂಚಾಯಿತಿ ನ್ಯಾಯಾಲಯದ ಪೀಠಾಧಿಕಾ–ರಿಗಳಾದ ಶ್ರೀ ಪ್ರೇಮಾನಂದ ರವರು ಭಾಗವಹಿಸಿದ್ದರು.

ಮಾನ್ಯ ತರಬೇತಿ ಅಧಿಕಾರಿಗಳಾದ ಶ್ರೀ ವಿ ಜೆ ಕಾರಕೂನ್ ರವರು, ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕ ಮಾತನಾಡಿದರು. ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎಸ್ ಆರ್ ಸಿದ್ದಾಂತಿ ಉಪಸ್ಥಿತರಿದ್ದರು. ಸ್ವಾಗತ ಮತ್ತು ಕಾರ್ಯಕ್ರಮವನ್ನು ಬೆಂಗಳೂರು ನಗರ ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ.ಎಮ್ ನೆರವೇರಿಸಿದರು. ಕಾರ್ಯಕ್ರಮದ ವಂದನಾರ್ಪಣೆಯನ್ನು ವ್ಯವಸ್ಥಾಪಕರಾದ ಶ್ರೀ ಪಾಲ್‌ರಾಜ್ ರವರು ಮಾಡಿದರು.

**ಶಿವಮೊಗ್ಗ :** ದಿನಾಂಕ 19.02.2022 ಮತ್ತು 20.02.2022 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವತಿಯಿಂದ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸಿನ 4ನೇ ತಂಡದ 1ನೇ ಸಂಪರ್ಕವರ್ಗ ಕಾರ್ಯಕ್ರಮದ ಉದ್ಘಾಟನಾ ಕಾರ್ಯಕ್ರಮವನ್ನು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ,. ಬಾಲರಾಜು ಅರಸು ರಸ್ತೆ, ಶಿವಮೊಗ್ಗ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಚನ್ನವೀರಪ್ಪ ರವರು, ಅಧ್ಯಕ್ಷರು, ಶಿವಮೊಗ್ಗ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ನೆರವೇರಿಸದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಎ.ಆರ್ ಪ್ರಸನ್ನ ಕುಮಾರ್ ರವರು, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಸುರೇಶ್ ರವರು, ಉಪಾಧ್ಯಕ್ಷರು, ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ,. ಶಿವಮೊಗ್ಗ, ಶ್ರೀ ಶರಣಗೌಡ ಜಿ. ಪಾಟೀಲ ಇವರು ಭಾಗವಹಿಸಿದ್ದರು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ರವೀಂದ್ರನಾಥ್ ರವರು ಭಾಗವಹಿಸಿದ್ದರು. ಕಾರ್ಯಕ್ರಮದ ಸ್ವಾಗತ ಕಾರ್ಯಕ್ರಮವನ್ನು ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ರವರು ನೆರವೇರಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ರವರು ನೆರವೇರಿಸಿದರು. 49 ಪ್ರತಿನಿಧಿಗಳಲ್ಲಿ ಒಟ್ಟು 46 ಪ್ರತಿನಿಧಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

**ಕಾರವಾರ :** ಸಂಯುಕ್ತ ಸಹಕಾರಿಯ ವತಿಯಿಂದ 4ನೇ ತಂಡದ ಡಿಸಿಬಿಎಂ ಕೋರ್ಸನ ಸಂಪರ್ಕ ತರಗತಿಗಳ ಉದ್ಘಾಟನೆಯನ್ನು ದಿನಾಂಕ 19.02.2022 ಶನಿವಾರ ದಂದು ಸೆಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಇದರ ಫೀನಿಕ್ಸ್ ಪ್ಯಾರಾಡಾಯಿಸ್ ಕಾರವಾರ ಇಲ್ಲಿ ನಡೆಯಿತು. ಉದ್ಘಾಟನೆಯನ್ನು ಶ್ರೀಮತಿ ಎಸ್.ಜಿ.ಬಂಟ್, ಸಹಕಾರಿ ಸಂಘಗಳ ಸಹಾಯಕ ನಿಬಂಧಕರು ಕಾರವಾರ ಇವರು ನೆರೆವೇರಿಸಿದರು. ಅಧ್ಯಕ್ಷತೆಯನ್ನು ಶ್ರೀಮತಿ ಸರಸ್ವತಿರವರು ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ. ಬೆಂಗಳೂರು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ರೋಜಲಿನ್ ಫೆರ್ನಾರ್ಂಡಿಸ್ ಅಧ್ಯಕ್ಷರು ಸೆಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಸಹಕಾರಿ ಕಾರವಾರ ಇವರು ಭಾಗವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ ಶ್ರೀ ಜಿ.ಕೆ.ರಾಮಪ್ಪ, ಮಾನ್ಯ ಉಪನಿರ್ದೇಶಕರು(ನಿವೃತ್ತ), ಲೆಕ್ಕಪರಿಶೋಧನಾ ಇಲಾಖೆ, ಶಿರಸಿ ಹಾಗೂ ಶ್ರೀ ರಘುನಂದನ್ ಕೆ, ಮಾನ್ಯ ಉಪಪ್ರಧಾನ ವ್ಯವಸ್ಥಾಪಕರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಶ್ರೀ ಶಿವಕುಮಾರ ಬಿರಾದಾರ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು(ಪ್ರ) ಮತ್ತು ಮಾನ್ಯ ವ್ಯವಸ್ಥಾಪಕರಾದ ಶ್ರೀ ಗಂಗಾರಾಮ ಕೋಳಾಪ್ಪೆ ಇವರು ಉಪಸ್ಥಿತರಿದ್ದರು. ಜಿಲ್ಲಾ ಸಂಯೋಜ–ಕರಾದ ಶ್ರೀ ಸಂತೋಷ್ ಕುಮಾರ್ ರವರು ಕಾರ್ಯಕ್ರಮದ ನಿರೂಪಣೆಯನ್ನು ಮಾಡಿದರು

**ಬಳ್ಳಾರಿ :** ದಿನಾಂಕ 26.02.2022 ಮತ್ತು 27.02.2022 ರಂದು ಬಳ್ಳಾರಿಯ ಪೋಲಿಸ್ ಜಿಮ್ಖಾನ್ ತರಬೇತಿ ಕೇಂದ್ರ ಬಳ್ಳಾರಿ. ಇಲ್ಲಿ ಡಿಸಿಬಿ–ಎಮ್ ಕೋರ್ಸಿನ ಎರಡು ದಿನದ ಸಂಪರ್ಕ ವರ್ಗ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ಬೆಳಗ್ಗೆ ಎಲ್ಲಾ ವಿದ್ಯಾರ್ಥಿಗಳ ಉಪಹಾರ ಆದನಂತರ ಬೆಳಗ್ಗೆ 10.30 ಕ್ಕೆ ಉದ್ಘಾಟನಾ ಕಾರ್ಯಕ್ರಮದ ಅಥಿತಿಗಳು ಆಗಮಿಸಿದ್ದ–ರಿಂದ ವೇದಿಕೆ ಕಾರ್ಯಕ್ರಮ ಪ್ರಾರಂಭಿಸಲಾಯಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರು ಹಾಗೂ ಪ್ರಸ್ತುತ ನಿರ್ದೇಶಕರಾದ ಮಾನ್ಯ ಶ್ರೀ ವಿಶ್ವನಾಥ ಹಿರೇಮಠ, ನೆರವೆರಿಸಿದರು. ಉದ್ಘಾಟರಾಗಿ ಬಿಐಟಿಎಂ ಬಳ್ಳಾರಿ ಇದರ ನಿರ್ದೇಶಕರಾದ ಶ್ರೀ ಯಶವಂತ ಭೂಪಾಲ್, ಸುಕೋ ಸೌಹಾರ್ದ ಸಹಕಾರಿ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಗಿರೀಶ, ಸಂಯುಕ್ತ ಸಹಕಾರಿಯ ಉಪಪ್ರದಾನ ವ್ಯವಸ್ಥಾಪಕರಾದ ಶ್ರೀ ರಘುನಂದನ್ ಕೆ ಹಾಗೂ ಕಲಬುರಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ್ ಹೆಚ್ ಇವರು ನೇರವೆರಿಸಿದರು. ಬಳ್ಳಾರಿ ಕೇಂದ್ರದ ಸಂಪರ್ಕವರ್ಗದ ಮೇಲುಸ್ತುವಾರಿಯಾದ ಶ್ರೀ ರಾಜಶೇಖರ್ ಹೆಚ್ ವೇದಿಕೆ ಮೇಲೆ ಉಪಸ್ಥಿತರಿದ್ದರು. ಸ್ವಾಗತವನ್ನು ಜಿಲ್ಲಾ ಸಂಯೋಜಕರಾದ ಶ್ರೀ ರವಿಕುಮಾರ ಕೆ ಆರ್ ರವರು ಅಥಿತಿ ಗಣ್ಯರನ್ನು ಹಾಗೂ ವಿದ್ಯಾರ್ಥಿಗಳನ್ನು ಸ್ವಾಗತಿಸಿದರು, ಪ್ರಾಸ್ತಾವಿಕ ನುಡಿಯನ್ನು ವರ್ಗದ ಮೇಲುಸ್ತುವಾರಿಯಾದ ಶ್ರೀ ರಾಜಶೇಖರ್ ಹೆಚ್ ಮಾತನಾಡಿ ಎರಡು ದಿನಗಳ ವರ್ಗದ ಕಾರ್ಯಚಟುವಟಿಕೆ ತರಗತಿಗಳ ಕುರಿತು, ಮುಂಬರುವ ತರಗತಿಗಳು ಹಾಗೂ ಅದ್ಯಯನ ವರದಿ ಬಗ್ಗೆ ಮಾಹಿತಿ ನೀಡಿ ಎರಡುದಿನಗಳ ವರ್ಗದಲ್ಲಿ ಸಂಪೂರ್ಣವಾಗಿ ಭಾಗವಹಿಸಿ ಲಾಭ ಪಡೆದುಕೊಳ್ಳಬೇಕೆಂದು ವಿನಂತಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿಕೊಂಡಿರುವ ಶ್ರೀ ವಿಶ್ವನಾಥ ಹಿರೇಮಠ ರವರು ಅಧ್ಯಕ್ಷೀಯ ಭಾಷಣ ಮಾಡುತ್ತ ಸಂಯುಕ್ತ ಸಹಕಾರಿಯು ತನ್ನ ಸದಸ್ಯ ಸಹಕಾರಿಗಳಿಗೆ ಹಾಗೂ ಸಹಕಾರಿಯ ಸಿಬ್ಬಂದಿಗಳಿಗೆ ಸಹಕಾರ ಕ್ಷೇತ್ರದ ಬೆಳವಣಿಗೆ ಬಗ್ಗೆ ಮಾಹಿತಿ ನೀಡುವುದರ ಮುಖಾಂತರ ಸಹಕಾರಿಗಳ ಬೆಳವಣಿಗೆಗೆ ಸಿಬ್ಬಂದಿಗಳ ಕಾರ್ಯಕ್ಷಮತೆ ಹೆಚ್ಚಿಸಲು ಹತ್ತು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮುಖಾಂತರ ಸಹಕರಿಸುತ್ತಿದೆ, ಅದೇ ರಿತಿ ಈ ರೀತಿಯ ಡಿಪ್ಲೋಮ ಕೋರ್ಸ್‌ಗಳನ್ನು ಪ್ರಾರಂಭಿಸುವುದರ ಮುಖಾಂತರ ಸಿಬ್ಬಂದಿಗಳಲ್ಲಿ ಜ್ಞಾನದ ಜೋತೆ ಕ್ಷಮತೆ ಹೆಚ್ಚಿಸುವುದರ ಮುಖಾಂತರ ಸಿಬ್ಬಂದಿಗಳ ಬೆಳವಣಿಗೆಗೆ ಕೊರ್ಸಗಳು ಪೂರಕವಾಗಿದೆ ಆದ್ದರಿಂದ ಈ ಕೊರ್ಸಿನ ಲಾಭ ಪಡೆದುಕೊಳ್ಳಬೇಕೆಂದು ವಿನಂತಿಸಿದರು. ಕೊನೆಯದಾಗಿ ವಂದನಾರ್ಪಣೆ ಹಾಗೂ ನಿರೂಪಣೆಯನ್ನು ರಾಯಚೂರು ಜಿಲ್ಲಾ ಸಂಯೋಜಕರಾದ ಶ್ರೀ ವೆಂಕಟೇಶ ರಾಠೋಡ ನೇರವೆರಿಸಿದರು.

**ಚಿಕ್ಕೋಡಿ :** ಸಂಯುಕ್ತ ಸಹಕಾರಿಯ ವತಿಯಿಂದ 4ನೇ ತಂಡದ ಡಿಸಿಬಿಎಂ ಕೋರ್ಸನ ಸಂಪರ್ಕ ತರಗತಿಗಳ ಉದ್ಘಾಟನೆಯನ್ನು ದಿನಾಂಕ 26.02.2022 ಶನಿವಾರ ದಂದು ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಇದರ ಸಭಾ ಭವನದಲ್ಲಿ ನಡೆಯಿತು. ಉದ್ಘಾಟನೆಯನ್ನು ಶ್ರೀ ಜಯಾನಂದ ಜಾಧವ, ಮಾನ್ಯ ಅಧ್ಯಕ್ಷರು ಶ್ರೀ ಬೀರೇಶ್ವರ ಕ್ರೆಡಿಟ್ ಕೋ–ಆಪರೇಟಿವ ಲಿ., ಎಕ್ಸಂಬಾ (ಮಲ್ಟಿಸ್ಟೇಟ್) ಇವರು ನೆರೆವೇರಿಸಿದರು. ಅಧ್ಯಕ್ಷತೆಯನ್ನು ಶ್ರೀ ಜಗದೀಶ ಕವಟಗಿಮಠ ಮಾನ್ಯ ಉಪಾಧ್ಯಕ್ಷರು ಕ.ರಾ.ಸೌ.ಸಂ.ಸ.ನಿ. ಬೆಂಗಳೂರು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಲಕ್ಷ್ಮಣ ಮಾರುತಿ ಪವಾರ, ವೃತ್ತಿಪರ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ. ಬೆಂಗಳೂರು ಇವರು ಭಾಗವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ ಶ್ರೀ ಎಸ್. ಜಿ. ಕುಲಕರ್ಣಿ, ಶ್ರೀ ಆರ್. ಎಸ್. ಪ್ರಕಾಶ್ ಹಾಗೂ ಶ್ರೀ ಶ್ರೀಕಾಂತ ಬರುವೆ, ಉಪಪ್ರಧಾನ ವ್ಯವಸ್ಥಾಪಕರು ಟಾಸ್ಕ ಪೋರ್ಸ ವಿಭಾಗ ಬೆಳಗಾವಿ ಮತ್ತು ಕಲಬುರಗಿ ಪ್ರಾಂತ ಇವರುಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಶ್ರೀ ಬಸವರಾಜ ಹೊಂಗಲ, ಪ್ರಾಂತೀಯ ವ್ಯವಸ್ಥಾಪಕರು(ಪ್ರ) ಮತ್ತು ವ್ಯವಸ್ಥಾಪಕರಾದ ಶ್ರೀ ಗಂಗಾರಾಮ ಕೋಳಾಪ್ಪೆ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಜವಾಹಾರ್ ಮುಗ್ಗನವರ ರವರು ಉಪಸ್ಥಿತರಿದ್ದರು. ಶ್ರೀಮತಿ ಅಶ್ವಿನಿ ಕಮ್ಮಾರ ಸಹಾಯಕಿ ಬೆಳಗಾವಿ ಪ್ರಾಂತ ಇವರು ನಿರೂಪಣೆಯನ್ನು ಮಾಡಿದರು.

**ಮುಧೋಳ** : ಸಂಯುಕ್ತ ಸಹಕಾರಿಯ ವತಿಯಿಂದ 4ನೇ ತಂಡದ ಡಿಸಿಬಿಎಂ ಕೋರ್ಸನ ಸಂಪರ್ಕ ತರಗತಿಗಳ ಉದ್ಘಾಟನೆಯನ್ನು ದಿನಾಂಕ 26.02.2022 ಶನಿವಾರ ದಂದು ವಿಜಯ ಸೌಹಾರ್ದ ಸಹಕಾರಿ ಮುಧೋಳದಲ್ಲಿ ನಡೆಯಿತು. ಉದ್ಘಾಟನೆಯನ್ನು ಶ್ರೀ ಹನುಮಂತ ನಿರಾಣಿ, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಶ್ರೀ ಜಿ ಎನ್ ಪಾಟೀಲ, ಮಾನ್ಯ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ. ಬೆಂಗಳೂರು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಶರಣಗೌಡ ಜಿ ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ. ಬೆಂಗಳೂರು ಹಾಗೂ ಶ್ರೀಮತಿ ಜೆ ಜಿ ಸವದಿ ಮಾನ್ಯ ಸಹಕಾರ ಅಭಿವೃದ್ಧಿ ಅಧಿಕಾರಿಗಳು ಮುಧೋಳ ಇವರು ಭಾಗವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಶಶಿಧರ ಎಲೆ, ಶ್ರೀ ವೈ ವಿ ಗುಂಡೂರಾವ, ಶ್ರೀ ಸುನೀಲ ಪತ್ತಾರ್ ಹಾಗೂ ಶ್ರೀ ಅಮೃತ ಜೋಶಿ, ಶ್ರೀ ಮಹಾಂತಪ್ಪ ಮುದ್ದಡಗಿ ಇವರುಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಶ್ರೀ ವಿ ಜೆ ಕಾರಕೂನ್, ತರಬೇತಿ ಅಧಿಕಾರಿ ಅವರು ಉಪಸ್ಥಿತರಿದ್ದರು.

ಜಿಲ್ಲಾ ಸಂಯೋಜಕರಾದ ಶ್ರೀ ನಾಗರಾಜ ಜಿ ಎಚ್, ಟಾಸ್ಕ ಪೋರ್ಸ ವಿಭಾಗ ಇವರು ನಿರೂಪಣೆಯನ್ನು ಮಾಡಿದರು.

---

**ಹೊಸಪೇಟೆ** : ದಿನಾಂಕ 19.02.2022 ಮತ್ತು 20.02.2022 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವತಿಯಿಂದ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸಿನ 4ನೇ ತಂಡದ 1ನೇ ಸಂಪರ್ಕವರ್ಗ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರು ಹಾಗೂ ಪ್ರಸ್ತುತ ನಿರ್ದೇಶಕರಾದ ಮಾನ್ಯ ಶ್ರೀ ವಿಶ್ವನಾಥ ಹಿರೇಮಠ, ಉದ್ಘಾಟಕರಾಗಿ ಬಳ್ಳಾರಿ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರಾದ ಮಾನ್ಯ ಶ್ರೀ ಮುಡಂಲಿಕ ಸಾದುರೆ, ಮುಖ್ಯ ಅತಿಥಿಯಾಗಿ ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರಾದ ಹಾಗೂ ಹೊಸಪೇಟೆ ನಗರ ಸಭೆಯ ಉಪಾದ್ಯಕ್ಷರಾದ ಮಾನ್ಯ ಶ್ರೀ ಎಲ್–ಎಸ್ ಆನಂದ, ಸಂಪನ್ಮೂಲ ವ್ಯಕ್ತಿಗಳಾದ ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ, ಹೊಸಪೇಟೆ ಕೇಂದ್ರದ ಸಂಪರ್ಕವರ್ಗದ ಮೇಲುಸ್ತುವಾರಿಯಾದ ಶ್ರೀ ಸೂರ್ಯಕಾಂತ ರ್‍ಯಾಕಲೆ ವೇದಿಕೆ ಮೇಲೆ ಉಪಸ್ಥಿತರಿದ್ದರು. 58 ಪ್ರತಿನಿಧಿಗಳಲ್ಲಿ ಒಟ್ಟು 48 ಪ್ರತಿನಿಧಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

---

**ಪುತ್ತೂರು** : ದಿನಾಂಕ 26.02.2022 ಮತ್ತು 27.02.2022 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವತಿಯಿಂದ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸಿನ 4ನೇ ತಂಡದ 1ನೇ ಸಂಪರ್ಕವರ್ಗ ಕಾರ್ಯಕ್ರಮದ ಉದ್ಘಾಟನೆಯನ್ನು ಸರಸ್ವತಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್ ಆರ್ ಸತೀಶ್ಚಂದ್ರ ರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ ರವರು ವಹಿಸಿದರು. ಮುಖ್ಯ ಅಥಿತಿಗಳಾಗಿ ಸಂಯುಕ್ತ ಸಹಕಾರಿಯ ವೃತ್ತಿಪರ ನಿರ್ದೇಶಕರಾದ ಶ್ರೀ ಬಿ ಸದಾಶಿವ ಶೆಟ್ಟಿ, ಶ್ರೀ ಕೆ.ಎಸ್ ಬಾಲಸುಬ್ರಮಣ್ಯ ಮಾನ್ಯ ಉಪನಿರ್ದೇಶಕರು (ಪ್ರ) ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ. ಶ್ರೀಮತಿ ಸುಕನ್ಯಾ ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು (ಪ್ರ) ಪುತ್ತೂರು. ಶ್ರೀ ಎಂ ರಮೇಶ್ಚಂದ್ರ ಅಧ್ಯಕ್ಷರು, ವಿವೇಕಾನಂದ ಕನ್ನಡ ಮಾಧ್ಯಮ ಶಾಲೆ, ತೆಂಕಿಲಾ, ಪುತ್ತೂರು ಇವರು ಭಾಗವಹಿಸಿದರು.

---

## ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಆಯ್ಕೆ

**ಭದ್ರಾ ಸೌಹಾರ್ದ ಪತ್ತಿನ ಸಹಕಾರಿ ನಿ., ನರಸಿಂಹರಾಜಪುರ, ಚಾಮರಾಜನಗರ,**



ಶ್ರೀ ಉಪೇಂದ್ರ ಬಿ.ವಿ
ಅಧ್ಯಕ್ಷರು



ಶ್ರೀ ಮೋಹನ ಬಿ.ಪಿ
ಉಪಾಧ್ಯಕ್ಷರು

**ವಿಜಯಪುರ** : ದಿ ಜುಮನಾಳ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿ ಪದಾಧಿಕಾರಿಗಳ ಚುನಾವಣೆಯು ದಿನಾಂಕ 31 ಡಿಸೆಂಬರ್ 2021 ರಂದು ಜರುಗಿದ್ದು ಇದರ ಅಧ್ಯಕ್ಷರಾಗಿ ಶ್ರೀ ಯಮನಪ್ಪ ಯ. ಸಾತಿಹಾಳ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಸಿದ್ದಪ್ಪ ನಾ. ಗೋಡೆಕಾರ ಇವರುಗಳು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

## ಭೇಟಿ

**ಬಾದಾಮಿ** : ದಿನಾಂಕ 18.02.2022 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿರವರು ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ಸೌಹಾರ್ದ ಸಹಕಾರಿ ಬಾದಾಮಿ ಸಹಕಾರಿಗೆ ಭೇಟಿ ನೀಡಿ ಆಡಳಿತ ಮಂಡಲಿ ಸದಸ್ಯರಿಗೆ ಸಹಕಾರಿಯ ಪ್ರಗತಿ ಕುರಿತು ಅಗತ್ಯ ಮಾರ್ಗದರ್ಶನ ಮಾಡಿದರು.

**ಶಿವಮೊಗ್ಗ** : ದಿನಾಂಕ 19.02.2022ರಂದು ಸಮೃದ್ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಶಿವಮೊಗ್ಗ ಕಛೇರಿಗೆ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಭೇಟಿ ನೀಡಿ ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಕರುಗಳು ಉಪಸ್ಥಿತರಿದ್ದರು.

**ಹಾಸನ** : ದಿನಾಂಕ 26.02.2022 ರಂದು ಆದರ್ಶ ಸೌಹಾರ್ದ ಸಹಕಾರಿ ನಿ., ದೇವನಗರಿ ಸೌಹಾರ್ದ ಸಹಕಾರಿ ಮತ್ತು ಕರ್ನಾಟಕ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಗದಗ ಜಿಲ್ಲೆ ಇವುಗಳ ಆಡಳಿತ ಮಂಡಳಿ ಸದಸ್ಯರು ಸಹನಾ ವಿವಿದೊದ್ದೇಶ ಸೌಹಾರ್ದ ಸಹಕಾರಿ ನಿ., ಹಾಸನ ಇದರ ಕಛೇರಿಗೆ ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಮಾಹಿತಿಯನ್ನು ಪಡೆದರು.

# 4ನೇ ತಂಡದ ಡಿ.ಸಿ.ಬಿ.ಎಂ 8 ಕೇಂದ್ರಗಳ ಉದ್ಘಾಟನಾ ಕಾರ್ಯಕ್ರಮದ ಫೋಟೋಗಳು



ಬೆಂಗಳೂರು


ಶಿವಮೊಗ್ಗ


ಕಾರವಾರ


ಬಳ್ಳಾರಿ


ಬೆಳಗಾವಿ



ಮುಧೋಳ


ಪುತ್ತೂರು


ಹೊಸಪೇಟೆ

## ಇ-ಸ್ಟಾಂಪ್ ಕಾಗದವನ್ನು ವಿತರಿಸುವ ಸಮಯದಲ್ಲಿ ಸಹಕಾರಿಗಳು ಪಾಲಿಸಬೇಕಾದ ಕೆಲವು ಪ್ರಮುಖ ವಿಷಯಗಳು.

1. ಕಡ್ಡಾಯವಾಗಿ ಎರಡು ಕಂಪ್ಯೂಟರ್‌ಗಳನ್ನು ಬಳಸುವುದು, ಕಂಪ್ಯೂಟರ್ ತಂತ್ರಾಂಶ windows-10 ಮತ್ತು 64 bit ಅನ್ನು ಅಳವಡಿಸಿಕೊಳ್ಳಬೇಕು ಹಾಗೂ ಡಾಟ್ ನೆಟ್ ಫ್ರೇಮ್‌ವರ್ಕ್ 4.8 ಮೇಲೆ ಇರತಕ್ಕದ್ದು.
2. ಇ-ಸ್ಟಾಂಪ್ ಪ್ರಿಂಟ್ ಕೊಡಲು ಗೂಗಲ್ ಕ್ರೋಮ್ ಬ್ರೌಸರ್‌ಅನ್ನು ಮಾತ್ರ ಬಳಸುವುದು.
3. ಸಂಯುಕ್ತ ಸಹಕಾರಿ ತಿಳಿಸಿದ ಪ್ರಿಂಟರ್‌ಅನ್ನು USB ಕೇಬಲ್ ಮೂಲಕ ಸೂಪರ್ ವೈಸರ್ ಬಳಸುವ ಕಂಪ್ಯೂಟರ್‌ಗೆ ಕನೆಕ್ಟ್ ಮಾಡಿರಬೇಕು.
4. 15 ದಿನಕ್ಕೊಮ್ಮೆ ತಮ್ಮ ಗೂಗಲ್ ಕ್ರೋಮ್‌ನಲ್ಲಿ ಬ್ರೌಸಿಂಗ್ ಡಾಟ/ ಹಿಸ್ಟರಿ ಹಾಗೂ ಕುಕ್ಕಿಸ್‌ಅನ್ನು ತೆರವುಗೊಳಿಸುವುದು, ನಂತರ ಕಂಪ್ಯೂಟರನ್ನು ರಿಸ್ಟಾರ್ಟ್ ಮಾಡಿ ಲಾಗಿನ್ ಮಾಡುವುದು.
5. ಪಾಸ್‌ವರ್ಡ ರೀಸೆಟ್ ಹಾಗೂ ಎರರ್ ರಿಪೋರ್ಟ್‌ಗಾಗಿ estamppassword.error@souharda.coop, ಖಾತೆಗಳ ಶಿಲ್ಕಿಗಾಗಿ estampaccount@souharda.coop ಹಾಗೂ ಹೊಸ ಎಸಿಸಿಗಳ ಮತ್ತು ಹೆಚ್ಚುವರಿ ಐಡಿಗಳ ಬಗ್ಗೆ ತಿಳಿಯಲು estampid@souharda.coop ಈ ಇ-ಮೇಲ್ ವಿಳಾಸಕ್ಕೆ ಮಿಂಚಂಚೆ ಕಳುಹಿಸುವ ಮೂಲಕ ತಾವು ಮಾಹಿತಿಯನ್ನು ವಿಚಾರಿಸಬಹುದು.
6. ಇ-ಸ್ಟಾಂಪ್ ಮುದ್ರಿಸಲು ಸದ್ಯ ಮಾರುಕಟ್ಟೆಯಲ್ಲಿ ಲಭ್ಯವಿರುವ ಪ್ರಿಂಟರ್ Canon LBP226DW,
7. ಎಸಿಸಿಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳು ತಮ್ಮ ಐಡಿ ಮತ್ತು ಗುಪ್ತಸಂಖ್ಯೆಯನ್ನು ಬೇರೆಯವರೊಂದಿಗೆ ಹಂಚಿಕೊಳ್ಳುವಂತಿಲ್ಲ,
8. ಸಂಯುಕ್ತ ಸಹಕಾರಿಯ ದೂರವಾಣಿ ಸಂಖ್ಯೆ: 080-23378375-80,
9. Password reset form, Application for new ACC ID Creation, Additional ID Creation form, ID Deactivation form ಈ ಅರ್ಜಿಗಳು ಸಂಯುಕ್ತ ಸಹಕಾರಿಯ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತವೆ,
10. ಹಣ ವರ್ಗಾಯಿಸುವ ಸಹಕಾರಿಗಳು ಸಂಯುಕ್ತ ಸಹಕಾರಿ ನೀಡಿರುವ Virtual Account Number ಬಳಸಿ ಹಣ ವರ್ಗಾಯಿಸುವುದು.

## ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆ



**ಗದಗ :** ದಿನಾಂಕ 03.02.2022 ಐ.ಎಂ.ಎ. ಸಭಾ ಭವನ ಗದಗದಲ್ಲಿ, ಗದಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಹಮ್ಮಿಕೊಳ್ಳಲಾಗಿದ್ದು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಉದ್ಘಾಟನೆಯನ್ನು ಶ್ರೀ ನಾಗರಾಜ್ ಆರ್ ದೇಶಪಾಂಡೆ, ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಎಫ್ ಆರ್ ಮುಂದಿನ ಮನಿ, ಮಾನ್ಯ ಸಹಾಯಕ ಲೆಕ್ಕ ಪರಿಶೋಧನಾ ನಿರ್ದೇಶಕರು (ನಿವೃತ್ತ) ಗದಗ, ಶ್ರೀ ಜಿ.ಕೆ. ರಾಮಪ್ಪ, ಮಾನ್ಯ ನಿವೃತ್ತ ಲೆಕ್ಕ ಪರಿಶೋಧನಾ ಉಪ ನಿರ್ದೇಶಕರು ಹಾಗೂ ಸಂಪನ್ಮೂಲಗಳ ವ್ಯಕ್ತಿಗಳು, ಇವರು ಆರ್ಥಿಕ ಸಭಲತೆಯ ಮಾನ ದಂಡಗಳು ಮತ್ತು ಲೆಕ್ಕ ಪರಿಶೋಧನೆಗೆ ಆರ್ಥಿಕ ತಃಖ್ತೆಗಳನ್ನು ಸಿದ್ಧಪಡಿಸುವುದು ಹಾಗೂ ಲೆಕ್ಕಪತ್ರಗಳ ನಿರ್ವಹಣೆ ಕುರಿತು ಉಪನ್ಯಾಸ ನೀಡಿದರು.

ಮಧ್ಯಾಹ್ನದ ಅವಧಿಗೆ, ಬಸವರಾಜ.ಎಸ್. ಜಿಲ್ಲಾ ಸಂಯೋಜಕರು ಧಾರವಾಡ-ಗದಗ ಜಿಲ್ಲೆ ಇವರು ಮುಖ್ಯ ಕಾರ್ಯನಿರ್ವಾಹಕರ ಜವಾಬ್ದಾರಿ ಮತ್ತು ಕರ್ತವ್ಯಗಳ ಕುರಿತು ಉಪನ್ಯಾಸ ನೀಡಿದರು. ಸದರಿ ಸಭೆಯಲ್ಲಿ 40 ಸೌಹಾರ್ದ ಸಹಕಾರಿಗಳಿಂದ 52 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

## ಬಸವ ಬಳಗ ಸೌಹಾರ್ದ ಸಹಕಾರಿ ನಿರ್ದೇಶಕರ ಸಭೆ

**ಹುಬ್ಬಳ್ಳಿ :** ಬಸವ ಬಳಗ ಸೌಹಾರ್ದ ಸಹಕಾರಿ ನಿ., ಹುಬ್ಬಳ್ಳಿ ಇದರ ಠೇವಣಿದಾರರ ದೂರಿನ ಮೇರೆಗೆ ಹೋಟೆಲ್ ಡೆನಿಸನ್ಸ್ ಹುಬ್ಬಳ್ಳಿಯಲ್ಲಿ ಉಪಾಧ್ಯಕ್ಷರಾದ ಶ್ರೀ ಜಗದೀಶ್ ಕವಟಗಿಮಠ ರವರ ಅಧ್ಯಕ್ಷತೆಯಲ್ಲಿ ಸದರಿ ಸಹಕಾರಿಯ ಆಡಳಿತ ಮಂಡಲಿ ಸಭೆ ಕರೆದು ಠೇವಣಿದಾರರ ಠೇವಣಿ ಹಣ ಮರಳಿಸಲು ತಿಳಿಸಲಾಗಿದೆ.



## ಉದ್ಘಾಟನೆ

**ಬಾದಾಮಿ :** ದಿನಾಂಕ 18.02.2022 ರಂದು ಬಾದಾಮಿಯಲ್ಲಿ ಶ್ರೀ ಗುರು ಸದಾಶಿವ ಸೌಹಾರ್ದ ಸಹಕಾರಿಯ ಮಹಿಳಾ ಶಾಖೆಯ ಉದ್ಘಾಟನೆ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ನೆರವೇರಿಸಿದರು. ನಂತರ ಕುಳಗೇರಿ ಕ್ರಾಸ್ ಶಾಖೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠರವರು ನೆರವೇರಿಸಿದರು. ನಂತರ ಕಾರ್ಯಕ್ರಮದಲ್ಲಿ ಗಣ್ಯರನ್ನು ಸನ್ಮಾನಿಸಲಾಯಿತು.

## ಚಿಕ್ಕೋಡಿ ಪಟ್ಟಣದ ಸಹಕಾರಿಗಳ ಸಿಬ್ಬಂದಿಗಳಿಗಾಗಿ ತರಬೇತಿ ಕಾರ್ಯಕ್ರಮ



**ಚಿಕ್ಕೋಡಿ :** ದಿನಾಂಕ 12.02.2022 ರಂದು ಶ್ರೀ ಸಾಯಿ ಸೌಹಾರ್ದ ಸಭಾಭವನ ಚಿಕ್ಕೋಡಿ ಯಲ್ಲಿ ಚಿಕ್ಕೋಡಿ ತಾಲೂಕಿನ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗಾಗಿ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ರವರು ಸಿಬ್ಬಂದಿಗಳನ್ನು ಉದ್ದೇಶಿಸಿ ಅಗತ್ಯ ಮಾರ್ಗದರ್ಶನ ನೀಡಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಶ್ರೀ ಸುನೀಲ ಪತ್ತಾರ, ಮಾನ್ಯ ಹಿರಿಯ ಸಹಾಯಕ ನಿರ್ದೇಶಕರು, ಲೆಕ್ಕ ಪರಿಶೋಧನಾ ಇಲಾಖೆ, ಮುಧೋಳ ಇವರು ಲೆಕ್ಕಪತ್ರ ಮತ್ತು ದಾಖಲಾತಿಗಳ ನಿರ್ವಹಣೆ ವಿಷಯದ ಕುರಿತು ಮತ್ತು ಶ್ರೀ ವಿ.ಜಿ.ಕುಲಕರ್ಣಿ, ಮಾನ್ಯ ನಿವೃತ್ತ ಸಹಕಾರ ಅಭಿವೃದ್ಧಿ ಅಧಿಕಾರಿಗಳು, ಧಾರವಾಡ ಇವರು ಸಾಲ ವಸೂಲಾತಿ ವಿಷಯದ ಕುರಿತು ಉಪನ್ಯಾಸ ನೀಡಿದರು. ತರಬೇತಿಯಲ್ಲಿ 78 ಜನ ಸಿಬ್ಬಂದಿಗಳು ಭಾಗವಹಿಸಿದ್ದರು.

## ಸೌಹಾರ್ದ ಸಹಕಾರಿಗಳ ಗಮನಕ್ಕೆ

ಸೌಹಾರ್ದ ಸಹಕಾರಿಗಳ ನಡೆ ಗುಣಮಟ್ಟದ ಕಡೆ ಎಂಬ ಧ್ಯೇಯದಂತೆ ನಡೆಯುವುದಕ್ಕಾಗಿ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧಿಕಾರಿಗಳ ಗಮನಿಸಿದ ಕೆಲವು ಪ್ರಮುಖ ಅಂಶಗಳ ಬಗ್ಗೆ ಸೌಹಾರ್ದ ಸಹಕಾರಿಗಳು ತಕ್ಷಣದಲ್ಲಿ ಸೂಕ್ತ ಕ್ರಮ ಜರುಗಿಸುವಂತೆ ಕೋರಿದೆ.

1. **ಹೂಡಿಕೆಗಳ ಭದ್ರತೆ :** ಸಂಯುಕ್ತ ಸಹಕಾರಿಯ ವತಿಯಿಂದ ರಾಜ್ಯದ ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆಯ ಸಂದರ್ಭದಲ್ಲಿ ಕೆಲವು ಸೌಹಾರ್ದ ಸಹಕಾರಿಗಳು ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆ ಕಲಂ 18ನ್ನು ಉಲ್ಲಂಘಿಸಿ ಇತರೆ ಪ್ರಾಥಮಿಕ ಸಹಕಾರ ಸಂಘಗಳಲ್ಲಿ ಹಾಗೂ ಸಹಕಾರ ಸಕ್ಕರೆ ಕಾರ್ಖಾನೆಗಳಲ್ಲಿ ತೊಡಗಿಸಿರುವುದು ಕಂಡು ಬಂದಿದೆ. ಈ ರೀತಿ ಹೂಡಿಕೆ ಮಾಡಿರುವುದು ನಿಯಮ ಬಾಹಿರವಾಗಿರುತ್ತದೆ. ಇದರಿಂದಾಗಿ ಠೇವಣಿದಾರರಿಗೆ ಸಕಾಲದಲ್ಲಿ ಠೇವಣಿಗಳನ್ನು ವಾಪಸ್ಸು ನೀಡಲಾಗುತ್ತಿಲ್ಲ ಎಂದು ದೂರುಗಳು ಕೇಳಿಬರುತ್ತಿವೆ. ಆದ್ದರಿಂದ ಸೌಹಾರ್ದ ಸಹಕಾರಿಗಳು ತಕ್ಷಣ ಈ ಹೂಡಿಕೆಗಳನ್ನು ವಾಪಸ್ಸು ಪಡೆಯಲು ಹಾಗೂ ಕಡ್ಡಾಯವಾಗಿ ಭದ್ರತಾವಲಯದಲ್ಲಿ ಹೂಡಿಕೆಗಳನ್ನು ಮಾಡಬೇಕೆಂದು ಮತ್ತು ಠೇವಣಿದಾರ–ರಿಗೆ ಯಾವುದೇ ಕಾರಣಕ್ಕೂ ಮೋಸಮಾಡಕೂಡದೆಂದು ಸೂಚಿಸಲಾಗಿದೆ.

2. **ಬರಬೇಕಾದ ಬಡ್ಡಿ ಸಹಕಾರಿಯ ನಿವ್ವಳ ಆದಾಯವಾಗುವುದಿಲ್ಲ :** ಕೆಲವೊಂದು ಸಹಕಾರಿ ಸಂಸ್ಥೆಗಳಲ್ಲಿ ಬರಬೇಕಾದ ಬಡ್ಡಿಯನ್ನು ಲಾಭಕ್ಕೆ ತೋರಿಸಿ ಸಹಕಾರಿಯಲ್ಲಿ ಲಾಭವನ್ನು ತೋರಿಸಿ ಸದಸ್ಯರಿಗೆ ಡಿವಿಡೆಂಡ ನೀಡುವುದು ತಿಳಿದುಬಂದಿದೆ ಇದು ಸರಿಯಲ್ಲ. ನಿವ್ವಳ ಜಮಾ ಬಂದಿರುವ ಬಡ್ಡಿಯನ್ನು ಮಾತ್ರ ಜಮಾ ತೆಗೆದುಕೊಂಡು ಅಂತಿಮ ಲೆಕ್ಕ ಪತ್ರಗಳನ್ನು ನಿರ್ವಹಣೆ ಮಾಡತಕ್ಕದ್ದು ಎಂದು ಸೂಚಿಸಲಾಗಿದೆ.

3. **ಬ್ಯಾಂಕ ಪದ ಬಳಕೆ :** ಸೌಹಾರ್ದ ಸಹಕಾರಿಗಳು ಬ್ಯಾಂಕ ಪದ ಬಳಕೆ ಮಾಡುವಂತಿಲ್ಲ : ರಾಜ್ಯದ ಯಾವುದೇ ಸೌಹಾರ್ದ ಸಹಕಾರಿಗಳು ತಮ್ಮ ಸಹಕಾರಿಯ ಹೆಸರಲ್ಲಿ ಬ್ಯಾಂಕ/ಬ್ಯಾಂಕರ್/ಬ್ಯಾಂಕಿಂಗ್ ಪದಗಳನ್ನು ಬಳಸುವಂತಿಲ್ಲ. ಸದಸ್ಯರಿಗೆ / ಸಾರ್ವಜನಿಕರಿಗೆ ಇದು ಮೋಸಮಾಡಿದಂತಾಗುತ್ತದೆ ಮತ್ತು ಕಾನೂನು ಉಲ್ಲಂಘನೆಯಾಗುತ್ತದೆ. ಆರ್.ಬಿ.ಐ ನಿಂದ ಬ್ಯಾಂಕಿಂಗ ಲೈಸನ್ಸ ಪಡೆದ ಸಹಕಾರಿಗಳು ಮಾತ್ರ ಬ್ಯಾಂಕ/ಬ್ಯಾಂಕರ್/ಬ್ಯಾಂಕಿಂಗ್ ಪದಗಳನ್ನು ಬಳಸಲು ಅವಕಾಶವಿದೆ. ಆದ್ದರಿಂದ ಯಾವುದೇ ಸೌಹಾರ್ದ ಸಹಕಾರಿಗಳು ಬ್ಯಾಂಕ/ಬ್ಯಾಂಕರ್/ಬ್ಯಾಂಕಿಂಗ್ ಪದ ಬಳಸಬಾರದೆಂದು ಈ ಮೂಲಕ ಸೂಚಿಸಿದೆ.

# ಸಹಕಾರ ಸಂಘಗಳ/ ಬ್ಯಾಂಕುಗಳ ಮತ್ತು ಸೌಹಾರ್ದ ಸಹಕಾರಿಗಳ ಚುನಾವಣೆಗಳನ್ನು ನಡೆಸುವ ಕುರಿತು ಸರ್ಕಾರದ ಆದೇಶ.

**ಸಹಕಾರ ಚುನಾವಣಾ ಪ್ರಾಧಿಕಾರ**

ಟಿ.ಟಿ.ಎಂ.ಸಿ. ಕಟ್ಟಡ, 3ನೇ ಮಹಡಿ, ಎ–ಬ್ಲಾಕ್, ಶ್ರೀ ಕೆಂಗಲ್ ಹನುಮಂತಯ್ಯ ರಸ್ತೆ, ಶಾಂತಿನಗರ, ಬೆಂಗಳೂರು–560027

E-mail : coca-coop@karnataka.gov.in

Web site : coca.karnataka.gov.in
Phone : 080-22220066 / 29709014

ಸಂಖ್ಯೆ : ಸಚುಪ್ರಾ/ಆಡಳಿತ/ಕೋವಿಡ್–19/ 6(6) /ಸುತ್ತೋಲೆ/2022

ದಿನಾಂಕ 11.02.2022

ಚುನಾವಣಾ ತುರ್ತು

**ಸುತ್ತೋಲೆ**

ವಿಷಯ : ಸಹಕಾರ ಸಂಘಗಳ / ಬ್ಯಾಂಕುಗಳ ಮತ್ತು ಸೌಹಾರ್ದ ಸಹಕಾರಿಗಳ ಚುನಾವಣೆಗಳನ್ನು ನಡೆಸುವ ಬಗ್ಗೆ.

ಉಲ್ಲೇಖ
1) ಸರ್ಕಾರದ ಪತ್ರ ಸಂಖ್ಯೆ : ಸಿಒ.03.ಸಿಎಲ್‌ಎಮ್.2022(ಇ) ದಿನಾಂಕ 19.01.2022.
2) ಈ ಕಛೇರಿ ಸುತ್ತೋಲೆ ಸಂಖ್ಯೆ : ಸಚುಪ್ರಾ/ಆಡಳಿತ/ಕೋವಿಡ್–19/ 6(5)/ಸುತ್ತೋಲೆ/2022 ದಿನಾಂಕ 20.01.2022.
3) ಸರ್ಕಾರದ ಪತ್ರ ಸಂಖ್ಯೆ : ಸಿಒ.03.ಸಿಎಲ್‌ಎಮ್.2022(ಇ) ದಿನಾಂಕ : 11.02.2022.

★★★★★

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರಗಳ ಕಡೆ ಗಮನವನ್ನು ಸೆಳೆಯಲಾಗಿದೆ. ಉಲ್ಲೇಖ (1)ರ ಸರ್ಕಾರದ ಪತ್ರದಲ್ಲಿ ಕೋವಿಡ್–19ರ 3ನೇ ಅಲೆಯ ಓಮಿಕ್ರಾನ್ ತಳಿಯು ಸಾಂಕ್ರಾಮಿಕವಾಗಿ ಹರಡುತ್ತಿರುವ ಕಾರಣ ಸಹಕಾರ ಸಂಘಗಳ / ಬ್ಯಾಂಕುಗಳ ಮತ್ತು ಸೌಹಾರ್ದ ಸಹಕಾರಿಗಳ ಸಾಮಾನ್ಯ ಚುನಾವಣೆಗಳನ್ನು ಮಾರ್ಚ್–2022ರ ಅಂತ್ಯದವರೆಗೆ ಅಥವಾ ಮುಂದಿನ ಆದೇಶದವರೆಗೆ ಮುಂದೂಡಲು ಕ್ರಮವಿಡುವಂತೆ ತಿಳಿಸಿದ ಹಿನ್ನಲೆಯಲ್ಲಿ ಉಲ್ಲೇಖ(2)ರ ಈ ಕಛೇರಿಯ ಸುತ್ತೋಲೆಯಲ್ಲಿ ರಾಜ್ಯದ ಎಲ್ಲಾ ಸಹಕಾರ ಸಂಘಗಳು / ಬ್ಯಾಂಕುಗಳು ಮತ್ತು ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಸಾಮಾನ್ಯ ಚುನಾವಣೆಗಳನ್ನು ಮತ್ತು ಆಡಳಿತ ಮಂಡಲಿಯಲ್ಲಿ ಖಾಲಿಬಿದ್ದ ನಿರ್ದೇಶಕರ ಸ್ಥಾನದ ಚುನಾವಣೆಗಳನ್ನು ಮಾರ್ಚ್–2022ರವರೆಗೆ ಅಥವಾ ಮುಂದಿನ ಆದೇಶದವರೆಗೆ ಮುಂದೂಡಿ ಸುತ್ತೋಲೆಯನ್ನು ಹೊರಡಿಸಲಾಗಿತ್ತು.

ಉಲ್ಲೇಖ(3)ರ ಸರ್ಕಾರದ ಪತ್ರದಲ್ಲಿ ಅನೇಕ ಸಹಕಾರಿಗಳು, ಜನ ಪ್ರತಿನಿಧಿಗಳು ಸಹಕಾರ ಸಂಘಗಳ ಚುನಾವಣೆಗಳನ್ನು ನಡೆಸಲು ಅನುಮತಿ ಕೋರಿ ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿರುತ್ತಾರೆ. ಪ್ರಸ್ತುತ ಕೋವಿಡ್–19 ಸಾಂಕ್ರಾಮಿಕ ರೋಗ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿರುವುದರಿಂದ ರಾಜ್ಯದಲ್ಲಿನ ಹಲವಾರು ವಲಯಗಳಿಗೆ ಕೋವಿಡ್ ನಿರ್ಬಂಧಗಳಿಗೆ ರಾಜ್ಯ ಸರ್ಕಾರವು ವಿನಾಯಿತಿ ನೀಡಿರುವುದರಿಂದ ಸಹಕಾರ ಸಂಘ ಮತ್ತು ಬ್ಯಾಂಕುಗಳ ಹಿತದೃಷ್ಟಿಯಿಂದ ಚುನಾವಣೆಗಳನ್ನು ನಡೆಸಲು ಅನುಮತಿ ನೀಡುವುದು ಸೂಕ್ತವಾದುದರಿಂದ ಸಹಕಾರ ಸಂಘಗಳ / ಬ್ಯಾಂಕುಗಳ ಮತ್ತು ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆಗಳನ್ನು ಸೇರಿದಂತೆ ಎಲ್ಲಾ ಚುನಾವಣೆಗಳನ್ನು ನಡೆಸಲು ಸೂಕ್ತ ಸುತ್ತೋಲೆ ಹೊರಡಿಸುವಂತೆ ನಿರ್ದೇಶಿಸಲಾಗಿರುತ್ತದೆ.

ಅದರಂತೆ, ಉಲ್ಲೇಖ(2)ರ ಈ ಕಛೇರಿಯ ಸುತ್ತೋಲೆಯಲ್ಲಿ ರಾಜ್ಯದ ಎಲ್ಲಾ ಸಹಕಾರ ಸಂಘಗಳು / ಬ್ಯಾಂಕುಗಳು ಮತ್ತು ಸೌಹಾರ್ದ ಸಹಕಾರಿಗಳ ಸಾಮಾನ್ಯ ಚುನಾವಣೆ ಮತ್ತು ಆಡಳಿತ ಮಂಡಲಿಯಲ್ಲಿ ಖಾಲಿ ಬಿದ್ದ ನಿರ್ದೇಶಕರ ಸ್ಥಾನಗಳ ಚುನಾವಣೆಯನ್ನು ನಡೆಸಲು ವಿಧಿಸಿದ್ದ ನಿರ್ಬಂಧವನ್ನು ತೆರವುಗೊಳಿಸಿ, ಚುನಾವಣೆಗೆ ಬಾಕಿ ಇರುವ ರಾಜ್ಯದ ಎಲ್ಲಾ ಸಹಕಾರ ಸಂಘಗಳ / ಬ್ಯಾಂಕುಗಳ ಮತ್ತು ಸೌಹಾರ್ದ ಸಹಕಾರಿಗಳ ಚುನಾವಣೆಗಳನ್ನು ಮುಂದೂಡುವ ಪೂರ್ವದಲ್ಲಿ ಯಾವ ಹಂತದಲ್ಲಿ ನಿಲ್ಲಿಸಲಾಗಿತ್ತೋ ಆ ಹಂತದಿಂದ ಪ್ರಾರಂಭಿಸಿ, ಕೋವಿಡ್–19ರ ಮಾರ್ಗಸೂಚಿಗಳನ್ನು ಅನುಸರಿಸಿ ಚುನಾವಣಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ತಿಳಿಸಿದೆ.

11/2

(ಡಾ: ಎನ್.ಎಸ್.ಚನ್ನಪ್ಪಗೌಡ)
ಆಯುಕ್ತರು,
ಸಹಕಾರ ಚುನಾವಣಾ ಪ್ರಾಧಿಕಾರ,
ಬೆಂಗಳೂರು.

## ಕಲಬುರಗಿ ಪ್ರಾಂತದ ಸಿಬ್ಬಂದಿಗಳ ಸಭೆ

**ಕಲಬುರಗಿ :** ದಿನಾಂಕ 12.02.2022 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ಕಲಬುರಗಿ ಪ್ರಾಂತದ ಸಿಬ್ಬಂದಿಗಳ ಸಭೆಯಲ್ಲಿ ಭಾಗವಹಿಸಿ, ಸಮಾಪನೆಗೆ ಆದ್ಯತೆ ನೀಡಿ 31.03.2022 ರ ಒಳಗಾಗಿ ಸಮಾಪನಾಧಿಕಾರಿ ನೇಮಕವಾದ ಸಹಕಾರಿಗಳ ನೋಂದಣಿ ರದ್ದತಿಯಾಗಬೇಕು ಎಂದು ಸೂಚಿಸಿ, ಪರಿವೀಕ್ಷಣೆಗೂ ಸಹ ಮೊದಲ ಆದ್ಯತೆ ಮೇರೆಗೆ ಜೂನ್ 2022ರ ಒಳಗಾಗಿ ಗರಿಷ್ಠ ಪ್ರಮಾಣದಲ್ಲಿ ಪರಿವೀಕ್ಷಣೆ ಕೈಗೊಂಡಿರಬೇಕು ಎಂದು ತಿಳಿಸಿದರು.

# ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್‌ನ ಅಧ್ಯಕ್ಷರಾಗಿ ಶ್ರೀ ಎಸ್.ಆರ್. ಲಕ್ಷ್ಮೀಕಾಂತ ರೆಡ್ಡಿ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಎಲ್.ಇ ಶ್ರೀನಿವಾಸ ಬಾಬು ಆಯ್ಕೆ



**ಚಿತ್ರದುರ್ಗ** : ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಚಿತ್ರದುರ್ಗ ಇದರ ಪದಾಧಿಕಾರಿಗಳ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಶ್ರೀ ಎಸ್. ಆರ್. ಲಕ್ಷ್ಮೀ ಕಾಂತ ರೆಡ್ಡಿಯವರು ಹಾಗೂ ಉಪಾಧ್ಯಕ್ಷರಾಗಿ ಶ್ರೀ ಎಲ್. ಇ. ಶ್ರೀನಿವಾಸ ಬಾಬು ಹಾಗೂ ನಿರ್ದೇಶಕರುಗಳಾಗಿ ಶ್ರೀ ಜೆ.ವಿ. ಮುಕುಂದರಾವ್, ಶ್ರೀ ರಘುರಾಮ ರೆಡ್ಡಿ, ಶ್ರೀ ಎನ್ ಜಯಣ್ಣ, ಶ್ರೀ ಪಿ.ಎಲ್ ಸುರೇಶ ರಾಜು, ಶ್ರೀ ಎಸ್ ಮಂಜುನಾಥ, ಶ್ರೀಮತಿ ಎಸ್ ಇಂದ್ರಮ್ಮ, ಶ್ರೀಮತಿ ಸಿ. ಸುಜಾತ, ಶ್ರೀ ಜಿ ರಾಜಾನಾಯ್ಕ, ಶ್ರೀ ಡಿ ಪ್ರಕಾಶ, ಶ್ರೀ ಜೆ ಸುರೇಶ, ಶ್ರೀ ಟಿ. ಹೆಚ್. ರಾಜಪ್ಪ ಆಯ್ಕೆಯಾಗಿರುತ್ತಾರೆ.

# ಸಂಸ್ಥಾಪನಾ ದಿನಾಚರಣೆ

**ಹಾದಿಲ್ಲು** : ಅಭಯಮ್ ವಿವಿಧೋದ್ದೇಶ ಸೌಹಾರ್ದ ಸಹಕಾರಿಯು ಪ್ರಾರಂಭಗೊಂಡು 16 ವಸಂತಗಳನ್ನು ಪೂರೈಸಿದಕ್ಕಾಗಿ ದಿನಾಂಕ 21–02–2022ರ ಸೋಮವಾರ ಸಹಕಾರಿಯ ಕಛೇರಿಯಲ್ಲಿ "ಸಂಸ್ಥಾಪನಾ ದಿನಾಚರಣೆ"ಯನ್ನು ನಡೆಸಲಾಯಿತು. ಹಾಗೂ ಇದೇ ಸಂದರ್ಭದಲ್ಲಿ ನಿರ್ದೇಶಕರ ಹಕ್ಕು, ಬಾಧ್ಯತೆ ಹಾಗೂ ಜವಾಬ್ದಾರಿಗಳ ಕುರಿತು ಹಿರಿಯ ಲೆಕ್ಕಪರಿಶೋಧಕರಾದ ಸಾಗರದ ಶ್ರೀ ಬಿ.ವಿ. ರವೀಂದ್ರನಾಥ್ ಇವರಿಂದ ಅಭಯಮ್ ಸಹಕಾರಿಯ ನಿರ್ದೇಶಕರಿಗೆ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್, ಕ್ಯಾಂಪ್ಕೋ ನಿರ್ದೇಶಕರೂ, ಕೊಡಚಾದ್ರಿ ಸಹಕಾರಿಯ ಅದ್ಯಕ್ಷರೂ, ಅಮೃತ ಸಹಕಾರಿಯ ನಿರ್ದೇಶಕರೂ, ಶಿವಮೊಗ್ಗ ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟದ ಬಾಹ್ಯ ನಿರ್ದೇಶಕರೂ ಆದ ಶ್ರೀ ರಾಘವೇಂದ್ರ ಹೆಚ್.ಎಂ ಉಪಸ್ಥಿತರಿದ್ದರು. ಸಹಕಾರಿಯ ನಿರ್ದೇಶಕರುಗಳು, ಬಾಹ್ಯ ನಿರ್ದೇಶಕರುಗಳು, ಸಿಬ್ಬಂದಿಗಳು ಹಾಜರಿದ್ದು ಕಾರ್ಯಾಗಾರದ ಸದುಪಯೋಗ ಪಡೆದರು.

# ಪ್ರಥಮ ಸರ್ವಸದಸ್ಯರ ವಾರ್ಷಿಕ ಸಭೆ



**ಚಾಮರಾಜನಗರ** : ದಿನಾಂಕ 19.02.2022 ರಂದು ಅಪರ್ಣಾಹನಿ ಸಮಗ್ರ ರೈತ ಉತ್ಪಾದಕರ & ಮಾರಾಟಗಾರರ ಸೌಹಾರ್ದ ಸಹಕಾರಿ ಸಂಘ ನಿ., ಕೊಳ್ಳೇಗಾಲ ಇದರ ಪ್ರಥಮ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ಶ್ರೀ ದಿನೇಶ್ ಗುಪ್ತಾ ರವರು, ಮಾಜಿ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ಉದ್ಘಾಟನೆ ಮಾಡಿದರು. ಈ ಸಂದರ್ಭದಲ್ಲಿ ವೇದಿಕೆ ಮೇಲೆ ಶ್ರೀ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು, ಶ್ರೀ ಜೋಸೆಫ್, ಕಾರ್ಯದರ್ಶಿಗಳು, ರೋಟರಿ ಭವನ, ಕೊಳ್ಳೇಗಾಲ, ಶ್ರೀ ರಾಜು, ಮುಖ್ಯ ಪ್ರವರ್ತಕರು ಉಪಸ್ಥಿತರಿದ್ದರು. ಜಿಲ್ಲಾ ಸಂಯೋಜಕರು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆ ಹಾಗೂ ಕಾಯ್ದೆಯ ಮಾಹಿತಿಯನ್ನು ನೀಡಿದರು.

# ಸಹಕಾರ ಇಲಾಖೆ ಜಿಲ್ಲಾ ಸಮನ್ವಯ ಸಮಿತಿ ಸಭೆ

**ಚಿತ್ರದುರ್ಗ** : ದಿನಾಂಕ 24.02.2022 ರಂದು ಚಿತ್ರದುರ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಸಭಾಂಗಣದಲ್ಲಿ ಚಿತ್ರದುರ್ಗ ಜಿಲ್ಲೆಯ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಪ್ರತಿನಿಧಿಯಾಗಿ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ಭಾಗವಹಿಸಿ ಸಭೆಗೆ ಅಗತ್ಯವಾದ ಮಾಹಿತಿ ನೀಡಿದರು. ಸದರಿ ಸಭೆಯ ಅಧ್ಯಕ್ಷತೆಯನ್ನು ಸಹಕಾರ ಸಂಘಗಳ ಉಪನಿಬಂಧಕರು ವಹಿಸಿದ್ದರು. ಚಿತ್ರದುರ್ಗ ಡಿ.ಸಿ.ಸಿ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ ಉಪನಿರ್ದೇಶಕರು, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಜಿಲ್ಲೆಯ ಎಲ್ಲಾ ತಾಲೂಕುಗಳ ಸಹಕಾರಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಲೆಕ್ಕಪರಿಶೋಧನಾ ಇಲಾಖೆಯ ಅಧಿಕಾರಿಗಳು, ಜವಳಿ ಮತ್ತು ನೇಕಾರರ ಮತ್ತು ಶಿಮುಲ್ ಹಾಲು ಒಕ್ಕೂಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಲೇಖನ

# “ಸೌಹಾರ್ದ ಸಹಕಾರಿ ಕಾಯ್ದೆ ಆಶಯ ಮತ್ತು ಚಟುವಟಿಕೆಗಳ ಬಗ್ಗೆ ವಿಸ್ತೃತ ಅರಿವು ಹಾಗೂ ಪ್ರಚಾರ ಅಗತ್ಯ”

(ಶ್ರೀ ಅನೂಪ ದೇಶಪಾಂಡೆ, ಮಾಜಿ ವ್ಯವಸ್ಥಾಪಕ ನಿರ್ದೇಶಕರು, ಸಂಯುಕ್ತ ಸಹಕಾರಿ ಇವರು “ತಿರುವು ದಾರಿಯಲ್ಲಿ ಸೌಹಾರ್ದ ಸಹಕಾರಿ” ಎಂಬ ಲೇಖನ ಪತ್ರಿಕೆಯಲ್ಲಿ ಪ್ರಕಟಣೆಯ ಹಿನ್ನಲೆಯಲ್ಲಿ ಶ್ರೀ ಸಿ.ಎಸ್ ಪರಶಿವಮೂರ್ತಿ, ಮಾನ್ಯ ಅಪರ ನಿಬಂಧಕರು (ನಿ) ಇವರ ವಿಮಾರ್ಶಾತ್ಮಕಾ ಲೇಖನವನ್ನು ಓದುಗರ ಮಾಹಿತಿಗಾಗಿ ಪ್ರಕಟಿಸಿದೆ.)



– ಶ್ರೀ ಸಿ.ಎಸ್ ಪರಶಿವಮೂರ್ತಿ

ಹಿಂದಿನ ಸಂಚಿಕೆಯಿಂದ ಮುಂದುವರೆದಿದೆ.......

ಅನೂಪ್ ದೇಶಪಾಂಡೆಯವರು ಮತ್ತೊಂದು ಪ್ರಮುಖ ವಿಷಯ ಪ್ರಸ್ತಾಪಿಸಿದ್ದಾರೆ. ಅದೆಂದರೆ, ಸಂಯುಕ್ತ ಸಹಕಾರಿಯು ವ್ಯವಸ್ಥಾಪಕ ನಿರ್ದೇಶಕರಿಗೆ, ವಿಚಾರಣೆ ಮಾಡುವ ಅಧಿಕಾರ ನೀಡಿದ ಬಗ್ಗೆ ಅವರ ಅನಿಸಿಕೆಯಲ್ಲಿ ಪ್ರಮುಖವಾಗಿ ಅರ್ಥೈಸಬೇಕಾದ್ದು ಕಲಂ.35 ರಡಿ ನಿಬಂಧಕರಿಗೆ ಶಾಸನಾತ್ಮಕ ವಿಚಾರಣೆ ಮಾಡುವ ಅಧಿಕಾರ ನೀಡಲಾಗಿದೆ ಮತ್ತು ಕಲಂ.53(7)(ಯು) ನಲ್ಲಿ ಸದಸ್ಯ ಸಹಕಾರಿಗಳ ಪರಿವೀಕ್ಷಣೆ ಮಾಡಲು ಸಂಯುಕ್ತ ಸಹಕಾರಿ ಮಂಡಳಿಗೆ ಅಧಿಕಾರ ನೀಡಲಾಗಿದೆ ಮತ್ತು ಈ ಮಧ್ಯ ವ್ಯವಸ್ಥಾಪಕ ನಿರ್ದೇಶಕರಿಗೆ ಪ್ರತ್ಯೇಕವಾಗಿ ಅಧಿಕಾರ ನೀಡಿದರೆ ನಿಬಂಧಕರು ಮತ್ತು ಸಂಯುಕ್ತ ಸಹಕಾರಿ ಮಂಡಳಿ ಶಕ್ತಿಯ ಬಗ್ಗೆ ಅನುಮಾನಿಸಿದಂತಾಗುತ್ತಿದೆಯೇ? ಅನೂಪ್ ಅವರು ಈ ಬಗ್ಗೆ ಈ ರೀತಿ ಚಿಂತನೆ ಮಾಡಿದ್ದರೂ ಇಲ್ಲವೋ ತಿಳಿಯದು. ಆದರೆ ವ್ಯವಸ್ಥಾಪಕ ನಿರ್ದೇಶಕರು, ಕಲಂ.53(7) ರಲ್ಲಿ ನೀಡಲಾದ ಅಧಿಕಾರವನ್ನು ಮಂಡಳಿ ತೀರ್ಮಾನದ ನಂತರ ಜಾರಿ ಮಾಡಬೇಕು. ಚುನಾಯಿತ ಮಂಡಳಿ ಸಂಘ ಪರಿವಾರ/ರಾಜಕೀಯ ಒತ್ತಡಕ್ಕೆ ಮಣಿದು ಅವಶ್ಯಕವಿದ್ದಾಗ ತೀರ್ಮಾನ ತೆಗೆದುಕೊಳ್ಳದೇ ಇರಬಹುದು ಅಥವಾ ನಿಬಂಧಕರಿಗೆ ವರದಿಯನ್ನು ಸಂಯುಕ್ತ ಸಹಕಾರಿಯ ಕ್ಷೇತ್ರ ಸಿಬ್ಬಂದಿ ವರದಿ ಆಧಾರದ ಮೇಲೆ ಮನವಿ ಮಾಡಿ, ವಿಚಾರಣೆ ಮಾಡಲು ವಿನಂತಿ ಬಂದ ನಂತರ ನಿಬಂಧಕರು ಆದೇಶಿಸಬಹುದು ಅಥವ ಆದೇಶ ಮಾಡದೇ ಇರಬಹುದು. ತುರ್ತು ಸಂದರ್ಭದಲ್ಲಿ ಸದಸ್ಯ ಸಹಕಾರಿಯಲ್ಲಿ ನಡೆದಿರಬಹುದಾದ ನ್ಯೂನತೆ ಮೇಲೆ ತುರ್ತು ತೀರ್ಮಾನ ತೆಗೆದುಕೊಳ್ಳದಿದ್ದರೆ, ಆ ಸಹಕಾರಿಗೆ ಆರ್ಥಿಕ/ಸಮಾಜಿಕ ನಷ್ಟ ಸಂಭವಿಸುವ ಅವಕಾಶ ಇರುತ್ತದೆ ಎಂಬುದನ್ನು ಮನಗಂಡು ವಿಚಾರಣೆ ಮಾಡಲು ನೀಡಿದ ಈ ಅವಕಾಶ ಒಂದು ಹೆಚ್ಚುವರಿ ಅವಕಾಶ ಎಂದು ತಿಳಿಯಬೇಕು. ಇದಕ್ಕೆ ಅನೂಪ್ ಅವರು ವ್ಯವಸ್ಥಾಪಕ ನಿರ್ದೇಶಕನಿಗೆ ಈ ಅಧಿಕಾರ ನೀಡಿದರೆ, ಅದನ್ನು ಮನಸೋಇಚ್ಛೆ ಚಲಾಯಿಸಬಹುದೆಂದೋ ಅಥವಾ ಸಂಯುಕ್ತ ಸಹಕಾರಿ, ಈ ಅವಕಾಶವನ್ನು ಆಧರಿಸಿ ವ್ಯವಸ್ಥಾಪಕ ನಿರ್ದೇಶಕರ ಮೇಲೆ ಒತ್ತಡ ತಂದು ಅವಶ್ಯಕತೆ ಇಲ್ಲದೇ ಇದ್ದರೂ, ವಿಚಾರಣೆಗೆ ಆದೇಶಿಸುವಂತೆ ಒತ್ತಾಯಿಸಬಹುದೆಂದೋ? ಅಥವಾ ಸಂಯುಕ್ತ ಸಹಕಾರಿ, ತನ್ನ ನಿಷ್ಕ್ರಿಯತೆಯನ್ನು ಮುಚ್ಚಿ ಹಾಕಲು, ವ್ಯವಸ್ಥಾಪಕ ನಿರ್ದೇಶಕರು ಬೇಕೆಂತಲೇ ವಿಚಾರಣಾ ಅವಕಾಶ ಉಪಯೋಗಿಸಿಲ್ಲವೆಂದು, ಅವರ ಮೇಲೆ ಗೂಬೆಕೂರಿಸುವ ಪ್ರಯತ್ನ ಮಾಡುತ್ತಾರೆಂದೋ ತಿಳಿಯದು?

ಆದರೆ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಒಬ್ಬ ವೃತ್ತಿಪರ ವ್ಯಕ್ತಿ ಮತ್ತು ಅವನಿಗೆ ಶಾಸನಾತ್ಮಕವಾಗಿ ಸಂಯುಕ್ತ ಸಹಕಾರಿ, ಮತ್ತು ಅದರ ಸಿಬ್ಬಂದಿ ಮತ್ತು ಸದಸ್ಯ ಸಹಕಾರಿಗಳ ಮೇಲೆ ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಕ ಎಂಬ ಜವಾಬ್ದಾರಿ ಇದೆ. ಇರಬೇಕು, ಏಕೆಂದರೆ ಸೌಹಾರ್ದ ಕಾಯಿದೆಯಲ್ಲಿ ನಿಬಂಧಕರ ಸ್ಥಾನವನ್ನು ಪಡೆದ, ಸಂಯುಕ್ತ ಸಹಕಾರಿ ಮಂಡಳಿ ತನ್ನ ತೀರ್ಮಾನ ತೆಗೆದುಕೊಳ್ಳಲು ಮತ್ತು ಅವುಗಳನ್ನು ಜಾರಿ ಮಾಡಲು, ಸಂಯುಕ್ತ ಸಹಕಾರಿಯ ಮುಖ್ಯಕಾರ್ಯನಿರ್ವಾಹಕ ಅಂದರೆ ವ್ಯವಸ್ಥಾಪಕ ನಿರ್ದೇಶಕನ ಮುಖಾಂತರವೇ ಮಾಡಬೇಕಾಗದ್ದು, ಅವರು ಮಂಡಳಿ ತೀರ್ಮಾನ ಜಾರಿ ಮಾಡುವುದರ ಜೊತೆಗೆ, ಅದರ ಅವಶ್ಯಕತೆಯನ್ನು ಮಂಡಳಿ ಗಮನಕ್ಕೆ ತಂದು ಮಂಡಳಿಗೆ ಮನದಟ್ಟು ಮಾಡಿ ಪರಿವೀಕ್ಷಣೆ ಮಾಡಿದ ನಂತರ ಒಪ್ಪಿಗೆ ಪಡೆಯಬೇಕು. ಇದರಲ್ಲಿ ಮಂಡಳಿಯ ಎಲ್ಲಾ ಸದಸ್ಯರು ಸಹಮತ ವ್ಯಕ್ತ ಪಡಿಸದಿದ್ದರೆ, ಅಂತಹ ಸದಸ್ಯ ಸಹಕಾರಿ ಮೇಲೆ ತುರ್ತು ಕ್ರಮ ಜರುಗಿಸಲು ಸಾಧ್ಯವಾಗದು ಎಂದು ಮನಗಂಡಾಗಿ, ತನಗೆ ನೀಡಿದ ವಿಚಾರಣಾ ಅಧಿಕಾರ ಚಲಾಯಿಸಬಹುದೆಂಬ ಭಾವನೆಯಿಂದ ಈ ಅಧಿಕಾರವನ್ನು ಸರ್ಕಾರ ನೀಡಿರಬೇಕು.

ಆದರೆ ಈ ಅಧಿಕಾರ ನೀಡಿದಾಗ, ವ್ಯವಸ್ಥಾಪಕ ನಿರ್ದೇಶಕನ ಹಕ್ಕು, ಕರ್ತವ್ಯ ಮತ್ತು ಜವಾಬ್ದಾರಿಗಳು ಹೆಚ್ಚು ಹೊರೆಯನ್ನು ನೀಡುತ್ತಿದೆ. ಅದನ್ನು ನಿಭಾಯಿಸಲು ಸ್ವೇಇಚ್ಛಾ ಶಕ್ತಿ ಪ್ರದರ್ಶಿಸಬೇಕು ಮತ್ತು ಯಾವುದೇ

ಕಾರಣದಿಂದ ಸಂಯುಕ್ತ ಸಹಕಾರಿ ಮಂಡಳಿ ಒತ್ತಡಕ್ಕೆ ಸಿಲುಕದೇ, ತೀರ್ಮಾನತೆಗೆದುಕೊಳ್ಳಲು ನೀಡಿದ ಒಂದು ಅವಕಾಶ ಎಂದು ತಿಳಿದು ವ್ಯಕ್ತಿಪರ ನಿರ್ಧಾರ ತೆಗೆದುಕೊಳ್ಳುವ ಜವಾಬ್ದಾರಿ ವ್ಯವಸ್ಥಾಪಕ ನಿರ್ದೇಶಕನ ಮೇಲಿದೆ. ಆದ್ದರಿಂದ ಅನೂಪ್‌ದೇಶ್‌ಪಾಂಡೆ ಅವರು ಈ ಅಧಿಕಾರ ನೀಡಿದ್ದು ತಪ್ಪು ಎಂಬ ಭಾವನೆ ಸೂಕ್ತವಾದ ಅಭಿಪ್ರಾಯವಲ್ಲ. ಇದರ ಜೊತೆಗೆ 1959ರ ಕಾಯಿದೆಯಲ್ಲಿ ಶಾಸನಾತ್ಮಕ ಅಧಿಕಾರ ಚಲಾಯಿಸಲು ನಿಬಂಧಕರಿಗೆ ಮಾತ್ರ ಅಧಿಕಾರವಿದೆ. ಸರ್ಕಾರ, ಆ ಅಧಿಕಾರವನ್ನು ಸಹಕಾರ ಇಲಾಖಾಧಿಕಾರಿಗಳಿಗೆ ವರ್ಗಾಯಿಸುವ ಅವಕಾಶವನ್ನು ಕಾಯಿದೆ ಕಲಂ.2ಎ(2) ರಲ್ಲಿ ಇಲಾಖಾಧಿಕಾರಿಗಳಿಗೆ ಹಸ್ತಾಂತರಿಸಲು ಅವಕಾಶ ಕಲ್ಪಿಸಿದೆ. ಅದರಂತೆ ಸಹಕಾರ ಇಲಾಖಾಧಿಕಾರಿಗಳ ವಿವಿಧ ಶ್ರೇಣಿಯ ಅಧಿಕಾರಿಗಳಿಗೆ ನಿಬಂಧಕರ ಶಾಸನಾತ್ಮಕ ಅಧಿಕಾರವನ್ನು ವರ್ಗಾಯಿಸಿ ಆದೇಶ ಮಾಡಲು ಸರ್ಕಾರಕ್ಕೆ ಅಧಿಕಾರಿ ಇರುವುದನ್ನು ಉಪಯೋಗಿಸಿ, ಆದೇಶ ಹೊರಡಿಸಿದೆ. ಅಂದರೆ ಸಹಕಾರಿ ಸಂಘಗಳ ಕಾರ್ಯವ್ಯಾಪ್ತಿ ಗನುಗುಣವಾಗಿ ನಿಬಂಧಕರ ಅಧಿಕಾರವನ್ನು ಅಪರ ನಿಬಂಧಕರು, ಸಂಯುಕ್ತ ನಿಬಂಧಕರು, ಉಪನಿಬಂಧಕರು ಹಾಗೂ ಸಹಾಯಕ ನಿಬಂಧಕರಿಗೆ ಹಂಚಿಕೆ ಮಾಡಿದೆ. ಆ ರೀತಿ ಸೌಹಾರ್ದ ಕಾಯಿದೆಯಲ್ಲಿ ಆದೇಶ ಮಾಡುವ ಅಧಿಕಾರ ಇಲ್ಲ. ಏಕೆಂದರೆ ಸಂಯುಕ್ತ ಸಹಕಾರಿ ನೌಕರರು ಸರ್ಕಾರದ ನೌಕರರಲ್ಲಿ ಮತ್ತು ಅವರನ್ನು ಶಿಸ್ತು ಕ್ರಮಕ್ಕೊಳ್ಳ ಪಡಿಸಲು ಸರ್ಕಾರಕ್ಕೆ ಅಧಿಕಾರ ಇಲ್ಲದೇ ಇರುವುದರಿಂದ, ಅಂತಹ ಪ್ರಯೋಗವನ್ನು ಸೌಹಾರ್ದ ಕಾಯಿದೆಯಲ್ಲಿ ಮಾಡಿಲ್ಲವೆಂದು ತಿಳಿಯಬೇಕು. ವ್ಯವಸ್ಥಾಪಕ ನಿರ್ದೇಶಕನ ಹುದ್ದೆ ಕಾಯಿದೆಯಲ್ಲಿ ಕಲಂ.61(2) ರಲ್ಲಿ ಸೃಷ್ಟಿಯಾಗಿಲ್ಲ, ಆ ವ್ಯಕ್ತಿಗೆ ಶಾಸನಾತ್ಮಕ ಅಧಿಕಾರ ನೀಡಿದರೆ ಕಾಯಿದೆ ಜಾರಿಗೆ ಪೂರಕವಾಗಿ ಕೆಲಸ ನಿರ್ವಹಿಸಲು ಅನುಕೂಲ ಕಲ್ಪಿಸಿದೆ. ಇದನ್ನು ಅನೂಪ್ ಅವರು ಮನಗಾಣಬೇಕು.

### ಸೌಹಾರ್ದ ಕಾಯಿದೆ ದುರುಪಯೋಗ :

ಉದಾಹರಣೆಗೆ ಸಹಕಾರಿ ಸಕ್ಕರೆ ಕಾರ್ಖಾನೆಗಳು ಸೌಹಾರ್ದ ಸಹಕಾರಿ ಸದಸ್ಯರ ಠೇವಣಿಯಲ್ಲಿ ಸಕ್ಕರೆ ಕಾರ್ಖಾನೆಗಳ ದುಡಿಯುವ ಬಂಡವಾಳವಾಗಿ, ಭದ್ರತೆ ಇಲ್ಲದೇ ಸಾಲ ಪಡೆದಿದ್ದರೂ, ಸಂಯುಕ್ತ ಸಹಕಾರಿ ಕ್ರಮ ಜರುಗಿಸುತ್ತಿಲ್ಲ. ಅದೇ ರೀತಿ ಕೆಲವು ಸಹಕಾರಿಗಳು ಠೇವಣಿ ಹಣವನ್ನು ಸದಸ್ಯರಿಗೆ ವಾಪಸ್ ನೀಡಲು ಶಕ್ತಿ ಇಲ್ಲದೇ ಇದ್ದರೂ ಕ್ರಮ ಜರುಗಿಸದೇ ಇರುವುದು, ಏಕೆಂದರೆ ಸದಸ್ಯರ ಠೇವಣಿ ಹಣವನ್ನು ಸ್ವಹಿತಾಸಕ್ತಿ ಸಂಸ್ಥೆಗಳಿಗೆ ವಾಪಸಾಗದ ಸಾಲ ನೀಡಿ, ನಿಯಂತ್ರಿಸಲು ಸಾಧ್ಯವಾಗದೇ ಇದ್ದಾಗಿನ ಶಾಸನಾತ್ಮಕ ಅಧಿಕಾರ ಚಲಾಯಿಸದೇ ಇರುವುದು. ಸದಸ್ಯ ಸಹಕಾರಿಗಳಿಗೆ ಕಾರ್ಯನಿರ್ವಹಣೆಯಲ್ಲಿ ಮತ್ತು ಮಂಡಳಿ ಸದಸ್ಯರಿಗೆ ಸಕ್ರಿಯ ಭಾಗವಹಿಸುವ ಬಗ್ಗೆ ತರಬೇತಿ ನೀಡಿದ್ದರೂ ಅದನ್ನು ನಿಯಂತ್ರಿಸಲಾಗಿದೆ, ಸ್ವೇಚ್ಛತೆ ಪ್ರದರ್ಶಿಸಲು ಅವಕಾಶ ಕಲ್ಪಿಸಿದೆ. ಇದೆಲ್ಲವೂ ಸಂಯುಕ್ತ ಸಹಕಾರಿ ಮಂಡಳಿ, ನಿಯಂತ್ರಿಸಲು ಒತ್ತಡಕ್ಕೆ ಸಿಲುಕಿ ಕ್ರಮ ಜರುಗಿಸದೇ ಇರುವುದು ಮತ್ತು ಸಂಯುಕ್ತ ಸಹಕಾರಿ ನಿರ್ದೇಶಕರು ಸದಸ್ಯ ಸಹಕಾರಿಗಳು ನಿರ್ದೇಶಕರ ನಿಯಂತ್ರಣದಲ್ಲಿ ಕೆಲಸ ನಿರ್ವಹಿಸಬೇಕೆಂಬ ಮನೋಭಾವನೆ ಮತ್ತು ಸರ್ಕಾರದ ಮಂತ್ರಿಗಳು ಅಧಿಕಾರ ಚಲಾಯಿಸಿದಂತೆ ಪ್ರಯತ್ನ ಪಡಲು ಭಾವನೆ ಬೆಳೆಸಿಕೊಂಡಿದ್ದಾರೆ. ಇದರಿಂದ ಪಾರದರ್ಶಕ ಮತ್ತು ವ್ಯಕ್ತಿಪರ ತೀರ್ಮಾನ ತೆಗೆದುಕೊಳ್ಳಲು ಶಕ್ತಿ ಕಳೆದುಕೊಂಡಿದ್ದಾರೆ. ಮತ್ತೊಂದು ಉದಾಹರಣೆ ನೀಡುವುದಾದರೇ ಬೆಳಗಾಂ ವಿಭಾಗ ಒಂದರಲ್ಲೇ ಸುಮಾರು 700–800 ಸದಸ್ಯ ಸಹಕಾರಿಗಳ ಲೆಕ್ಕ ತಪಾಸಣೆ ಮಾಡಿಸದೇ ಇದ್ದರೂ, ಸಂಯುಕ್ತ ಸಹಕಾರಿ ಕ್ರಮ ಜರುಗಿಸದೇ ಇರುವುದು. ಸಿಬ್ಬಂದಿ ಕೊರತೆ ಒಂದು ಕಾರಣವೆಂದು ಆಡಳಿತಾಧಿಕಾರಿ/ವಿಶೇಷಾಧಿಕಾರಿ ನೇಮಕ ಮಾಡಲು ಸಾಧ್ಯವಿಲ್ಲವೆಂಬ ಚಿಂತನೆಯಲ್ಲಿ ವಿಳಂಬ ಮಾಡಲಾಗುತ್ತಿದೆ. ಇದು ಒಂದು ಶಾಸನಾತ್ಮಕ ಶಕ್ತಿ, ಪ್ರದರ್ಶಿಸಬೇಕಾದ ನಿಲುವು ಅಲ್ಲ. ಸಂಯುಕ್ತ ಸಹಕಾರಿ ಶಕ್ತಿ ಪ್ರದರ್ಶಿಸಿಲ್ಲ.

ವ್ಯವಸ್ಥಾಪಕ ನಿರ್ದೇಶಕರಿಗೆ ನೀಡಿದ ವಿಚಾರಣೆ ಅಧಿಕಾರವನ್ನು ಮತ್ತೊಂದು ಆಯಾಮದಿಂದಲೂ ನೋಡಬೇಕು. ಕಲಂ.35 ರಡಿ ನಿಬಂಧಕರ ವಿಚಾರಣೆ ಆದೇಶಿಸಲು, ಸಂಯುಕ್ತ ಸಹಕಾರಿ/ಸದಸ್ಯ ಸಹಕಾರಿಯಿಂದ ಬಂದ ಮನವಿ/ವಿನಂತಿ /ವರದಿ ಆಧಾರದಲ್ಲಿ ಆದೇಶಿಸುತ್ತಾರೆ. ಅಂದರೆ ಮತ್ತೊಂದು ಪ್ರಾರಂಭಿಕ ಹಂತದ ಪರಿಶೀಲನೆ ನಡೆದಿರುತ್ತದೆ. ಅದರಂತೆ ಸಂಯುಕ್ತ ಸಹಕಾರಿ ಕಲಂ.53(7)(ಯು) ಅಡಿ ಪರಿವೀಕ್ಷಣೆ ಮಾಡಲು ತೀರ್ಮಾನ ತೆಗೆದುಕೊಳ್ಳಲು ವಿಳಂಬವಾಗುತ್ತಿದೆ. ಏಕೆಂದರೆ ಅದು ಪ್ರಜಾಪ್ರಭುತ್ವದಡಿ ರಚನೆಯಾದ ಸಂಸ್ಥೆ ಮತ್ತು ಅದಕ್ಕೆ ಸಂಘ ಪರಿವಾರ ಅಥವಾ ರಾಜಕೀಯ ಒತ್ತಡದಿಂದ ತೀರ್ಮಾನ ತೆಗೆದುಕೊಳ್ಳಲು ವಿಳಂಬವಾಗುತ್ತಿದೆ. ಇದಕ್ಕೆ ಒಂದು ಉದಾಹರಣೆ ನೀಡುವುದಾದರೆ ಕೇಂದ್ರ ಸರ್ಕಾರ ಹೊಸದಾಗಿ ರಚನೆಯಾದಾಗ, ವಿರೋದ ಪಕ್ಷದ ಆಡಳಿತ ವಿರುವ ರಾಜ್ಯಗಳನ್ನು ವಜಾ ಮಾಡುವುದು ಮತ್ತು ಅದೇ ರೀತಿ ಪಕ್ಷದ ಕಾರ್ಯಕರ್ತರಿಗೆ ರಾಜ್ಯಪಾಲರ ಹುದ್ದೆ ನೀಡಿ, ನಿಯಂತ್ರಿಸಲು ಪ್ರಯತ್ನ ನಡೆಯುತ್ತಿತ್ತು. ಈಗ ಅದು ಕಡಿಮೆಯಾಗಿದ್ದು. ಆರ್ಥಿಕ ನೆರವಿನ ವಿಷಯದಲ್ಲಿ ತಾರತಮ್ಯ ತೋರುತ್ತಿರುವುದನ್ನು ಗಮನಿಸಬಹುದು. ಅದೇ ರೀತಿ ಸಂಯುಕ್ತ ಸಹಕಾರಿ ಮಂಡಳಿ ಕ್ರಮ ಜರುಗಿಸದೇ ಇದ್ದಾಗ, ವ್ಯವಸ್ಥಾಪಕ ನಿರ್ದೇಶಕನಿಗೆ ಅಧಿಕಾರ ನೀಡಿದರೆ,

ಒಬ್ಬ ವ್ಯಕ್ತಿಪರ ವ್ಯಕ್ತಿಯಾದ್ದರಿಂದ ತೀರ್ಮಾನ ತೆಗೆದುಕೊಳ್ಳಲೇಬೇಕಾದ ಪರಿಸ್ಥಿತಿ ನಿರ್ಮಾಣ ಮಾಡಿದಂತಾಗಿದೆ.

ಅಂದರೆ ನಿಬಂಧಕರು ಅವರ ಜವಾಬ್ದಾರಿ ನಿರ್ವಹಿಸದಿದ್ದರೆ ಅಥವಾ ಸಂಯುಕ್ತ ಸಹಕಾರಿ ತನ್ನ ಜವಾಬ್ದಾರಿ ನಿರ್ವಹಿಸದಿದ್ದರೆ, ವ್ಯವಸ್ಥಾಪಕ ನಿರ್ದೇಶಕರಿಗೆ ಈ ಅಧಿಕಾರ ನೀಡಿದಾಗ, ಅದನ್ನು ತುರ್ತು ಸಂದರ್ಭದಲ್ಲಿ ನಿಭಾಯಿಸುವ ಶಕ್ತಿ ನೀಡಲು ಈ ವಿಚಾರಣೆ/ಅಧಿಕಾರವನ್ನು ಸರ್ಕಾರ, ವ್ಯವಸ್ಥಾಪಕ ನಿರ್ದೇಶಕರಿಗೆ ನೀಡಿದೆ ಎಂದು ಭಾವಿಸಬೇಕು. ಸಂಯುಕ್ತ ಸಹಕಾರಿ ಆಡಳಿತ ಮಂಡಳಿ ಸದಸ್ಯರನ್ನು ಉದ್ದೇಶಿಸಿ ಕೆಲ ಅಭಿಪ್ರಾಯ ನೀಡಲು ಕೇಳಿದ್ದರ ಆಧಾರದ ಮೇಲೆ (ಇತ್ತೀಚೆಗೆ) ಸಂಯುಕ್ತ ಸಹಕಾರಿ ಒಂದು ಮಂಡಳಿಯಾಗಿ ತೀರ್ಮಾನ ತೆಗೆದುಕೊಳ್ಳಲು ವ್ಯಯಕ್ತಿಕ ಹಿತಾಸಕ್ತಿ ಕೆಲಸ ಮಾಡುತ್ತಿದೆಯಾದ್ದರಿಂದ, ಸಂಯುಕ್ತ ಸಹಕಾರಿಗೆ ನೀಡಿದ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರಿಗೆ ವರ್ಗಾಯಿಸುವಂತೆ ತೀರ್ಮಾನಿಸಿ ಅಗತ್ಯ ಸರ್ಕಾರದ ಆದೇಶ ಪಡೆಯಬಹುದೆಂದು ಯೋಚಿಸಿದೆ. ಇದರ ಅರ್ಥ, ಸಂಯುಕ್ತ ಸಹಕಾರಿ ಅಧಿಕಾರ ಮೊಟಕುಗೊಳಿಸುವ ಉದ್ದೇಶದಿಂದಲ್ಲ – ತುರ್ತು ತೀರ್ಮಾನ ತೆಗೆದುಕೊಳ್ಳಲು ಒಬ್ಬ ವ್ಯಕ್ತಿಗೆ ಅಧಿಕಾರ ನೀಡಿದರೆ, ಅದರ ಸದುಪಯೋಗ ಸಾಧ್ಯ. ಆದರೆ ಅಂತಹ ಅಧಿಕಾರಿ ಒಬ್ಬ ವ್ಯಕ್ತಿ ತನ್ನಂತೆ ಕೆಲಸ ಮಾಡಬೇಕು ಮತ್ತು ಅಧಿಕಾರ ದುರುಪಯೋಗವಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಸಂಯುಕ್ತ ಸಹಕಾರಿಗೆ ಇರತಕ್ಕದ್ದು. ಇದನ್ನು 1959ರ ಕಾಯಿದೆಯ ಕಲಂ.2ಎ(3) ಅಡಿ ವಿವಿಧ ಅಧಿಕಾರಿಗಳಿಗೆ ನೀಡದಂತೆ ಎಂದು ಭಾವಿಸಬೇಕು.

ಏಕೀಕೃತ ಸಹಕಾರಿ ಕಾಯಿದೆ ಬಗ್ಗೆ ಅನೂಪ್‌ದೇಶ್‌ಪಾಂಡೆ ಪ್ರತಿ ಪಾದಿಸುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಬಿ.ಎಸ್. ವಿಶ್ವನಾಥ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿಸಿ, ಸಹಕಾರ ಕಾಯಿದೆ ತಿದ್ದುಪಡಿಗೆ ವರದಿ ಪಡೆದಿದ್ದು. ಆ ವರದಿಯಲ್ಲಿ ಸೌಹಾರ್ದ ಕಾಯಿದೆ ಅವಶ್ಯಕತೆ ಇಲ್ಲವೆಂದು ಶಿಫಾರಸ್ ಮಾಡಿ ವರದಿ ಸಲ್ಲಿಸಿತ್ತು. ಆದರೆ ಆ ಸಮಿತಿಯ ಮುಖ್ಯಸ್ಥರೇ ನಿಬಂಧಕರ ಅತಿ ನಿಯಂತ್ರಣದಿಂದ ಸಹಕಾರ ಸಂಸ್ಥೆಗಳ ಸ್ವಾಯತ್ತತೆ ಇಲ್ಲದಂತಾಗುತ್ತಿದೆ ಎಂದು ಎಲ್ಲಾ ವೇದಿಕೆಗಳಲ್ಲಿ ಪ್ರತಿ ಪಾದಿಸುತ್ತಿದ್ದರು. ಆದರೆ ಸ್ವಾಯತ್ತತೆ, ಸ್ವಾತಂತ್ರ್ಯ ಮತ್ತು ಸ್ವಯಂ ನಿಯಂತ್ರಣವನ್ನು 97ನೇ ಸಂವಿಧಾನ ತಿದ್ದುಪಡಿಗೆ ಪೂರ್ವದಲ್ಲಿಯೇ ಕರ್ನಾಟಕ ಸೌಹಾರ್ದ ಸಹಕಾರ ಕಾಯಿದೆ ರೂಪಿಸಿ ಪೂರ್ಣ ಪ್ರಮಾಣದ, ಸ್ವಾಯತ್ತತೆ, ನೀಡಿ ರಚಿಸಿದ "ಸಂಯುಕ್ತ ಸಹಕಾರಿ" ಎಂಬ ಕಲ್ಪನೆ ರಾಷ್ಟ್ರದ ಯಾವುದೇ ಕಾಯಿದೆ ರೂಪಿಸಿಲ್ಲ. ಸಂವಿಧಾನ ತಿದ್ದುಪಡಿಯಲ್ಲಿಯೂ ಪ್ರಜಾಪ್ರಭುತ್ವದಡಿ ರಚನೆಯಾದ ಒಂದು ಮಂಡಳಿಗೆ ಶಾಸನಾತ್ಮಕ ಅಧಿಕಾರ ನೀಡಿದ ಮತ್ತೊಂದು ಕಾಯಿದೆ ರಾಷ್ಟ್ರದಲ್ಲಿ ರಚನೆಯಾಗಿಲ್ಲ. ಈ ಪರಿಕಲ್ಪನೆಗೆ ಪ್ರೋತ್ಸಾಹ ನೀಡುವ ಬದಲು ಅಥವಾ ಅಳವಡಿಸಿಕೊಳ್ಳಲು ಪ್ರಯತ್ನ ಪಡದೆ ಏಕೀಕೃತ ಕಾಯಿದೆ ಪ್ರಸ್ತಾವನೆ ಸೂಚನೆ ನೀಡುವುದು ಸ್ವಾಯತ್ತ ಸಹಕಾರಿ ಆಂದೋಲನಕ್ಕೆ ಮಾಡಿದ ಒಂದು ಅಪಚಾರ. ಸಂಯುಕ್ತ ಸಹಕಾರಿ ತನ್ನ ಜವಾಬ್ದಾರಿ ನಿರ್ವಹಣೆಯಲ್ಲಿ ಕೆಲವು ಬಾರಿ ಎಡವಿರಬಹುದು. ಆದರೆ ಸ್ವಾಯತ್ತತೆ, ಸ್ವಾತಂತ್ರ್ಯ ಮತ್ತು ಸ್ವಯಂ ನಿಯಂತ್ರಣ ಎಂಬ ಪರಿಕಲ್ಪನೆಗೆ ಚ್ಯುತಿ ಬರದಂತೆ ನೋಡಿಕೊಳ್ಳುವ ಜವಾಬ್ದಾರಿ ಈ ಸಂಯುಕ್ತ ಸಹಕಾರಿಗೆ ಕಾಯಿದೆಯಲ್ಲಿಯೇ ಅಧಿಕಾರ ನೀಡಿದೆ. ಅದರ ಉಪಯೋಗ ಪಡೆಯುವ ಜವಾಬ್ದಾರಿ ಸಂಯುಕ್ತ ಸಹಕಾರಿ ಉಪಯೋಗಿಸಬೇಕು. ಇದರ ಜೊತೆಗೆ ಬಹಳಷ್ಟು ರಾಜ್ಯಗಳ ಕಾಯಿದೆಯಲ್ಲಿ ಸರ್ಕಾರದ ಹಣ ಪಡೆಯಲು ಅವಕಾಶ ನೀಡಿದೆ. ಆದರೆ ಸೌಹಾರ್ದ ಕಾಯಿದೆಯಲ್ಲಿ ಸರ್ಕಾರದಿಂದ ಪ್ರತ್ಯಕ್ಷ/ಪರೋಕ್ಷ ಸಹಾಯಧನ ಪಡೆಯಲು ಅವಕಾಶವಿಲ್ಲ ಮತ್ತು ಅದನ್ನು ನಿರ್ಬಂದಿಸಲಾಗಿದೆ. ಈ ಹಿಂದೆ ನಾನು ರಾಯಚೂರಿನಲ್ಲಿ ಕೆಲಸ ಮಾಡುತ್ತಿದ್ದಾಗ, ಆಗಿನ ಜಿಲ್ಲಾ ಪೋಲೀಸ್ ಅಧಿಕಾರಿ ಹರ್ಯಾನ ರಾಜ್ಯದಲ್ಲಿ ಸಹಕಾರಿ ಸಂಘಗಳ ಸ್ಥಾಪನೆ ಮಾಡುವ ಉದ್ದೇಶವೇ ಸರ್ಕಾರದಿಂದ ಹಣ ಪಡೆಯುವುದೇ ಎಂದು ತಿಳಿಸುತ್ತಿದ್ದರು. (ಜಿಲ್ಲಾ ಮಟ್ಟದ ಕ್ರಿಮಿನಲ್ ಪ್ರಕರಣಗಳ ಸಮನ್ವಯ ಸಮಿತಿ ಸಭೆಯಲ್ಲಿ). ಸೌಹಾರ್ದ ಕಾಯಿದೆ ಕಲಂ.53(7) ರಲ್ಲಿ ಸದಸ್ಯ ಸಹಕಾರಿಗಳ ಬೆಳವಣಿಗೆಗೆ, ಸಂಯುಕ್ತ ಸಹಕಾರಿ ಶಾಸನಾತ್ಮಕ ಅಧಿಕಾರದಿಂದ, (ಸದಸ್ಯ ಸಹಕಾರಿಗಳೇ ಆಯ್ಕೆ ಮಾಡಿದ ಸಂಯುಕ್ತ ಸಹಕಾರಿ ಮಂಡಳಿ) ಮಾರ್ಗದರ್ಶಕ, ತತ್ವಜ್ಞಾನಿ ಮತ್ತು ಸ್ನೇಹಿತ ಎಂಬ, ನಿಬಂಧಕರಿಗೆ ನೀಡಿದ ಜವಾಬ್ದಾರಿಯನ್ನು ಸಂಯುಕ್ತ ಸಹಕಾರಿ ಕಾಯಿದೆ ನೀಡಿದೆ. ಇಂತಹ ಪರಿಕಲ್ಪನೆ ಬೇರೆ ಯಾವುದೇ ರಾಜ್ಯ ಕಾಯಿದೆಗಳಲ್ಲಿ ಸೇರಿಸಿಲ್ಲ. ಇದರ ಜೊತೆಗೆ ರಾಷ್ಟ್ರದಲ್ಲಿಯೇ ಪ್ರಥಮ ಬಾರಿಗೆ, ಸೌಹಾರ್ದ ಕಾಯಿದೆಯಲ್ಲಿ ನೋಂದಾವಣೆಯಾದ ದಿನಾಂಕದಂದೇ ಸಂಯುಕ್ತ ಸಹಕಾರಿ ಸದಸ್ಯತ್ವ ಪಡೆಯುವ ಪರಿಕಲ್ಪನೆ. 1959ರ ಕಾಯಿದೆ ಸದಸ್ಯತ್ವ ಪಡೆಯಲು ಪ್ರತಿ ಜಿಲ್ಲಾ ಸಹಕಾರ ಒಕ್ಕೂಟಗಳ ಗುಂಪುಗಾರಿಕೆಯಿಂದ ಸದಸ್ಯತ್ವ ನೀಡದೆ, ಆಯ್ದ ಸಹಕಾರ ಸಂಸ್ಥೆಗಳಿಗೆ ಮಾತ್ರ ಸದಸ್ಯತ್ವ ನೀಡಿ, ತಮ್ಮ ಅಧಿಕಾರವನ್ನು ಮೊಟಕುಗೊಳಿಸದಂತೆ ನೋಡಿಕೊಳ್ಳುವುದೇ ಒಂದು ಹಕ್ಕು ಎಂದು ತಿಳಿದಿದ್ದಾರೆ. ಈ ನೀತಿ ಪ್ರಜಾಪ್ರಭುತ್ವ ನೀತಿಗೆ ವಿರೋದವಾಗಿದೆ ಎಂದು ವಾದಿಸಬಹುದು. ಆದರೆ 1959ರ ಕಾಯಿದೆಯಲ್ಲಿ ಇತ್ತೀಚಿನ ತಿದ್ದುಪಡಿಗಳನ್ನು ಗಮನಿಸಿದಾಗ ಅರ್ಜಿ ಸಲ್ಲಿಸಿದ 60 ದಿವಸಗಳಲ್ಲಿ ಸದಸ್ಯತ್ವದ ಬಗ್ಗೆ ತೀರ್ಮಾನ ತೆಗೆದುಕೊಳ್ಳದಿದ್ದರೆ, ಅಂತಹ ವ್ಯಕ್ತಿಗೆ ಸದಸ್ಯತ್ವ

ನೀಡಲಾಗಿದೆ ಎಂದು ಭಾವಿಸುವಂತೆ ಅವಕಾಶ ಕಲ್ಪಿಸಿದೆ. ಅಂದರೆ ಸದಸ್ಯತ್ವ ನೀಡುವುದು, ಆ ಸಹಕಾರಿ ಸಂಸ್ಥೆಯ ಬೆಳವಣಿಗೆ ದೃಷ್ಟಿಯಿಂದ ವೈವಿದ್ಯತೆ ಇರಲೆಂದು ಎಂದು ಭಾವಿಸತಕ್ಕದ್ದು. ಇದನ್ನು ಪ್ರಜಾಪ್ರಭುತ್ವ ವಿರೋದಿ ಎಂದು ತಿಳಿಯುವುದಿಲ್ಲ. ಸಂವಿಧಾನ ತಿದ್ದುಪಡಿ ನಂತರವೂ, 1959ರ ಕಾಯಿದೆಯಲ್ಲಿ ಸೌಹಾರ್ದ ಕಾಯಿದೆಯಲ್ಲಿ ಬಹಳಷ್ಟು ವ್ಯತ್ಯಾಸವಿದೆ ಮತ್ತು ಈ ವ್ಯತ್ಸಾಸ ಸಹಕಾರಿ ಆಂದೋಲನ ಬೆಳವಣಿಗೆಗೆ ಸಹಕಾರಿಯಾಗಿದೆ. ಹಾಲಿ ಸಂಯುಕ್ತ ಸಹಕಾರಿ ಸಮರ್ಪಕ ಕೆಲಸ ನಿರ್ವಹಿಸುತ್ತಿಲ್ಲವೆಂಬ ಒಂದೇ ಕಾರಣದಿಂದ, ಇದನ್ನು ತಿರಸ್ಕರಿಸಲಾಗದು. ಸಂಯುಕ್ತ ಸಹಕಾರಿ ನಿರ್ದೇಶಕರಲ್ಲಿ ಸೌಹಾರ್ದ ಕಾಯಿದೆ ಬಗ್ಗೆ ಬದ್ದತೆ ಇಲ್ಲದೇ ಇರಬಹುದು. ಆದರೆ ಮುಂದೆ ಈ ಸಂಯುಕ್ತ ಸಹಕಾರಿ ಸಮರ್ಪಕವಾಗಿ ಕೆಲಸ ಮಾಡುವಂತೆ ಉತ್ತಮ ಮುಖಂಡತ್ವಸಿಗುವುದೇ ಇಲ್ಲವೆಂದು ಏಕೆ ಭಾವಿಸಬೇಕು. ಇದಕ್ಕೆ ಭಾರತದ ಮುಖಂಡತ್ವವಹಿಸಿರುವ ಈಗಿನ ಪ್ರಧಾನ ಮಂತ್ರಿಗಳು ರಾಷ್ಟ್ರಕ್ಕೆ ಒಂದು ದಿಟ್ಟ ಮಾರ್ಗದರ್ಶಿ ನೀಡುತ್ತಿಲ್ಲವೇ? ಅಂದರೆ ಭದ್ದತಿ ಇದ್ದ ಮುಖಂಡತ್ವ ಸಂಯುಕ್ತ ಸಹಕಾರಿಗೆ ಸಿಗುವುದಿಲ್ಲವೆಂದು ಏಕೆ ಭಾವಿಸವೇಕು? ಅಂದರೆ ಒಂದು ಜವಾಬ್ದಾರಿಯುತ, ಸಂಯುಕ್ತ ಸಹಕಾರಿ, ಸೌಹಾರ್ದ ಕಾಯಿದೆಗೆ ಒಳ್ಳೆಯ ಮುಖಂಡತ್ವ ನೀಡಿದರೆ, ಸದಸ್ಯರೇ ತಮ್ಮ ಅತ್ಯಲ್ಪ ಸಂಪನ್ಮೂಲವನ್ನು ಕ್ರೊಡಿಕರಿಸಿ ರಚಿಸಿಕೊಂಡ ಸಹಕಾರಿ ಸದಸ್ಯರ ಆರ್ಥಿಕ, ಸಮಾಜಿಕ, ಬೆಳವಣಿಗೆಗೆ ಸ್ವಾಯತ್ತತೆ, ಸ್ವಾತಂತ್ರ್ಯ ಮತ್ತು ಸ್ವಯಂ ನಿಯಂತ್ರಣ ನೀಡಿದ ಸೌಹಾರ್ದ ಕಾಯಿದೆಯೂ 59ರ ಕಾಯಿದೆಗೆ ವಿಲೀನಗೊಳಿಸುವುದು ಸೂಕ್ತವಲ್ಲ. ಈಗಿನ ಭ್ರಷ್ಟ ವ್ಯವಸ್ಥೆಯಲ್ಲಿ ಪ್ರತಿ ಹಂತದಲ್ಲಿ ನಿಬಂಧಕರ ಒಪ್ಪಿಗೆ ಪಡೆಯುವ ಬದಲು ಸ್ವಾಯತ್ತ ಸಂಸ್ಥೆಯಾಗಿ ಸಂಯುಕ್ತ ಸಹಕಾರಿ, ಸದಸ್ಯ ಸಹಕಾರಿಗಳಿಗೆ ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಕ ಪರಿಕಲ್ಪನೆಗೆ ಪೂರಕವಾಗಿದೆ ಎಂದು ಭಾವಿಸುತ್ತೇನೆ. ಆದ್ದರಿಂದ ರಾಷ್ಟ್ರಕ್ಕೆ ಮಾದರಿಯಾಗಿರುವ ಸೌಹಾರ್ದ ಕಾಯಿದೆಯನ್ನು ಏಕೀಕೃತ ಕಾಯಿದೆ ಎಂಬ ಭ್ರಮೆಯಿಂದ ಮುಕ್ತಿಗೊಳಿಸಿ, 1959ರ ಕಾಯಿದೆಯಲ್ಲಿ ನೋಂದಾವಣೆಯಾದ ಹೆಚ್ಚು ಸಹಕಾರ ಸಂಸ್ಥೆಗಳ ಸೌಹಾರ್ದ ಕಾಯಿದೆಗೆ ವರ್ಗಾವಣೆ ಮಾಡುವ ಪ್ರಯತ್ನ ಮಾಡಬೇಕು. ಏಕೆಂದರೆ, ಪ್ರತಿ ಹಂತದಲ್ಲಿಯೂ, ಭ್ರಷ್ಟ ವ್ಯವಸ್ಥೆಯಿಂದ ಮುಕ್ತಿ ನೀಡಿದಾಗ ಮಾತ್ರ ಸಹಕಾರಿ ಆಂದೋಲನ ಇನ್ನು ಶಕ್ತಿಯುತವಾಗಿ ಬೆಳೆಯಲು ಸಾಧ್ಯ.

**ದ್ವಿನಿಯಂತ್ರಣ :**

ಸೌಹಾರ್ದ ಕಾಯಿದೆಯಡಿ ಶಾಸನಾತ್ಮಕ ಅಧಿಕಾರವನ್ನು ನಿಬಂಧಕರಿಗೆ ಮತ್ತು ಸಂಯುಕ್ತ ಸಹಕಾರಿಗೆ ಹಂಚಲಾಗಿದೆ. ಪ್ರಾರಂಭದಲ್ಲಿ ಚಿಂತನೆ ನಡೆದದ್ದು ಸಹಕಾರಿ ನೋಂದಣಿ ಮತ್ತು ಸಹಕಾರಿ ಸಮಾಪನೆ ನಂತರ, ನೋಂದಣಿ ರದ್ದತಿ ಬಿಟ್ಟು, ಉಳಿದೆಲ್ಲ ಶಾಸನಾತ್ಮಕ ಅಧಿಕಾರಗಳನ್ನು ಸಂಯುಕ್ತ ಸಹಕಾರಿಗೆ ನೀಡಬೇಕೆಂಬುದೆ ಆಶಯವಾಗಿತ್ತು. ನೋಂದಣಿಯನ್ನು ರದ್ದತಿ ಎರಡನ್ನು ನಿಬಂಧಕರಿಗೆ ಉಳಿಸಲು ಚಿಂತಿಸಬೇಕೆಂದರೆ, ಹುಟ್ಟು ಮತ್ತು ಸಾವು ಮಾತ್ರ ನಿಬಂಧಕರಿಗೆ ಉಳಿದ ಜೀವಿತಾವಧಿಯಲ್ಲಿ ನಡೆಯುವ ಎಲ್ಲಾ ಕೆಲಸಗಳನ್ನು ಸಂಯುಕ್ತ ಸಹಕಾರಿ ನಿರ್ವಹಿಸಬೇಕೆಂಬ ಆಶಾಭಾವನೆಯಿಂದ. ಈಗಾಗಲೇ ಪ್ರಾರಂಭದಲ್ಲಿ ಹೇಳಿದಂತೆ ಪ್ರಾರಂಭದ ಹಂತದಲ್ಲಿ ಆದ ಕೆಲವು ನ್ಯೂನತೆಗಳಿಂದ ಈ ಸ್ವಾಯತ್ತತೆ, ಸ್ವಾತಂತ್ರ್ಯ ಮತ್ತು ಸ್ವಯಂ ನಿಯಂತ್ರಣಕ್ಕೆ ವಿರುದ್ದವಾಗಿದೆ ಎಂದು ಭಾವಿಸಿದ್ದರೂ, ಅನೂಪ್ ದೇಶ್‌ಪಾಂಡೆ ಅವರೆ ಆ ಸಂಸ್ಥೆಯ ಶಾಸನಾತ್ಮಕ ಪ್ರಮುಖ ವ್ಯಕ್ತಿಯಾಗಿದ್ದರು ಮತ್ತು ಅವರೇ ಸಂಯುಕ್ತ ಸಹಕಾರಿ ಮಂಡಳಿಗೆ ಮಾರ್ಗದರ್ಶಕವಾಗಿರಬೇಕಾಗಿತ್ತು. ಆಗಿನ ಕೆಲವು ನ್ಯೂನತೆಗಳಿಂದ ಸಂಯುಕ್ತ ಸಹಕಾರಿ ಮಂಡಳಿ ನಿರ್ದೇಶಕರು, ತಮ್ಮ ಶಾಸನಾತ್ಮಕ ಅಧಿಕಾರ ಚಲಾಯಿಸಲು ವಿಫಲರಾಗಿ, ಕೆಲವು ಅಧಿಕಾರಿಗಳನ್ನೂ ನಿಬಂಧಕರಿಗೆ ವರ್ಗಾಯಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ದ್ವಿನಿಯಂತ್ರಣವಿರಬಾರದೆಂದೆ, ಮೇಲ್ಕಂಡ ಪರಿಕಲ್ಪನೆಯಿಂದ ಕಾಯಿದೆ ರಚಿಸಲಾಗಿತ್ತು. ದ್ವಿನಿಯಂತ್ರಣದ ಬಗ್ಗೆ ಚಿಂತಿಸುವಾಗ ನಾವು ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಸಹಕಾರ ಬ್ಯಾಂಕ್‌ಗಳನ್ನು ನಿಬಂಧಕರು ಮತ್ತು ಭಾರತೀಯ ರಿಜರ್ವ್ ಬ್ಯಾಂಕ್ ಎರಡೂ ನಿಯಂತ್ರಿಸುತ್ತೇವೆ. ಇತ್ತೀಚೆಗೆ ಇನ್ನು ಹೆಚ್ಚಿನ ಅಧಿಕಾರವನ್ನು ಭಾರತೀಯ ರಿಜರ್ವ್ ಬ್ಯಾಂಕ್ ಪಡೆದಿದ್ದರೂ, ನಿಬಂಧಕರ ನಿಯಂತ್ರಣ ಮುಂದುವರಿದಿದೆ. ಕಾಯಿದೆಯಲ್ಲಿ ನಿಬಂಧಕರು ಏನು ಮಾಡಬೇಕು ಮತ್ತು ಸಂಯುಕ್ತ ಸಹಕಾರಿ ಏನು ಮಾಡಬೇಕೆಂಬ ಸ್ಪಷ್ಟ ಚಿತ್ರಣವಿದೆ. ಅದಕ್ಕಾಗಿ ಯಾರು ಯಾವ ಕೆಲಸ ಮಾಡಬೇಕೆಂಬ ಅಂಶ ತಿಳಿದಿದೆ. ಈ ರೀತಿ ವ್ಯವಸ್ಥೆ ಸಹಕಾರಿ ಆಂದೋಲನಕ್ಕೆ ಪೂರಕ ಎಂದು ಸರ್ಕಾರ ಭಾವಿಸಿದ ನಂತರವೇ ಈ ಕಾಯಿದೆಗೆ ಅಂತಿಮ ರೂಪ ನೀಡಲಾಗಿದೆ. ಮತ್ತು ಸೌಹಾರ್ದ ಕಾಯಿದೆ ರಾಷ್ಟ್ರ ಮಟ್ಟದಲ್ಲಿ ಗಮನ ಸೆಳೆದಿದೆ ಮತ್ತು ಇದಕ್ಕೆ ಹೆಚ್ಚಿನ ಪ್ರಚಾರದ ವ್ಯವಸ್ಥೆ ಮಾಡಬೇಕೆಂದರೆ ಸಂಯುಕ್ತ ಸಹಕಾರಿ ತನ್ನ ಕಾರ್ಯಚಟುವಟಿಗೆಗಳನ್ನು ವಿಸ್ತರಿಸಿ, ಸಹಕಾರಿನ್ನು ಸ್ವಾಯತ್ತ, ಸ್ವಾತಂತ್ರ ಮತ್ತು ಸ್ವಯಂ ನಿಯಂತ್ರಿತ ಸಂಸ್ಥೆಗಳಾಗುವಂತೆ ವ್ಯವಸ್ಥಿತ ತರಬೇತಿ ನೀಡಬೇಕು. ಈಗ ತರಬೇತಿ ಪಡೆದ ಚುನಾಯಿತ ಪ್ರತಿನಿಧಿಗಳು ಸಹಕಾರಿ ಅಧಿಕಾರಿಗಳು ನೌಕರನ್ನು, ಸೇವಕರಂತೆ ನೋಡದೆ, ಸಹಕಾರಿ ಬೆಳವಣಿಗೆಗೆ ಪ್ರಮುಖ ಪಾತ್ರಗಳಂತೆ ನೋಡಿದಾಗ ಮಾತ್ರ ಸಹಕಾರಿ ಬೆಳವಣಿಗೆ ಸಾಧ್ಯ.

# ಸ್ತ್ರೀ ದಿನ - ಸಮಾನತೆಯ ಜಪ

– ಶ್ರೀಮತಿ ಸವಿತ ಎನ್.ಇ, ಕಿರಿಯ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

**ಮಹಿಳೆಯರ ದಿನಾಚರಣೆ –ಸಾರ್ಥಕ ದಿನವಾಗುತ್ತಿದೆ. ಮಹಿಳೆಯರ ಸಾಧನೆಯನ್ನು ಆಚರಿಸಿ ಪಕ್ಷಪಾತದ ವಿರುದ್ಧ ಜಾಗೃತಿ ಮೂಡಿಸಿ– ಸಮಾನತೆಗಾಗಿ ಕ್ರಮ ಕೈಗೊಳ್ಳಿ**

**(Celebrate women's achievement. Raise awareness against bias. Take action for equality.)**

ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಗೆ ಅವಳದೇ ಆದ ಗೌರವ, ಸ್ಥಾನಮಾನಗಳಿರುವುದನ್ನು ಗುರುತಿಸಬಹುದಾಗಿದೆ. ಸ್ತ್ರೀ ಅವಿನಾಶಿ, ಸಂಜೀವಿನಿ. ಹೆಣ್ಣು ವಿಶಿಷ್ಟ ಶಕ್ತಿಗಳ ಸಂಗಮ. ಮಮತೆ, ಕರುಣೆ, ವಾತ್ಸಲ್ಯ, ಅಕ್ಕರೆ ಮತ್ತು ಭೂಮಿತೂಕದ ತಾಳ್ಮೆಯುಳ್ಳ ಸ್ತ್ರೀ ಒಂದು ಪ್ರಬಲ ಶಕ್ತಿ ಎನ್ನುವುದರಲ್ಲಿ ಎರಡು ಮಾತಿಲ್ಲ. ಇಷ್ಟೆಲ್ಲ ಒಳ್ಳೆಯ–ಕೆಟ್ಟ ಘಟನೆಗಳ ನಡುವೆಯೂ ಹೆಣ್ಣೆಂದರೆ ಆಕೆ ಕಾಮನ ಬಿಲ್ಲು. ಸವಾಲುಗಳ ಮಧ್ಯೆ ಮೇಲೆದ್ದು ಬಂದು ತನ್ನ ಬದುಕನ್ನು ಕಟ್ಟಿಕೊಳ್ಳುತ್ತಿರುವಾಗಲೂ ಕೆಂ'ಭೂತ' ತನ್ನ ವಕ್ರದೃಷ್ಟಿಯನ್ನು ಬೀರುವುದು ಬಿಟ್ಟಿಲ್ಲ. ವಿಶೇಷವಾಗಿ ಶಿಕ್ಷಣ ಕ್ಷೇತ್ರದಲ್ಲಿ ಮಹಿಳೆಯ ಸಾಧನೆ ಉಲ್ಲೇಖನಿಯವಾಗಿದೆ. ಉದ್ಯೋಗಾವಕಾಶಗಳೂ ಹೆಚ್ಚುತ್ತಿವೆ. ಆದರೆ ಅಸಮಾನತೆ ದೃಷ್ಟಿಕೋನ ಮಾತ್ರ ಬದಲಾಗಿಲ್ಲ. ಅನ್ನ, ವಸತಿ, ವಿದ್ಯೆ ಇದ್ದರೆ ಅದು ಸಮಾನತೆಯಲ್ಲ. ಸಮಾಜದ ದೃಷ್ಟಿಯಲ್ಲಿ ಸ್ತ್ರೀ ಮತ್ತು ಪುರುಷ ಸಮಾನತೆಯ ತಕ್ಕಡಿಯಲ್ಲಿ ಸಮನಾದಾಗ ಮಾತ್ರ ಯತ್ರ ನಾರ್ಯಸ್ತು ಪೂಜ್ಯಂತೆ ತತ್ರ ದೇವತಾಃ ಎಂಬ ಮಾತಿಗೆ ಮತ್ತು ಮಹಿಳಾ ದಿನಾಚರಣೆಗೂ ಅರ್ಥ ಬರುತ್ತದೆ. ಹೆಣ್ಣೆಂದರೆ ಭೋಗವಲ್ಲ... ಬಾನೆತ್ತರದ ಮನಸ್ಸು ಎಂದು ಅರ್ಥಮಾಡಿಕೊಂಡರೆ ಅಪರಾಧ ಮುಕ್ತ ಸಮಸಮಾಜ ಸಾಧ್ಯ.

## ಅಂತರಾಷ್ಟ್ರೀಯ ಮಹಿಳಾ ದಿನವನ್ನು ಏಕೆ ರಚಿಸಲಾಯಿತು?

ಮಹಿಳಾ ದಿನಾಚರಣೆ ಹಬ್ಬವೂ ಅಲ್ಲ, ಆನಂದದಿಂದ ಆಚರಣೆಗೊಂಡ ದಿನವೂ ಅಲ್ಲ. ನ್ಯೂಯಾರ್ಕ್‌ನಲ್ಲಿ ಕ್ಲಾರಾಜೆಟ್ಕಿನ್ ಎಂಬ ಮಹಿಳಾ ಕಾರ್ಮಿಕೆ ಕೆಲಸಕ್ಕಾಗಿ, ಸಮಾನ ವೇತನಕ್ಕಾಗಿ, ಹೆರಿಗೆ ಸೌಲಭ್ಯಕ್ಕಾಗಿ ತಿಂಗಳುಗಟ್ಟಲೆ ಹೋರಾಟ ನಡೆಸಿ ಗೆಲುವು ಸಾಧಿಸಿದ ದಿನ. ಹುಟ್ಟಿನಿಂದ ಸಾಯುವವರೆಗೂ ದಿನ ನಿತ್ಯ ಒಂದಿಲ್ಲೊಂದು ಸಂಘರ್ಷದಲ್ಲಿ ಬಿದ್ದು ಸಾಧಿಸಲು ಪ್ರಯತ್ನ ಪಡುತ್ತಿರುವ, ಸಂಘರ್ಷದಿಂದ ಸಾಧಿಸಿದ ದಿನದ ಒಂದು ಸ್ಮರಣೆಯ ದಿನವಾಗಿದೆ. ಸಂಕ್ಷಿಪ್ತವಾಗಿ IWD ಎಂದೂ ಕರೆಯಲ್ಪಡುವ ಅಂತರರಾಷ್ಟ್ರೀಯ ಮಹಿಳಾ ದಿನವು ಕಾರ್ಮಿಕ ಚಳುವಳಿಯಿಂದ ಬೆಳೆದು ವಿಶ್ವಸಂಸ್ಥೆಯಿಂದ (UN) ಗುರುತಿಸಲ್ಪಟ್ಟ ವಾರ್ಷಿಕ ಕಾರ್ಯಕ್ರಮವಾಗಿದೆ. ಇದರ ಬೀಜಗಳನ್ನು 1908 ರಲ್ಲಿ ನೆಡಲಾಯಿತು, 15,000 ಮಹಿಳೆಯರು ಕಡಿಮೆ ಕೆಲಸದ ಸಮಯ, ಉತ್ತಮ ವೇತನ ಮತ್ತು ಮತದಾನದ ಹಕ್ಕನ್ನು ಒತ್ತಾಯಿಸಿ ನ್ಯೂಯಾರ್ಕ್ ನಗರದ ಮೂಲಕ ಮೆರವಣಿಗೆ ನಡೆಸಿದರು.

## ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಏಕೆ ಮುಖ್ಯ?

ಅಂತರರಾಷ್ಟ್ರೀಯ ಮಹಿಳಾ ದಿನವು ಮಹಿಳೆಯರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಾಧನೆಗಳನ್ನು ಆಚರಿಸುವ ಜಾಗತಿಕ ದಿನವಾಗಿದೆ. ಮಹಿಳೆಯರ ಸಾಧನೆಗಳನ್ನು ಆಚರಿಸಲು ಅಥವಾ ಮಹಿಳಾ ಸಮಾನತೆಗಾಗಿ ಗುಂಪುಗಳು ಒಟ್ಟಾಗಿ ಸೇರುವುದರಿಂದ ಮಹತ್ವದ ಚಟುವಟಿಕೆಯು ವಿಶ್ವಾದ್ಯಂತ ಸಾಕ್ಷಿಯಾಗಿದೆ. ಸಮಸ್ಯೆ ಎದುರಿಸಿ ಬದುಕುವುದು ಅಗತ್ಯ ಮಹಿಳೆ ಎಲ್ಲಾ ಕ್ಷೇತ್ರಗಳಲ್ಲಿ ಸಾಧನೆ ಮಾಡುವ ಮೂಲಕ ತಮ್ಮ ಛಾಪು ಮೂಡಿಸಿದ್ದರೂ ಎಲ್ಲರೂ ಸುಖಿಗಳಾಗಿದ್ದಾರೆ ಎನ್ನಲಾಗುತ್ತಿಲ್ಲ. ಅಲ್ಲಲ್ಲಿ ಅತ್ಯಾಚಾರ, ದೌರ್ಜನ್ಯ, ವರದಕ್ಷಿಣೆ ಕಿರುಕುಳದಂತಹ ಅಮಾನವೀಯ ಕೃತ್ಯಗಳು ಮಹಿಳೆಯರ ಮೇಲೆ ನಡೆಯುತ್ತಲೇ ಇದೆ. ಇದನ್ನು ಎದುರಿಸಿ ಬದುಕುವ ಧೈರ್ಯವನ್ನು ಮಹಿಳೆಯರು ಮಾಡಬೇಕಾಗಿದೆ. ಆಗ ಮಹಿಳಾ ದಿನಾಚರಣೆಗೆ ಅರ್ಥ ಬರುತ್ತದೆ. ಪ್ರೀತಿ–ಸಾಂಸಾರಿಕ ಸಂಬಂಧಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಹೆಚ್ಚಾಗಿ ನಡೆದಿರುವುದರಲ್ಲಿ ಅಚ್ಚರಿಯೇನಲ್ಲ. ಆದರೆ, ಈ ಅಂಕಿ–ಅಂಶಗಳಲ್ಲಿ ಕಾಣದ, ಹಿಡಿತಕ್ಕೆ ಸಿಗದ ಹಲವು ವಿಭಿನ್ನ ಅಂಶಗಳು ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಹಲವು ಆಯಾಮಗಳನ್ನು ನೀಡುತ್ತವೆ ಎಂಬುದು ಗಮನಾರ್ಹ. ಮಹಿಳೆಯರು ಉದ್ಯೋಗ ಸ್ಥಳದಲ್ಲಿ ಎದುರಿಸುವ ದೌರ್ಜನ್ಯ ಇವುಗಳಲ್ಲಿ ಪ್ರಮುಖವಾದುದು. ಲೈಂಗಿಕ ಕಿರುಕುಳ ಒಳಗೊಂಡಂತೆ ವ್ಯಂಗ್ಯ ಮಾತು, ಟೀಕೆಗಳಿಂದ ಅಸಹನೀಯ ಎನಿಸುವ ಕಿರುಕುಳದವರೆಗೆ ಮಹಿಳೆಯರು ತಮ್ಮ ಮೇಲಧಿಕಾರಿ, ಸಹೋದ್ಯೋಗಿ, ತಮ್ಮ ಕೈಕೆಳಗೆ ಕೆಲಸ ಮಾಡುವ ನೌಕರರಿಂದ ದೌರ್ಜನ್ಯವನ್ನು ಎದುರಿಸುವುದು ಸಾಮಾನ್ಯ. ಹಲವರು ಇದನ್ನೆಲ್ಲ ಯಾರಲ್ಲಿಯೂ ಹೇಳದೆ ಒಳಗೆ ನುಂಗಿಕೊಳ್ಳುತ್ತಾರೆ. ಹೆಚ್ಚಿನವರು ಕ್ರಮೇಣ ಅವುಗಳನ್ನು ಎದುರಿಸುವ, ತಪ್ಪಿಸಿಕೊಳ್ಳುವ ಉಪಾಯಗಳನ್ನು ಕಂಡುಕೊಳ್ಳುತ್ತಾರೆ. ಆದರೆ, ಕೆಲವರು ಇಂಥ ದೌರ್ಜನ್ಯದಿಂದ, ತಮ್ಮ ಬದುಕಿಗೆ ಅನಿವಾರ್ಯವಾದ, ಕೆಲವೊಮ್ಮೆ ಅನಿವಾರ್ಯವಲ್ಲದಿದ್ದರೂ, ಆತ್ಮವಿಶ್ವಾಸ ತಂದುಕೊಡುವ ಉದ್ಯೋಗವನ್ನು ಬಿಟ್ಟುಬಿಡುವ ನಿರ್ಧಾರಕ್ಕೆ ಬರುತ್ತಾರೆ. ಬೇಡದ ಸ್ಥಳಕ್ಕೆ ವರ್ಗಾವಣೆ, ಬಡ್ತಿ ನಿರಾಕರಣೆ, ತಮ್ಮ ಸಾಮರ್ಥ್ಯ–ವಿದ್ಯಾರ್ಹತೆಗೆ ತಕ್ಕುದಾದ ಕೆಲಸವನ್ನು ಬಿಟ್ಟು ಕಡಿಮೆ ಸಂಬಳಕ್ಕೆ ರಾಜಿ ಮಾಡಿಕೊಳ್ಳುವುದು ಇವೆಲ್ಲಕ್ಕೂ

ಕಾರಣವಾಗಬಹುದು.

**ಮಹಿಳೆಯರ ಸಮಾನತೆ ಗಾಳಿಯಲ್ಲಿದ್ದ ತರಗೆಲೆಯಂತೆಯಾಗಲು ಕಾರಣಗಳು :**

ಈ ಸಮಾಜವು ಮಹಿಳೆಯರಿಗೆ ಯಾವಾಗಲೂ ಸ್ವಾತಂತ್ರ್ಯ ಮತ್ತು ಸ್ವಯಂ ಆಡಳಿತವನ್ನು ನಿರಾಕರಿಸುತ್ತಾ ಬಂದಿದೆ. ಈ ಲಿಂಗ ತಾರತಮ್ಯವು ಮಾನವೀಯ ಮುಖವನ್ನು ವಿಕಾರಗೊಳಿಸಿದೆ. ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಮತ್ತು ಮಹಿಳೆಯರಿಗೆ ಉನ್ನತ ಸ್ಥಾನ ಕೊಟ್ಟಿದ್ದೇವೆ ಎಂದು ಹೇಳಿಕೊಳ್ಳುವ ಭಾರತದಲ್ಲಿ ಮಹಿಳೆಯರು ಒಟ್ಟು ಜನಸಂಖ್ಯೆಯ ಶೇಕಡಾ 50 ರಷ್ಟನ್ನು ಪ್ರತಿನಿಧಿಸುತ್ತಾರೆ. ಭಾರತೀಯ ಮಹಿಳೆ ವೈಶಿಷ್ಟ್ಯಪೂರ್ಣವಾಗಿ ಮಹಿಳೆಯು ಸ್ನೇಹ, ಸಹನಶೀಲತೆ, ಮಮತೆ ಮುಂತಾದ ಸದ್ಗುಣಗಳ ಖನಿಜವಾಗಿ ಮನೆಯ ಸರ್ವತೋಮುಖ ಏಳಿಗೆಗಾಗಿ ಪರಿಶ್ರಮಪಡುತ್ತಾ ಆರ್ಥಿಕವಾಗಿ ಪುರುಷನ ಸಮಾನವಾಗಿ ದುಡಿಯುತ್ತಿದ್ದಾಳೆ. ಅವಳಿಗೆ ಸಮಾನತೆಯನ್ನು ನೀಡುವಲ್ಲಿ ಸಾಮಾನ್ಯವಾಗಿ ಈ ಕಾರಣಗಳನ್ನು ಗುರುತಿಸಬಹುದು.

**ಲಿಂಗತಾರತಮ್ಯ :** ಮಹಿಳೆ ಎಷ್ಟೇ ಸಾಧನೆ ಮಾಡಿದರೂ ಈ ಪುರುಷ ಪ್ರಧಾನ ಸಮಾಜ ಆಕೆಯನ್ನು ಇಂದಿಗೂ ತುಳಿಯುತ್ತಲೇ ಇದೆ. ಜಾತಿ, ಲಿಂಗ, ವಯಸ್ಸು, ಧರ್ಮಗಳ ತಾರತಮ್ಯ ಭಾರತದಲ್ಲಿ ಹೆಚ್ಚುತ್ತಲೇ ಇದೆ. ಸಾಂವಿಧಾನಿಕವಾಗಿ ಮಹಿಳೆಗೆ ಸಮಾಜ ಸ್ಥಾನಮಾನ ಇದೆ ಎಂದು ಹೇಳಿದ್ದರೂ ಇದು ತೋರಿಕೆ ಮಾತ್ರ, ನೈಜ ಚಿತ್ರಣ ಬೇರೆಯೇ ಇದೆ. ಕೇವಲ ಮಾತಿನ ಮೂಲಕವೇ ಲಿಂಗ ತಾರತಮ್ಯವನ್ನು ಸಮಾಜ ಎತ್ತಿಹಿಡಿಯುತ್ತಿದೆ. "ನೀನು ಹೆಣ್ಣು, ನಿನ್ನಿಂದ ಇದು ಸಾಧ್ಯವಿಲ್ಲ, ನಿನ್ನ ಅಣ್ಣ ಮಾಡಲಿ, ಅವನು ಹುಡುಗ', "ನನ್ನ ಪತ್ನಿ ಏನ್ನನ್ನೂ ಮಾಡುವುದಿಲ್ಲ, ಅವಳು ಗೃಹಿಣಿ ಅಷ್ಟೇ," ಇಂದಿನ ಸಮಾಜ ಮಹಿಳೆಯನ್ನು ಹೇಗೆ ನೋಡುತ್ತಿದೆ ಎಂದು ತಿಳಿಯಲು ಇಂತಹ ಮಾತುಗಳೇ ಉತ್ತಮ ನಿದರ್ಶನ.

**ವರ್ಣಬೇಧ :** ಹುಡುಗ ಹೇಗಿದ್ದರೂ ನಡೆಯುತ್ತದೆ, ಹುಡುಗಿ ನೀನು ಚೆನ್ನಾಗಿ ಇರಬೇಕು ಈ ಮಾತು ಬಹುಶಃ ಎಲ್ಲ ಹೆಣ್ಣು ಮತ್ತು ಗಂಡು ಮಕ್ಕಳಿರುವ ಮನೆಯಲ್ಲಿ ಕೇಳಿರುವ ಸಾಮಾನ್ಯ ಮಾತು. ಮಹಿಳೆ ಎಂದರೆ ಬೆಳ್ಳಗೆ, ಸುಂದರವಾಗಿ ಇರಬೇಕು ಎಂಬುದನ್ನು ಸಮಾಜ ನಮಗೇ ಅರಿವಿಲ್ಲದಂತೆ ನಮ್ಮ ಮೇಲೆ ಪ್ರಭಾವಿಸುತ್ತಿದೆ. ಎಲ್ಲಾ ಭಾಷೆಯ ವಾಹಿನಿಗಳಲ್ಲೂ ಮಹಿಳೆ ಬೆಳ್ಳಗಾಗಲು ಅಗತ್ಯವಿರುವ ಸೌಂದರ್ಯ ವರ್ಧಕ ಜಾಹೀರಾತುಗಳದ್ದೇ ಕಾರುಬಾರು. ಕಪ್ಪಗಿದ್ದರೆ ಕೀಳರಿಮೆ, ಬೆಳ್ಳಗಿದ್ದರೆ ಮೇಲರಿಮೆ ಎಂಬುದು ಜಾಹೀರಾತು ನಮ್ಮ ಸಮಾಜಕ್ಕೆ ಕಲಿಸುತ್ತಿರುವ ಪಾಠ. ಇನ್ನು ವಿವಾಹದ ಜಾಹೀರಾತುಗಳಲ್ಲಂತೂ, ಬೆಳ್ಳಗೆ, ತೆಳ್ಳಗೆ ಆಕರ್ಷಕ ಬಣ್ಣವಿದ್ದರೆ ಮಾತ್ರ ಹೆಣ್ಣು ಎಂದೇ ಬಿಂಬಿಸುತ್ತಾರೆ, ಇಂತಹ ಆಕ್ರಮಣ ಎಷ್ಟು ಸರಿ?.

**ವೇತನ ತಾರತಮ್ಯ :** ಪುರುಷನ ಸರಿಸಮಾನವಾಗಿ ಕೆಲಸ ಮಾಡಿದರೂ ಮಹಿಳೆಗೆ ಇಂದಿಗೂ ಪುರುಷ ಸಮಾನ ವೇತನ ನೀಡುವುದಿಲ್ಲ, ಕಾರಣ ಆಕೆ ಮಹಿಳೆ. ಮಹಿಳೆಗೂ ಸಮಾನ ವೇತನ ಲಭಿಸಬೇಕು, ಈ ಕಾರಣಗಳಿಗೆ ಮಹಿಳೆ ಹಿಂಜರಿಯದೇ ತನ್ನ ಹಕ್ಕನ್ನು ಪಡೆಯಬೇಕು. ಕೆಲಸಕ್ಕೆ ಸರಿಯಾದ ಸಂಬಳ ಸಿಗಬೇಕೆ ಹೊರತು ಲಿಂಗ ತಾರತಮ್ಯದಿಂದಲ್ಲ.

**ಚುಡಾಯಿಸುವ ಚಾಳಿ :** ಸಾರ್ವಜನಿಕ ಸ್ಥಳಗಳಲ್ಲಿ ಇಂದಿಗೂ ಮಹಿಳೆಯರು, ಹೆಣ್ಣು ಮಕ್ಕಳನ್ನು ಅಶ್ಲೀಲ ಪದಗಳಿಂದ ರೇಗಿಸುವ, ನಿಂದಿಸುವ ಕೆಟ್ಟ ಪ್ರವೃತ್ತಿ ಮುಂದುವರೆದಿರುವುದು ನಿಜಕ್ಕೂ ಅವಮಾನಕರ. ರಸ್ತೆ, ಕಾಲೇಜು, ಮಾರುಕಟ್ಟೆ, ಬಸ್ ನಿಲ್ದಾಣ ಎಲ್ಲೆಂದರಲ್ಲಿ ಮಹಿಳೆಯ ಮೇಲೆ ಮಾನಸಿಕ ಹಲ್ಲೆ ನಡೆಯುತ್ತಲೆ ಇದೆ. ಮಹಿಳೆಗೆ ಎಷ್ಟೆಲ್ಲಾ ರಕ್ಷಣೆ ಸಿಕ್ಕಿದ್ದರೂ ಆಡಳಿತಾತ್ಮಕ ಸಮಸ್ಯೆಯಿಂದ ಆಕೆಗೆ ಇದ್ಯಾವುದೂ ತಲುಪುತ್ತಿಲ್ಲ ಎಂಬುದು ವಿಪರ್ಯಾಸ.

**ಹೆಣ್ಣಿನ ಮನಸ್ಥಿತಿ ಅರಿಯುವುದೇ ಇಲ್ಲ :** ಮಹಿಳೆ ತನ್ನ ಸಾಮರ್ಥ್ಯ ಅರಿತು ಆ ಕ್ಷೇತ್ರದಲ್ಲಿ ತನ್ನ ಸಾಧನೆಯನ್ನು ಮಾಡುತ್ತಲೆ ಇದ್ದಾಳೆ. ಕುಟುಂಬ, ಕೆಲಸ ಎಲ್ಲವನ್ನೂ ಸಾಧ್ಯವಾದಷ್ಟು ನಿಭಾಯಿಸಿಕೊಂಡು ಹೋಗುತ್ತಿದ್ದಾಳೆ. ಆದರೂ ಕೆಲಸ ಮುಗಿಸಿ ಮನೆಗೆ ಬಂದಾಗ ಮನೆಯ ಕೆಲಸ ಮಾಡುವುದಿಲ್ಲ, ಸೋಮಾರಿ, ಗರ್ವಿಷ್ಠೆ ಎಂಬ ಬಿರುದುಗಳು ಆಕೆಗೆ ಸಿಗುತ್ತದೆ. ಇತರ ಕುಟುಂಬದ ಮಾದರಿ ಗೃಹಿಣಿಯರಿಗೆ ಹೋಲಿಸಿ ಮೂದಲಿಸಲಾಗುತ್ತದೆ. ಮಹಿಳೆಗೂ ವಿಶ್ರಾಂತಿ ಅಗತ್ಯವಿದೆ ಎಂಬುದನ್ನು ಯಾಕೆ ಯಾರೂ ತಿಳಿಯುವುದಿಲ್ಲ, ಇತರ ಕುಟುಂಬದ ಹೆಣ್ಣು ಮಕ್ಕಳೊಂದಿಗೆ ಹೋಲಿಸುವುದು ಎಷ್ಟು ಸರಿ.

**ಅನಗತ್ಯ ಗಮನ ನೀಡುವುದು :** ಹೆಣ್ಣು ಸಾಕಷ್ಟು ಕಾರಣಗಳಿಂದಾಗಿ ತನ್ನ ಕುಟುಂಬ, ಊರು ಎಲ್ಲವನ್ನೂ ಬಿಟ್ಟು ಕೆಲಸಕ್ಕೆಂದು ವಲಸೆ ಬಂದಿರುತ್ತಾರೆ. ಆದರೆ ಅವರು ನೆಲೆಸಿರುವ ಮನೆಯ ಮಾಲೀಕರು, ನೆರಹೊರೆಯವರು ಅಥವಾ ಆಕೆಯ ಸುತ್ತಮುತ್ತಲಿನವರು ಆಕೆಯ ಮೇಲೆ ಅನಗತ್ಯವಾಗಿ ಗಮನ ನೀಡುವುದು, ಆಕೆಯ ಬಗ್ಗೆ ಚರ್ಚಿಸುವ ಚಾಳಿಯನ್ನೂ ಇಂದಿಗೂ, ಮುಂದೆಯೂ ಮಾಡುತ್ತಲೇ ಇರುತ್ತಾರೆ. ಅಪ್ಪಿತಪ್ಪಿ ತಡವಾಗಿ ಮನೆಗೆ ಬಂದರಂತೂ ಅವರ ವರ್ತನೆಯೇ ಭಿನ್ನವಾಗಿರುತ್ತದೆ.

**ಒಂಟಿಯಾಗಿ ಪ್ರವಾಸ ಸಾಧ್ಯವೇ ಇಲ್ಲ :** ಬಾಹ್ಯಾಕಾಶ ಯೋಜನೆಯಂಥ ಮಹಾನ್ ಸಾಧನೆಗಳಿಗೆ ಮಹಿಳೆ ಸಹ ಕೈಜೋಡಿಸಿದ್ದಾಳೆ. ತಾನೂ ಎಲ್ಲಾ ಕ್ಷೇತ್ರದಲ್ಲೂ, ಅಸಾಧ್ಯವಾದದ್ದನ್ನು ಸಾಧನೆ ಮಾಡಬಲ್ಲಳು ಎಂದು ಸಾಬೀತು ಪಡಿಸಿದ್ದಾಳೆ. ಆದರೂ ಮನೆಯಲ್ಲಿ ಪೋಷಕರು ಒಂಟಿಯಾಗಿ ಪ್ರವಾಸಕ್ಕೆ ಹೋಗಲು, ಪ್ರಯಾಣ ಮಾಡಲು ಸಮ್ಮತಿಸುವುದಿಲ್ಲ. ಹೆಣ್ಣು ಎಲ್ಲೇ ಹೋದರೂ ಅಣ್ಣ, ತಮ್ಮ, ಅಪ್ಪ ಅಥವಾ ಯಾರಾದರೂ ಪುರುಷ ಜತೆಯಲ್ಲಿ ಇರಬೇಕು ಎಂಬ ನಿಯಮ. ಆದರೆ ಪುರುಷರು ಮಹಿಳೆಯೊಂದಿಗೆ ಹೇಗೆ ವರ್ತಿಸಬೇಕು, ಹೇಗೆ ಗೌರವಿಸಬೇಕು ಎಂದು

25ನೇ ಪುಟಕ್ಕೆ.....

# ಸಮಾನತೆ

## (2022ರ ಅಂತರ ರಾಷ್ಟ್ರೀಯ ಮಹಿಳಾ ದಿನದ ಧ್ಯೇಯ "ಸುಸ್ಥಿರ ನಾಳೆಗಾಗಿ ಇಂದು ಲಿಂಗ ಸಮಾನತೆ)

– ಶ್ರೀಮತಿ ದಿವ್ಯ ಟಿ, ಹಿರಿಯ ಸಹಾಯಕಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

**ಸಮಾನತೆ :**

ಸಮಾನತೆಯು ಬಹುಸ್ವರೂಪವನ್ನು ಹೊಂದಿದೆ. ಸಮಾನತೆಯು ಅನುಭವಿಸುವಂತದ್ದು. ಎಲ್ಲರೂ ಸಮಾನರಾಗಿದ್ದು, ಸಮಾನರಾಗಿ ಹುಟ್ಟುತ್ತಾರೆ ಮತ್ತು ಎಲ್ಲರೂ ಸಮಾನರಾಗಿ ಇರಬೇಕೆಂದು ನಿಸರ್ಗವು ಬಯಸುತ್ತದೆ. ಸಮಾನತೆ ಎಂದರೆ ಎಲ್ಲರನ್ನು ಎಲ್ಲಾ ಕ್ಷೇತ್ರಗಳಲ್ಲಿಯೂ ಸಮಾನರಾಗಿ ಕಾಣುವುದಾಗಿದೆ. ಸಮಾನತೆಯ ಹಕ್ಕು ಸಂವಿಧಾನದ ಮೂಲಭೂತ ಹಕ್ಕುಗಳಲ್ಲೊಂದಾಗಿದೆ.

**ಲಿಂಗ ಸಮಾನತೆ :**

ಅಸಮಾನತೆಯನ್ನು ನಿವಾರಿಸಿ ಮಹಿಳೆಯರು ಮತ್ತು ಪುರುಷರ ನಡುವೆ ಸಮಾನತೆಯನ್ನು ಸಾಧಿಸುವುದಾಗಿದೆ. ಲಿಂಗವನ್ನು ಲೆಕ್ಕಿಸದೇ ಹಕ್ಕುಗಳು ಮತ್ತು ಕರ್ತವ್ಯಗಳ ವಿಷಯದಲ್ಲಿ ಸಮಾನರಾಗಿ ಕಾಣುವುದು ಲಿಂಗ ಸಮಾನತೆಯಾಗಿದೆ. ಮಹಿಳೆಯರು ಮತ್ತು ಪುರುಷರು ಅರ್ಥಮಾಡಿಕೊಂಡು ಪರಸ್ಪರ ಗೌರವದಿಂದ ಕಾಣುವುದು ಮುಖ್ಯವಾಗಿದೆ.

**ಲಿಂಗ ಸಮಾನತೆಯ ಅಗತ್ಯತೆ :**

ಕುಟುಂಬದಲ್ಲಿ ಗಂಡು ಮತ್ತು ಹೆಣ್ಣು ಮಗು ಇಬ್ಬರನ್ನೂ ಸಹ ಒಂದೇ ಮನೋಭಾವದಿಂದ ಕಾಣುವ ಮನಸ್ಥಿತಿ ಬೆಳೆಸಲು, ಕೌಟುಂಬಿಕ ಆರೋಗ್ಯ, ಮಿತ ಪರಿವಾರ ಮತ್ತು ಜೀವನದ ಗುಣಮಟ್ಟವನ್ನು ಉತ್ತಮಗೊಳಿಸಲು, ಮಹಿಳೆಯರ ಬಗ್ಗೆ ಇರುವ ಕೀಳರಿಮೆಯನ್ನು ತೊಡೆದು ಹಾಕಿ, ಎಲ್ಲಾ ಕ್ಷೇತ್ರಗಳಲ್ಲಿಯೂ ಸಮಾನ ಅವಕಾಶಗಳನ್ನು ಪಡೆಯಲು ಮತ್ತು ಸಮಾನತೆಯ ಮನೋಭಾವವನ್ನು ಬೆಳೆಸಲು, ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಪಾಲ್ಗೊಳ್ಳುವಂತೆ ಉತ್ತೇಜಿಸಲು, ಮಹಿಳೆಯರ ಸಾಮಾಜಿಕ ಚಾಲನೆ, ಬೌದ್ಧಿಕ ಉನ್ನತಿ ಮತ್ತು ಸಬಲತೆಯನ್ನು ಬೆಳೆಸಲು, ಮಹಿಳೆಯರಲ್ಲಿ ಇರುವ ಅಪೂರ್ವ ಶಕ್ತಿ ಸಾಮರ್ಥ್ಯ, ಸೃಜಶೀಲ ಯೋಚನೆಗಳನ್ನು ಅಭಿವೃದ್ಧಿಗೊಳಿಸಿ, ಅವುಗಳನ್ನು ಇಡೀ ಸಮಾಜಕ್ಕೆ ಬಳಕೆಯಾಗುವಂತೆ ವ್ಯವಸ್ಥೆಗೊಳಿಸಲು, ಮಹಿಳೆಯರ ಕಾರ್ಯಕ್ಷೇತ್ರ ಹಾಗೂ ಒಟ್ಟು ಜೀವನ ಕ್ರಮದಲ್ಲಿ ಪುರುಷರ ಸಮಾನವಾಗಿ ಬೆಳೆಯಲು, ಮಹಿಳೆಯರ ಶಿಕ್ಷಣ ಮತ್ತು ಉದ್ಯೋಗ ಸೌಲಭ್ಯಗಳನ್ನು ಉನ್ನತಿಗೊಳಿಸಿ ಆತ್ಮವಿಶ್ವಾಸದೊಂದಿಗೆ ಸ್ವಾವಲಂಬಿಗಳನ್ನಾಗಿ ರೂಪಿಸಲು ಲಿಂಗ ಸಮಾನತೆಯು ಅಗತ್ಯವಾಗಿದೆ.

**ಲಿಂಗ ಸಮಾನತೆ ಸಾಧನೆ :**

ಐವತ್ತು ವರ್ಷಗಳ ಹಿಂದೆಯೇ ಚಂದ್ರನ ಮೇಲೆ ಇಳಿದಿದ್ದೇವೆ. ಕಳೆದ ದಶಕದಲ್ಲಿ, ಮಾನವನ ಪೂರ್ವಜರನ್ನು ಕಂಡು ಹಿಡಿದಿದ್ದೇವೆ. ಮೊದಲ ಬಾರಿಗೆ ಕಪ್ಪು ಕುಳಿಯ ಛಾಯಾ ಚಿತ್ರವನ್ನು ತೆಗೆದಿದ್ದೇವೆ. ಜಗತ್ತು ಅಭೂತಪೂರ್ವ ಪ್ರಗತಿಯನ್ನು ಸಾಧಿಸಿದೆ. ಆದಾಗ್ಯೂ, ಯಾವುದೇ ರಾಷ್ಟ್ರವೂ ಸಹ ಇದುವರೆಗೂ ಲಿಂಗ ಸಮಾನತೆಯನ್ನು ಸಾಧಿಸಿಲ್ಲ. ಇದರ ನಡುವೆ ಅಂದಾಜಿನ ಪ್ರಕಾರ 2.7 ಮಿಲಿಯನ್ ಉದ್ಯೋಗಗಳಿಗೆ ಕಾನೂನಿನ ನಿರ್ಬಂಧಗಳಿಂದಾಗಿ ಪುರುಷರಂತೆ ಮಹಿಳೆಯರಿಗೆ ಅವಕಾಶ ಇಲ್ಲದಂತಾಗಿದೆ. 2019ರ ವೇಳೆಗೆ ಮಹಿಳೆಯರಲ್ಲಿ ಶೇ.25ಕ್ಕಿಂತಲೂ ಕಡಿಮೆ ಸಂಸದರಾಗಿದ್ದರು. ಈಗಲೂ ಸಹ ಮೂವರಲ್ಲಿ ಒಬ್ಬರು ಲಿಂಗ ಆಧಾರಿತ ಕಿರುಕುಳವನ್ನು ಅನುಭವಿಸುತ್ತಿದ್ದಾರೆ.

ಕೋವಿಡ್–19ನಂತಹ ಸನ್ನಿವೇಶದಲ್ಲಿ, ಹವಾಮಾನ ಬಿಕ್ಕಟ್ಟು ಮತ್ತು ವಿಪತ್ತಿನಂತಹ ಈ ಸಂದರ್ಭದಲ್ಲಿ ಲಿಂಗ ಸಮಾನತೆಯನ್ನು ಸಾಧಿಸಿ, ಮುನ್ನಡೆಸುವುದು 21ನೇ ಶತಮಾನದ ಅತಿದೊಡ್ಡ ಜಾಗತಿಕ ಸವಾಲುಗಳಲ್ಲಿ ಒಂದಾಗಿದೆ. ಹವಾಮಾನ ಬದಲಾವಣೆಯು ಪುರುಷರಿಗಿಂತ ಮಹಿಳೆಯರ ಮೇಲೆ ಹೆಚ್ಚಾಗಿ ಪ್ರಭಾವ ಬೀರುತ್ತದೆ.

ಇಂತಹ ಸಂದರ್ಭದಲ್ಲಿ ಲಿಂಗ ಸಮಾನತೆಯನ್ನು ಸಾಧಿಸಲು ಮಹಿಳೆಯರ ಪರಿಣಾಮಕಾರಿ ನಾಯಕತ್ವ ಮತ್ತು ಅವರ ಭಾಗವಹಿಸುವಿಕೆಯು ಹೆಚ್ಚು ಪರಿಣಾಮಕಾರಿಯಾಗಿದೆ. ಸುಸ್ಥಿರ ಅಭಿವೃದ್ಧಿ ಮತ್ತು ಲಿಂಗ ಸಮಾನತೆಯನ್ನು ಸಾಧಿಸಲು ಮಹಿಳೆಯರ ಸಬಲೀಕರಣವು ಅತ್ಯಗತ್ಯವಾಗಿದೆ. ಮಹಿಳೆಯರ ಸಾರ್ವಜನಿಕ ಹಾಗೂ ವೈಯಕ್ತಿಕ ಜೀವನ, ನಿರ್ಧಾರ ತೆಗೆದುಕೊಳ್ಳುವಿಕೆಯಲ್ಲಿ ಸಮಾನ ಭಾಗವಹಿಸುವಿಕೆ ಮತ್ತು ಪೀಳಿಗೆಯ ಸಮಾನತೆಯನ್ನು ಸಾಧಿಸಬೇಕಿದೆ. ಕೋವಿಡ್–19ನ ಬಿಕ್ಕಟ್ಟಿನ ಸಂದರ್ಭದಲ್ಲಿಯೂ ಸಹ ಮಹಿಳೆಯರು ಫ್ರಂಟ್ ಲೈನ್ ವಾರಿಯರ್ ಆಗಿ ಕಾರ್ಯನಿರ್ವಹಿಸಿದ್ದಾರೆ. ಇಂದು ಲಿಂಗ ಸಮಾನತೆಯನ್ನು ಸಾಧಿಸದೇ ಇದ್ದಲ್ಲಿ ಸುಸ್ಥಿರ ಮತ್ತು ಸಮಾನ ಭವಿಷ್ಯವನ್ನು ಕಾಣಲು ಅಸಾಧ್ಯ.

ಅಂತರ ರಾಷ್ಟ್ರೀಯ ಮಹಿಳಾ ದಿನದ ಈ ಸಂದರ್ಭದಲ್ಲಿ ಸಾಮಾನ್ಯ ಮಹಿಳೆಯರನ್ನು ತಮ್ಮ ಧೈರ್ಯ ಮತ್ತು ನಿರ್ಣಯಗಳ ಮೂಲಕ ತನ್ನ ದೇಶದ ಮತ್ತು ಸಮುದಾಯದಲ್ಲಿ ಅಸಾಧಾರಣ ಪಾತ್ರವನ್ನು ನಿರ್ವಹಿಸುವಂತೆ ಮಾಡುವುದರ ಮೂಲಕ ಲಿಂಗ ಸಮಾನತೆಯ ಸಾಧನೆ ಹಾಗೂ ಬದಲಾವಣೆಯ ಪ್ರಗತಿಯ ಸಾಧನೆಯನ್ನು ಪ್ರತಿಬಿಂಬಿಸುವ ಸಮಯ ಇದಾಗಿದೆ. ಇದರೊಂದಿಗೆ ಮಹಿಳೆಯರು ಮಹಿಳೆಯರಲ್ಲಿಯೇ (ತನ್ನವರಲ್ಲಿ) ಹಾಗೂ ತನ್ನಲ್ಲಿಯೇ ಸಮಾನತೆಯನ್ನು ಸಾಧಿಸಬೇಕಾದ

ಅನಿವಾರ್ಯತೆ ಇದೆ.

**ಮಹಿಳೆಯರಲ್ಲಿ (ತನ್ನವರಲ್ಲಿ) ಸಮಾನತೆ :**

ಹೆಣ್ಣು ಎಂಬ ಪದ ಚಿಕ್ಕದಾದರೂ ಅದರ ಒಳಾರ್ಥ ವಿಶಾಲವಾಗಿದೆ. ಒಬ್ಬ ಮಹಿಳೆ ಹುಟ್ಟಿನಿಂದ ತನ್ನ ಜೀವಿತಾವಧಿ ಮುಗಿಯುವವರೆಗೂ ಒಂದಲ್ಲ ಒಂದು ರೀತಿಯಲ್ಲಿ ತನ್ನ ಆಸೆ, ಆಕಾಂಕ್ಷೆ, ಸುಖಗಳನ್ನೆಲ್ಲಾ ಮರೆತು ಬೇರೆಯವರ ಒಳಿತಿಗೆ ದುಡಿಯುವುದೇ ಕಾಯಕವಾಗಿದೆ. ಆದಾಗ್ಯೂ ಸಹ, ಹೆಣ್ಣಿಗೆ ಹೆಣ್ಣೇ ಶತ್ರು ಎಂಬ ಮಾತಿದೆ. ಕೆಲವೊಂದು ಸಂದರ್ಭಗಳಲ್ಲಿ ಮಹಿಳೆಯಿಂದಲೇ ಮಹಿಳೆ ಶೋಷಣೆಗೆ ಒಳಗಾಗುತ್ತಾಳೆ. ಅನೇಕ ಸಂದರ್ಭಗಳಲ್ಲಿ, ಒಂದು ಮಗು ಹೆಣ್ಣಾಗಿ ಹುಟ್ಟಿದ ಕೂಡಲೇ ಅದರ ಹುಟ್ಟಿನೊಂದಿಗೆ ಹಲವಾರು ನಿರ್ಬಂಧಗಳನ್ನು ಹೇರಲು ಆ ಕುಟುಂಬದಲ್ಲಿರುವ ಮಹಿಳೆಯರೇ ಪ್ರಯತ್ನಿಸಿದರೆ, ಸಾಮಾಜಿಕ ಜೀವನದಲ್ಲಿ ಹೆಣ್ಣಿನ ಏಳಿಗೆಯನ್ನು ಮತ್ತೊಂದು ಹೆಣ್ಣೇ ಬಯಸುವುದಿಲ್ಲ. ಈ ರೀತಿಯಾದಲ್ಲಿ ಮತ್ಯಾರು ಅವಳಿಗೆ ಪ್ರೋತ್ಸಾಹ ನೀಡಲು ಸಾಧ್ಯ. ಈ ನಿಟ್ಟಿನಲ್ಲಿಯೂ ಸಹ ಹೆಣ್ಣಿನ ಮನಸ್ಸನ್ನು ಮತ್ತೊಂದು ಹೆಣ್ಣೇ ಅರ್ಥ ಮಾಡಿಕೊಂಡು, ತಮ್ಮಲ್ಲಿಯೇ ಇರುವ ಅಸಮಾನತೆಯನ್ನು ನಿವಾರಿಸಿಕೊಂಡು, ಸಮಾನತೆಯನ್ನು ಸಾಧಿಸಬೇಕಿದೆ.

**ತನ್ನೊಳಗೆ ಸಮಾನತೆ :**

ಮಹಿಳೆಯರು ತನ್ನೊಳಗೂ ಸಹ ಸಮಾನತೆಯನ್ನು ಸಾಧಿಸಬೇಕಾದ ಅನಿವಾರ್ಯತೆ ಇದೆ. ಮಹಿಳೆಯ ಜೀವನವನ್ನು ವಿವಾಹ ಪೂರ್ವ ಮತ್ತು ವಿವಾಹ ನಂತರ ಎಂದು ನೋಡುವುದಾದರೆ, ವಿವಾಹ ಪೂರ್ವದಲ್ಲಿ ತನ್ನ ವಿದ್ಯಾಭ್ಯಾಸ, ವೃತ್ತಿ ಬದುಕು ಸೇರಿದಂತೆ ಭವಿಷ್ಯದ ಬಗ್ಗೆ ಅನೇಕ ಕನಸುಗಳನ್ನು ಕಟ್ಟಿಕೊಂಡಿರುತ್ತಾಳೆ. ಆದರೆ, ವಿವಾಹದ ನಂತರ ಆ ಎಲ್ಲಾ ಅರಳಲಿರುವ ಕನಸುಗಳನ್ನು ಚಿವುಟಿ ಗಂಡ, ಮನೆ, ಮಕ್ಕಳು, ಅತ್ತೆ, ಮಾವ ಎಂದು ಹೀಗೆ ಒಂದು ಚೌಕಟ್ಟಿನಲ್ಲಿಯೇ ಬದುಕಿಬಿಡುತ್ತಾಳೆ. ಪುರುಷರಿಗೆ ಹೋಲಿಸಿದರೆ ಮಹಿಳೆಯರು ದೈಹಿಕವಾಗಿ ಸ್ವಲ್ಪ ಕಡಿಮೆ ಇದ್ದರೂ ಸಹ ಜವಾಬ್ದಾರಿ ನಿರ್ವಹಿಸುವಿಕೆ, ನಿರ್ಧಾರ ತೆಗೆದುಕೊಳ್ಳುವಿಕೆ, ಬೌದ್ಧಿಕವಾಗಿ, ಮಾನಸಿಕವಾಗಿ ಪುರುಷರೊಂದಿಗೆ ಸರಿಸಮಾನಳಾಗಿರಬಲ್ಲಳು. ಈ ಸನ್ನಿವೇಶವಿರುವಾಗ ಮಹಿಳೆಯರು ತನ್ನ ಮನೋಭಾವದಲ್ಲಿ ಅವಕಾಶ ಕೊಟ್ಟರೆ ಎಂಬುದರ ಬದಲಾಗಿ ತಾವೇ ಅವಕಾಶ ಸೃಷ್ಟಿಸಿಕೊಂಡು ತನ್ನ ಭವಿಷ್ಯದ ಕುರಿತು ಚಿಗುರಿದ ಕನಸುಗಳನ್ನು ಈಡೇರಿಸಿಕೊಳ್ಳಬೇಕು. ಇಂದಿನ ಯುಗದಲ್ಲಿ ಮಹಿಳೆ ಯಾವುದರಲ್ಲಿಯೂ ಸಹ ಹಿಂದಿಲ್ಲ. ಆದರೆ, ಬಹುತೇಕ ಮಹಿಳೆಯರು ಮದುವೆಯ ನಂತರ ತಮ್ಮ ಬದುಕನ್ನು ಪಂಜರದೊಳಗಿಟ್ಟ ಗಿಳಿಗಳಂತಾಯ್ತು ಅಂದುಕೊಳ್ಳುವುದು ಸಹಜವಾದರೂ ಆ ಪಂಜರದಾಚೆ ಹೊರ ಬಂದು ತಮ್ಮ ಕನಸಗಳನ್ನು ನನಸಾಗಿಸಿಕೊಳ್ಳಬೇಕು. ಇದಕ್ಕಾಗಿ ಮಹಿಳೆಯರು ಮನಸ್ಸು ಮಾಡಿ, ಕಟ್ಟಳೆಗಳಾಚೆ ತಮ್ಮ ಬದುಕಿನಲ್ಲಿಯೂ ಸಹ ಯಶಸ್ಸು ಸಾಧಿಸಲು ತನ್ನೊಳಗೆ ಸಮಾನತೆಯನ್ನು ಸಾಧಿಸಬೇಕಿದೆ.

.....23ನೇ ಪುಟದಿಂದ

ಮಾತ್ರ ಯಾವುದೇ ನಿಯಮವಿಲ್ಲ.

**ಉಡುಪು ನೋಡಿ ತೀರ್ಮಾನಿಸುವುದು :** ನಾವು ಹಾಕುವ ಬಟ್ಟೆ ನಮ್ಮನ್ನು ಹಾಗೂ ನಮ್ಮ ವ್ಯಕ್ತಿತ್ವವನ್ನು ಅಳೆಯುವುದಿಲ್ಲ ಎಂದು ನಮಗೆ ಗೊತ್ತು, ಆದರೆ ಸಮಾಜಕ್ಕೆ ಇದರ ಬಗ್ಗೆ ಅರಿವಿಲ್ಲವೇ. ಆಕೆಯ ಬಟ್ಟೆ ಅವಳ ಚಾರಿತ್ರ್ಯವನ್ನು ತೀರ್ಮಾನಿಸುವುದಿಲ್ಲ ಅಥವಾ ತನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಲು ಪ್ರೇರಣೆ ನೀಡುವುದು ಅವಳ ಉದ್ದೇಶವಲ್ಲ. ಅವಳ ಉಡುಪಿನ ಆಯ್ಕೆ ಅವಳ ಹಕ್ಕು, ಆದರೆ ಅದನ್ನು ಸಮಾಜ ತಪ್ಪಾಗಿ ಅರ್ಥೈಸುತ್ತಿದೆ. ಬದಲಾಗಬೇಕಿರುವುದು ಮಹಿಳೆಯಲ್ಲ, ಸಮಾಜ, ನಿಮ್ಮ ದೃಷ್ಟಿ. ಇಂದಿಗೂ ಮಹಿಳೆಗೆ ಸಮಾಜದಲ್ಲಿ ಆಗುತ್ತಿರುವ ದೌರ್ಜನ್ಯಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ!. ಇಂತಹ ಬಹುತೇಕ ಆಲೋಚನೆಗಳಿಗೆ ಮಹಿಳೆ ಎದೆಗುಂದದೆ, ತನ್ನ ಸಾಧನೆಯತ್ತ ಗಮನ ನೀಡುತ್ತಾ, ಜೀವನವನ್ನು ಸಂಪೂರ್ಣವಾಗಿ ಅಂದಿಕೊಂಡಂತೆ ಆನಂದಿಸುವುದನ್ನು ಕಲಿಯಬೇಕಿದೆ.

ನಮ್ಮ ರಾಷ್ಟ್ರೀಯತೆಯನ್ನು ಮಾತೆಗೆ ಹೋಲಿಸಿ ಭಾರತಮಾತೆ ಎಂದು ಕರೆಯಲಾಗುತ್ತದೆ ಭಾರತವು ಕೃಷಿ ಪ್ರಧಾನ ದೇಶವಾಗಿದ್ದುದರಿಂದ ಭೂಮಿಯೇ ಜೀವನಾಧಾರಕ್ಕೆ ಪ್ರಮುಖ ಮೂಲವಾಗಿದೆ. ಇದನ್ನು ಕೂಡ ಭೂತಾಯಿ ಎಂಬ ರೂಪದಲ್ಲಿ ಹೆಣ್ಣಿಗೆ ಹೋಲಿಸಲಾಗಿದೆ. ಮಹಿಳೆಗೆ ಇಷ್ಟೆಲ್ಲಾ ಸ್ಥಾನಮಾನ ಅಧಿಕಾರಗಳನ್ನು ಕೊಟ್ಟಿದ್ದಾಗಿಯೂ ಭಾರತದಲ್ಲಿ ಮಹಿಳೆಯರನ್ನು ದ್ವಿತೀಯ ದರ್ಜೆಯಲ್ಲಿ ನೋಡಿಕೊಳ್ಳಲಾಗುತ್ತಿದೆ. ಅಂತೆಯೇ ಮಹಿಳೆ ಇಲ್ಲದ ಜೀವನವು ಅಪೂರ್ಣವಿದಾಗಲು ಕೂಡ ಮಹಿಳೆಯರನ್ನು ಜೀವನದ ಇನ್ನೊಂದು ಅರ್ಧ ಎಂದು ಯಾವಾಗಲೂ ಪರಿಗಣಿಸಿಲ್ಲ.

ಆದರೆ ಮಹಿಳೆಯರ ಸಬಲೀಕರಣಕ್ಕೆ ಇತಿಹಾಸವನ್ನು ಅವಲೋಕಿಸಿದಾಗ ಸರಕಾರವು ಮಹಿಳೆಯರ ಸಶಕ್ತಿಕರಣ ಕೆಲವೊಂದು ಕಾನೂನುಗಳನ್ನು ಜಾರಿಗೆ ತಂದಿತು. ಆದರೆ ಮಹಿಳೆಯರನ್ನು ಸಬಲೀಕರಣಗೊಳಿಸಬೇಕು ಎಂಬ ಇಚ್ಚೆ ಬಂದಿದ್ದ ಜನರಿಂದ ಮಾತ್ರ ಮಹಿಳೆಯರ ಸಶಕ್ತಿಕರಣ ಮಾಡಲು ಸಾಧ್ಯವಾಗುವುದಿಲ್ಲ. ಮಹಿಳೆಯರು ಸ್ವಂತ ತಾವೇ ಮುಂದೆ ಬಂದು ಯಾವುದೇ ಜಾತಿ ಧರ್ಮ ಎಂದು ಭೇದ ಮಾಡದೆ ತಮ್ಮ ಸಶಕ್ತೀಕರಣದ ಕಡೆಗೆ ಒಗ್ಗಟ್ಟಾಗಿ ಮುಂದೆ ಸಾಗಬೇಕು ಸಾಮಾನ್ಯ ಮಹಿಳೆಯರು ಈಗಾಗಲೇ ಸಶಕ್ತಿಕರಣ ಗೊಂಡು ಮಹತ್ವದ ಸಾಧನೆ ಮಾಡಿದ ಮಹಿಳೆಯರಿಂದ ಪ್ರಭಾವಿತರಾಗಿ ಅವರ ಮಾರ್ಗವನ್ನು ಅನುಸರಿಸಲು ಪ್ರಯತ್ನಿಸಬೇಕು.

**ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಷಯಗಳು**

# ಕೇಂದ್ರ ಹಾಗೂ ರಾಜ್ಯ ಸರಕಾರಗಳ ಮಹಿಳಾ ಅಭಿವೃದ್ಧಿ ಯೋಜನೆಗಳು

– ಶ್ರೀ ಶಂಕರ್ ಎಸ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತ

**ಪೀಠಿಕೆ :**

'ಸ್ತ್ರೀ' ಇದು ಬರೀ ಪದವಲ್ಲ. ಶಕ್ತಿ, ಮನಸ್ಥಿತಿ, ಸಾಧ್ಯತೆ, ಮಮತೆ, ಸ್ಫೂರ್ತಿ, ಸಂಭ್ರಮವೂ ಹೌದು. ಪೂಜ್ಯನೀಯ ಪಟ್ಟದಿಂದಾಚೆಗೂ ಆಕೆ ತನ್ನನ್ನು ತಾನು ನಿಭಾಯಿಸಿಕೊಳ್ಳುವಷ್ಟು ಸ್ವತಂತ್ರ ಮನೋಭಾವವನ್ನು ಹೊಂದಿದ್ದಾಳೆ. ಹಾಗಂತ ಪೂರ್ತಿಯಾಗಿ ಶೋಷಣೆಯಿಂದ ಹೊರಗಾಗಿದ್ದಾಳೆ ಎನ್ನಲು ಸಾಧ್ಯವಿಲ್ಲ.

ಮಹಿಳೆಯರ ಮೇಲೆ ಆಗುತ್ತಿರುವ ಅತ್ಯಾಚಾರ, ವರದಕ್ಷಿಣೆ ಕಿರುಕುಳ, ಮರ್ಯಾದೆ ಹತ್ಯೆ, ಶಿಕ್ಷಣ ನಿರಾಕರಣೆ, ಹೆಣ್ಣು ಭ್ರೂಣ ಹತ್ಯೆ ಈ ರೀತಿಯ ನಾನಾ ತರಹದ ಹಿಂಸೆಗಳಿಗೆ ಅದೆಷ್ಟೋ ಹೆಣ್ಣು ಜೀವಗಳು ಬಲಿಯಾಗುತ್ತಿವೆ. ಇಷ್ಟೆಲ್ಲ ಅನಾಚಾರಗಳು ನಡೆಯುತ್ತಿದ್ದರೂ ಆಕೆಗೊಂದು ದಿನವಿದೆ. ಅದೇ ಅಂತಾರಾಷ್ಟ್ರೀಯ ಮಹಿಳಾ ದಿನ.

ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ವಿಶ್ವದ ಅನೇಕ ದೇಶಗಳಲ್ಲಿ ಆಚರಿಸಲಾಗುತ್ತದೆ. ರಾಷ್ಟ್ರೀಯ, ಜನಾಂಗೀಯ, ಭಾಷಾ, ಸಾಂಸ್ಕೃತಿಕ, ಆರ್ಥಿಕ ಅಥವಾ ರಾಜಕೀಯ ಯಾವುದೇ ವಿಭಾಗಗಳನ್ನು ಪರಿಗಣಿಸದೆ ಮಹಿಳೆಯರು ತಮ್ಮ ಸಾಧನೆಗಳಿಗಾಗಿ ಗುರುತಿಸಲ್ಪಟ್ಟ ದಿನವಾಗಿದೆ. ಆರಂಭಿಕ ವರ್ಷಗಳಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನವು ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿನ ಮಹಿಳೆಯರು ಜಾಗತಿಕವಾಗಿ ಹೊಸ ಆಯಾಮವನ್ನು ಪಡೆದುಕೊಳ್ಳಲು ಸಹಕಾರಿಯಾಯಿತು. ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಮಹಿಳೆಯರ ಹಕ್ಕು ಮತ್ತು ರಾಜಕೀಯ ಹಾಗೂ ಆರ್ಥಿಕ ರಂಗಗಳಲ್ಲಿ ಅವರ ಭಾಗವಹಿಸುವಿಕೆಯನ್ನು ಬೆಂಬಲಿಸುವ ಸಲುವಾಗಿ ಆಚರಿಸಲಾಗುತ್ತದೆ.

**ಅಂತಾರಾಷ್ಟ್ರೀಯ ಮಹಿಳಾ ದಿನ 2022ರ ಧ್ಯೇಯ ವಾಕ್ಯ :**

"Gender equality today for a sustainable tomorrow" "ಸುಸ್ಥಿರ ನಾಳೆಗಾಗಿ ಇಂದು ಲಿಂಗ ಸಮಾನತೆ" ಎಂಬ ಧ್ಯೇಯ ವಾಕ್ಯದೊಂದಿಗೆ ಈ ಬಾರಿಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಈ ದಿನಾಚರಣೆಯು ಮಹಿಳೆಯರ ಹಕ್ಕುಗಳು ಮತ್ತು ಲಿಂಗ ಸಮಾನತೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ದಿನವಾಗಿದೆ. ಈ ದಿನವು ಮಹಿಳೆಯರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಾಧನೆಗಳನ್ನು ತೋರಿಸುವ ದಿನವಾಗಿದೆ

ಈ ಉದ್ದೇಶಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಹಿಳೆಯರಿಗೆ ಅನುಕೂಲವಾಗುವ ಅನೇಕ ಯೋಜನೆಗಳನ್ನು ಜಾರಿಗೊಳಿಸಿದೆ, ಅವು ಯಾವುವೆಂದರೆ,

**ಸಾಂತ್ವನ ಯೋಜನೆ :**

ವಿವಿಧ ರೀತಿಯ ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಸಮಾಲೋಚನೆ ಮತ್ತು ಅಗತ್ಯ ನೆರವನ್ನು ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ. ವರದಕ್ಷಿಣೆ ಕಿರುಕುಳ, ಕೌಟುಂಬಿಕ ದೌರ್ಜನ್ಯ, ಅತ್ಯಾಚಾರ ಹಾಗೂ ಲೈಂಗಿಕ ಕಿರುಕುಳಕ್ಕೊಳಗಾದ ಮಹಿಳೆಯರಿಗೆ ನೆರವು ಒದಗಿಸುವುದು.

**ಬಾಲಕಿಯರ ವಸತಿ ನಿಲಯ ಯೋಜನೆ :**

ಗ್ರಾಮಾಂತರ ಹಾಗೂ ಹಿಂದುಳಿದ ಪ್ರದೇಶಗಳ ಹೆಣ್ಣು ಮಕ್ಕಳಲ್ಲಿ ಶಿಕ್ಷಣ ಪ್ರೋತ್ಸಾಹಿಸಲು ಹಾಗೂ ಶಾಲೆ ಬಿಡುವ ಹೆಣ್ಣುಮಕ್ಕಳ ಸಂಖ್ಯೆಯನ್ನು ಕಡಿಮೆ ಮಾಡಲು ಇಲಾಖಾ ವತಿಯಿಂದ ಬಾಲಕಿಯರ ವಸತಿ ನಿಲಯಗಳನ್ನು ನಡೆಸಲಾಗುತ್ತಿದೆ. ಸರ್ಕಾರ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಯಲ್ಲಿ ಪ್ರೀ ಮೆಟ್ರಿಕ್ ಮತ್ತು ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿನಿಯರಿಗೆ ವಸತಿ ಸೌಕರ್ಯ ಕಲ್ಪಿಸುವುದು.

**ಪ್ರಧಾನ್ ಮಂತ್ರಿ ಸುರಕ್ಷಿತ್ ಮಾತೃತ್ವ ಅಭಿಯಾನ :**

ಪ್ರಧಾನ್ ಮಂತ್ರಿ ಸುರಕ್ಷಿತ್ ಮಾತೃತ್ವ ಅಭಿಯಾನ ಯೋಜನೆಯು ಸ್ಥಿರ ದಿನ ತಂತ್ರ ಗುಣಮಟ್ಟದ ತಾಯಿಯ ಆರೋಗ್ಯ ಸೇವೆಗಳ ವ್ಯಾಪ್ತಿಯನ್ನು ಪ್ರಸವಪೂರ್ಣ ಆರೈಕೆ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ.

**ಉಜ್ವಲಾ ಯೋಜನೆ :**

ಮಹಿಳೆಯರ ಸಬಲೀಕರಣಕ್ಕಾಗಿ ಉಜ್ವಲಾ ಯೋಜನೆ ಅಡಿಯಲ್ಲಿ ಉಚಿತವಾಗಿ ಗ್ಯಾಸ್ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ.

**ಮಹಿಳಾ ಶಕ್ತಿ ಕೇಂದ್ರ ಯೋಜನೆ :**

ಗ್ರಾಮೀಣ ಪ್ರದೇಶಗಳ ಮಹಿಳೆಯರ ಕೌಶಲ್ಯ ಅಭಿವೃದ್ಧಿ, ಉದ್ಯೋಗ, ಡಿಜಿಟಲ್ ಸಾಕ್ಷರತೆ ಮತ್ತು ಆರೋಗ್ಯ ಸುಧಾರಣೆಯನ್ನು ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ.

**ರಾಜ್ಯ ಸರ್ಕಾರದ ಉದ್ಯೋಗಸ್ಥ ಮಹಿಳೆಯರ ವಸತಿಗೃಹ ನಿರ್ಮಾಣ ಯೋಜನೆ :**

ಪಟ್ಟಣ ಹಾಗೂ ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುವ ಮಹಿಳೆಯರಿಗೆ ಸುರಕ್ಷಿತ ಹಾಗೂ ಯೋಗ್ಯ ವಸತಿ ಸೌಕರ್ಯವನ್ನು ಕಲ್ಪಿಸುವುದು.

**ಸ್ಥೈರ್ಯ ಯೋಜನೆ :**

ನಿಗದಿತ ಅವಧಿಯೊಳಗೆ ಆರ್ಥಿಕ ನೆರವನ್ನು ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಸ್ಥೈರ್ಯ ನಿಧಿಯಿಂದ ಅತ್ಯಾಚಾರ ದೌರ್ಜನ್ಯಕ್ಕೊಳಗಾದ ಮಹಿಳೆಯು ಪ್ರಥಮ ವರ್ತಮಾನ ವರದಿ ದಾಖಲಾದ 24 ಗಂಟೆಗಳೊಳಗಾಗಿ ತುರ್ತು ಪರಿಹಾರಕ್ಕಾಗಿ ರೂ.25000/–ಗಳನ್ನು ನೀಡಲಾಗುವುದು. ಹೆಚ್ಚಿನ ವೈದ್ಯಕೀಯ ಚಿಕಿತ್ಸೆ ಅಗತ್ಯವಿದ್ದಲ್ಲಿ ಪ್ರತಿ ಪ್ರಕರಣಕ್ಕೆ ಗರಿಷ್ಠ ರೂ.2.00ಲಕ್ಷ ಪರಿಹಾರ ನೀಡಲು ಅವಕಾಶವನ್ನು ಕಲ್ಪಿಸಲಾಗಿದೆ. ಅತ್ಯಾಚಾರ ದೌರ್ಜನ್ಯದಿಂದ ಅಥವಾ ಆಸಿಡ್‌ದಾಳಿಗೊಳಗಾಗಿ ಮೃತಪಟ್ಟಲ್ಲಿ, ಅಂತಹ ಮಹಿಳೆಯ ಕುಟುಂಬಕ್ಕೆ ರೂ.1.00 ಲಕ್ಷ ಮರಣ

ಪರಿಹಾರವನ್ನು ನೀಡಲಾಗುವುದು.

**ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆ :**

ಕೇಂದ್ರ ಸರ್ಕಾರದ ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆಯು ಮಕ್ಕಳ ಲಿಂಗಾನುಪಾತ ಹಾಗೂ ಮಹಿಳಾ ಸಬಲೀಕರಣಗೊಳಿಸುವ ಸಮರ್ಪಕವಾಗಿ ಅಗತ್ಯ ನೆರವನ್ನು ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ.

**"ಗೆಳತಿ" ವಿಶೇಷ ಚಿಕಿತ್ಸಾ ಘಟಕ ಯೋಜನೆ :**

ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಒಂದೇ ಸೂರಿನಡಿ ಸಮಗ್ರ ನೆರವು ಒದಗಿಸುವುದು. ಸಂಕಷ್ಟ ಪರಿಸ್ಥಿತಿಯಲ್ಲಿರುವ ಮಹಿಳೆಯರಿಗೆ ಅಗತ್ಯ ನೆರವು ಒದಗಿಸುವುದು.

**ಸುಕನ್ಯಾ ಸಮೃದ್ಧಿ ಯೋಜನೆ :**

ಹೆಣ್ಣುಮಕ್ಕಳ ಭವಿಷ್ಯವನ್ನು ಭದ್ರಪಡಿಸಿಕೊಳ್ಳಲು ಪೋಷಕರನ್ನು ಉತ್ತೇಜಿಸುವ ಉದ್ದೇಶದಿಂದ ಸುಕನ್ಯಾ ಸಮೃದ್ಧಿ ಯೋಜನೆಯನ್ನು 2015 ರಲ್ಲಿ ಪ್ರಾರಂಭಿಸಲಾಯಿತು. ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು 'ಬೇಟಿ ಬಚಾವೊ, ಬೇಟಿ ಪದಾವೊ' ಅಭಿಯಾನದಡಿ ಈ ಯೋಜನೆಯನ್ನು ಪ್ರಾರಂಭಿಸಿದರು. ಇದು ಒಂದು ಸಣ್ಣ ಠೇವಣಿ ಯೋಜನೆಯಾಗಿದ್ದು, ಹೆಣ್ಣು ಮಗುವಿನ ಶಿಕ್ಷಣ ಮತ್ತು ವಿವಾಹ ವೆಚ್ಚಗಳನ್ನು ಪೂರೈಸುತ್ತದೆ. ಸುಕನ್ಯಾ ಸಮೃದ್ಧಿ ಯೋಜನೆಯ ಖಾತೆಯನ್ನು ಅಪ್ರಾಪ್ತ ಹೆಣ್ಣು ಮಗುವಿನ ಕಡೆಗೆ ಗುರಿಯಿರಿಸಲಾಗಿದೆ. ಹೆಣ್ಣು ಮಗುವಿಗೆ 10 ವರ್ಷ ತುಂಬುವ ಮೊದಲು ಅವಳ ಹುಟ್ಟಿನಿಂದ ಯಾವುದೇ ಸಮಯದವರೆಗೆ ಪೋಷಕರು ಅಥವಾ ಕಾನೂನು ಪಾಲಕರು ಖಾತೆಯನ್ನು ತೆರೆಯಬಹುದು. ಈ ಯೋಜನೆ ಪ್ರಾರಂಭವಾದ ದಿನಾಂಕದಿಂದ 21 ವರ್ಷಗಳವರೆಗೆ ಕಾರ್ಯನಿರ್ವಹಿಸುತ್ತದೆ.

**ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಯೋಜನೆ :**

ಮಹಿಳೆಯರ ಅಭಿವೃದ್ಧಿಗಾಗಿ ಐದು ವರ್ಷಗಳ ಕಾಲ ಸತತವಾಗಿ ಕಾರ್ಯೋನ್ಮುಖವಾಗಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ಮತ್ತು ವ್ಯಕ್ತಿಗಳಿಗೆ ಹಾಗೂ ಕ್ರೀಡೆ, ಸಾಹಿತ್ಯ, ಕಲೆ, ಶಿಕ್ಷಣ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಿರುವ ಮಹಿಳೆಯರಿಗೆ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ನೀಡಲಾಗುತ್ತಿದೆ. ಸಂಕಷ್ಟ ಪರಿಸ್ಥಿತಿಯಲ್ಲಿ ಧೈರ್ಯಸಾಹಸದಿಂದ ಇತರರ ಜೀವವನ್ನು ರಕ್ಷಿಸಿದಂತಹ ಮಹಿಳೆಗೆ ವೀರಮಹಿಳೆ ಪ್ರಶಸ್ತಿ ನೀಡಲಾಗುತ್ತಿದೆ.

**ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳ ನಿರ್ಮಾಣ ಹಾಗೂ ವಿಸ್ತರಣೆಗಾಗಿ ಅನುದಾನ ಯೋಜನೆ :**

ಉದ್ಯೋಗಸ್ಥ ಮಹಿಳೆಯರಿಗೆ ಹಾಗೂ ಉದ್ಯೋಗಕ್ಕಾಗಿ ತರಬೇತಿ ಪಡೆಯುತ್ತಿರುವ ಮಹಿಳೆಯರಿಗೆ (ಒಂದು ವರ್ಷಕ್ಕೆ ಮೀರದಂತೆ) ಕಡಿಮೆ ಬೆಲೆಯಲ್ಲಿ ಹಾಗೂ ಸುರಕ್ಷಿತವಾದಂತಹ ವಸತಿ ನಿಲಯಗಳನ್ನು ಒದಗಿಸುವುದಕ್ಕೋಸ್ಕರ ಅನುದಾನವನ್ನು ಸ್ವಯಂಸೇವಾ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗುವುದು.

**ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005 ನಿಯಮ 2006 :**

ಸಂವಿಧಾನದಲ್ಲಿ ಖಾತ್ರಿಪಡಿಸಿರುವ ಮಹಿಳೆಯರ ಹಕ್ಕುಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ರಕ್ಷಣೆ ಮಾಡುವುದು ಈ ಕಾಯ್ದೆಯ ಉದ್ದೇಶ. ಕುಟುಂಬದೊಳಗಾಗುವ ಯಾವುದೇ ಬಗೆಯ ಹಿಂಸೆಗೊಳಗಾದ ಮಹಿಳೆಯರಿಗೆ ಸಂಬಂಧಿಸಿದಂತೆ ಹೆಚ್ಚು ಪರಿಣಾಮಕಾರಿಯಾದ ಸಂರಕ್ಷಣೆ ಒದಗಿಸುವುದಕ್ಕಾಗಿ ಭಾರತ ಸರ್ಕಾರವು ಕೌಟುಂಬಿಕ ಹಿಂಸೆಯಿಂದ ಮಹಿಳೆಯರನ್ನು ಸಂರಕ್ಷಣಾ ಅಧಿನಿಯಮ 2005 ಹಾಗೂ ನಿಯಮ 2006ನ್ನು ಅಕ್ಟೋಬರ್ 26 ರಿಂದ ಜಾರಿಗೆ ಬಂದಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ಈ ಕಾಯ್ದೆಯನ್ನು ಜೂನ್ 2007 ರಿಂದ ಅನುಷ್ಠಾಗೊಳಿಸಲಾಗುತ್ತಿದೆ.

**ಮಹಿಳಾ ಉದ್ದೇಶಿತ ಆಯವ್ಯಯ :**

ಲಿಂಗಾಧಾರಿತ ದೃಷ್ಟಿಕೋನವು ಮಾನವ ಅಭಿವೃದ್ಧಿಯಲ್ಲಿ ಮಹಿಳೆಯರಿಗೆ ನೀಡಿರುವ ಪರಸ್ಪರ ಸ್ಥಾನಮಾನವನ್ನು ವಿವಿಧ ಅಭಿವೃದ್ಧಿ ಸೂಚ್ಯಾಂಕಗಳಾದ ಶಿಕ್ಷಣ, ಆರೋಗ್ಯ, ಆದಾಯ, ರಕ್ಷಣೆ, ಬದುಕುಳಿಯುವಿಕೆ, ಕೆಲಸದಲ್ಲಿ ಭಾಗವಹಿಸುವಿಕೆ, ನಿರ್ಣಯಗಳ ಕೈಗೊಳ್ಳಲಾಗುವುದು.

**ಕೇಂದ್ರ ಸರ್ಕಾರದ ಒನ್ ಸ್ಟಾಪ್ ಸೆಂಟರ್(ಸಖಿ)**

ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಒಂದೇ ಸೂರಿನಡಿ ಸಮಗ್ರ ಸೌಲಭ್ಯ ಅಂದರೆ, ವೈದ್ಯಕೀಯ ಚಿಕಿತ್ಸೆ ಮತ್ತು ನೆರವು, ಪೊಲೀಸ್ ನೆರವು, ಕಾನೂನು ನೆರವು ಹಾಗೂ ಸಮಾಲೋಚನೆ ವ್ಯವಸ್ಥೆಗಳನ್ನು ಒದಗಿಸಲು ಭಾರತ ಸರ್ಕಾರವು ಮೊದಲನೇ ಹಂತದಲ್ಲಿ ದೇಶಾದ್ಯಂತ ಎಲ್ಲಾ ರಾಜ್ಯಗಳಲ್ಲಿ ತಲಾ ಒಂದರಂತೆ ಒನ್ ಸ್ಟಾಪ್ ಸೆಂಟರ್‌ನ್ನು ಸ್ಥಾಪಿಸಲು ಉದ್ದೇಶಿಸಿರುತ್ತದೆ. ಈ ಘಟಕವು ದಿನದ 24 ಗಂಟೆಗಳೂ ಕಾರ್ಯನಿರ್ವಹಿಸುತ್ತಿದೆ.

**ಸ್ವಾಧಾರಗೃಹ (ಸಂಕಷ್ಟಪರಿಸ್ಥಿತಿಯಲ್ಲಿರುವ ಮಹಿಳೆಯರಿಗಾಗಿ ಯೋಜನೆ) :**

2016–17ನೇ ಸಾಲಿನಿಂದ ಕೇಂದ್ರ ಸರ್ಕಾರವು ಸ್ವಾಧಾರ ಮತ್ತು ಅಲ್ಪಾವಧಿ ವಸತಿಗೃಹ ವಿಲೀನಗೊಳಿಸಿ ಸ್ವಾಧಾರಗೃಹ ಯೋಜನೆ ಅನುಷ್ಠಾನಕ್ಕೆ ತಂದಿರುತ್ತಾರೆ. ಕಷ್ಟಕರ ಪರಿಸ್ಥಿತಿಯಲ್ಲಿರುವ ಮಹಿಳೆಯರಿಗಾಗಿ ಆಶ್ರಯ, ಆಹಾರ, ಬಟ್ಟೆ, ತರಬೇತಿ ಹಾಗೂ ಶಿಕ್ಷಣ, ವಸತಿ, ವೃತ್ತಿತರಬೇತಿ, ಸಮಾಲೋಚನೆ, ವೈದ್ಯಕೀಯ ನೆರವು, ಕುಟುಂಬಕ್ಕೆ ಪುನರ್‌ಮಿಲನ ಮತ್ತು ಕಾನೂನಿನ ನೆರವನ್ನು ನೀಡುವುದರ ಮೂಲಕ ಆರ್ಥಿಕವಾಗಿ, ಸಾಮಾಜಿಕವಾಗಿ ಸಶಕ್ತರಾಗುವಂತೆ ಮಾಡುವುದು ಯೋಜನೆಯ ಉದ್ದೇಶ. ರಾಜ್ಯದಲ್ಲಿ ಪ್ರಸ್ತುತ 48 ಸ್ವಾಧಾರಗೃಹ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

**ಉಪಸಂಹಾರ :**

ಹೆಣ್ಣು ಎಷ್ಟೆ ಗಟ್ಟಿಗಳಾಗಿದ್ದರೂ ನೋವಿಗೆ ಕರಗುತ್ತಾಳೆ. ಕಷ್ಟಕ್ಕೆ ಮರುಗುತ್ತಾಳೆ. ತನ್ನೊಳಗಿನ ಮೃದು ಮನಸ್ಸಿಗೆ ಸೋಲುತ್ತಾಳೆ. ತಾಯಿಯಾಗಿ ಪೋಷಿಸುತ್ತಾಳೆ. ಹೂವಿನ ಮೃದು ಎಸಳಿನಂತೆ ಅವಳ ಮನಸ್ಸು. ಹೆಣ್ಣೆಂದರೆ ಹಾಗೇ.. ಅವಳು ಈ ಸೃಷ್ಟಿಯ ಕೊಡುಗೆ. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳು.

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 28
Licensed to post without Prepayment License No. PMG BG/WPP-384/2020-2022.



# ಉನ್ನತ ಸ್ಥಾನ ಗೌರವಕ್ಕೆ ಪಾತ್ರರಾದರೂ ಕಷ್ಟಕಾಲದಲ್ಲಿ ಸಹಕರಿಸಿದವರನ್ನು ಕೃತಜ್ಞತೆ ಸಲ್ಲಿಸಿದ ಪದ್ಮಶ್ರೀ ಮಿರಾಬಾಯಿ ಚಾನು

– ಶ್ರೀ ಸೂರ್ಯಕಾಂತ ರ್‍ಯಾಕಲೆ, ಕಾನೂನು ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕಲಬುರಗಿ ಪ್ರಾಂತ.



ದೇಶದ ಸಪ್ತ ಸಹೋದರಿ ರಾಜ್ಯಗಳಲ್ಲಿ ಒಂದಾದ ಮಣಿಪುರ ರಾಜ್ಯದ ಇಂಫಾಲ ದಿಂದ 30 ಕೀ.ಮಿ ದೂರದ ನಾಂಗಪೂಕ ಕಾರಚಿಂಗ ಗ್ರಾಮವು ಕಾಡನ್ನು ಹೊಂದಿರುವ ಪ್ರಕೃತಿ ಸೌಂದರ್ಯದ ಗ್ರಾಮದಲ್ಲಿ 12 ವರ್ಷದ ಬಾಲಕಿ ತನ್ನ ಅಣ್ಣನ ಜೋತೆ ದಿನನಿತ್ಯ ಕುಟುಂಬದ ಉಪಜೀವನಕ್ಕಾಗಿ ಕಾಡಿಗೆ ಹೋಗಿ ಉರವಲು ಕಟ್ಟಿಗೆಯನ್ನು ಸಂಗ್ರಹಿಸಿ ಮಾರಾಟ ಮಾಡಿದರಿಂದ ಬರುವ ಹಣದಿಂದ ಕುಟುಂಬ ಸಾಗುತಿದ್ದ ಬಡ ಕುಟುಂಬದ ಈ ಬಾಲಕಿ ಅಣ್ಣನಿಗಿಂತ ಅಧಿಕ ಕಟ್ಟಿಗೆ ಹೋರುವಂತಹ ಶಕ್ತಿವಂತಳಾಗಿದ್ದವಳು, ಚಿಕ್ಕಂದಿನಿಂದಲು ಕ್ರೀಡೆಗಳಲ್ಲಿ ಆಸಕ್ತಿ ಹೊಂದಿದವಳು ಗ್ರಾಮದ ಕ್ರೀಡಾಪಟುವನ್ನು ಭೇಟಿ ಮಾಡಿ ನಾನು ಬಾಕ್ಸಿಂಗ ಕಲಿಯಬೇಕು ಎಂದು ತನ್ನ ಆಸೆಯನ್ನು ವ್ಯಕ್ತಪಡಿಸಿದಾಗ ನೀನು ಕುಳ್ಳ ಹುಡಗಿ ನಿನ್ನ ಕೈಗಳು ಉದ್ದವಿಲ್ಲದ ಕಾರಣ ಬಾಕ್ಸಿಂಗ್ ಮಾಡುವವರು ನಿನ್ನ ಮುಖದ ಮೇಲೆ ನೇರವಾಗಿ ಆಕ್ರಮಣ ಮಾಡುತ್ತಾರೆ ಆದ್ದರಿಂದ ನೀನು ವೆಟ್ ಲಿಫಟಿಂಗ ಕ್ರೀಡೆಗೆ ಸೂಕ್ತ ಆದರೆ ಸದರಿ ತರಬೇತಿ ಕೇಂದ್ರ ಗ್ರಾಮದ ಸುತ್ತ ಮುತ್ತವಿಲ್ಲ ಇಂಫಾಲನಲ್ಲಿ ಇದೆ ಎಂದು ಸಲಹೆ ನೀಡಿದಾಗ ಬಾಲಕಿಗೆ ತುಂಬ ಸಂತೋಷವಾಗಿ ಇಂಫಾಲ ನಗರಕ್ಕೆ ದಿನನಿತ್ಯ ಗ್ರಾಮದಿಂದ ಹಾದು ಹೊಗುವ ಹಾಲಿನ ಲಾರಿ/ವ್ಯಾನ್‌ಗಳ ಚಾಲಕರನ್ನು ವಿನಂತಿಸಿಕೊಂಡು ತನ್ನಲ್ಲಿರುವ ರೂ.5. 10 ನೀಡಿ ಅತ್ಯಂತ ಪ್ರೀತಿಯಿಂದ ಅಣ್ಣ ಅಣ್ಣ ಎಂದು ಕರೆಯುತಿದ್ದರಿಂದ ಅವಳಲ್ಲಿರುವ ಕ್ರೀಡೆಯ ಆಸಕ್ತಿ ಕಂಡು ಹಾಗೂ ಅವಳ ಪ್ರೀತಿಯ ಮಾತುಗಳಿಂದ ಚಾಲಕರು ಬಾಲಕಿಯನ್ನು ತಮ್ಮ ಸ್ವಂತ ಸಹೋದರಿ ಎಂದು ಭಾವಿಸಿ ಅವಳಿಂದ ಹಣವನ್ನು ಪಡೆಯದೆ ಚಾಲಕರೆ ಅವಳ ಗ್ರಾಮ ಪ್ರವೇಶಿಸುವಾಗ ವಾಹನದ ಹಾರ್ನ ಮಾಡಿ ಅವಳು ಬರುವವರೆಗೂ ಹೋಗುತಿದ್ದಿಲ ಇಂತಹ ಬಾಲಕಿ ತನ್ನ ಪರಿಶ್ರಮದಿಂದ ಸನ್ 2020 ರಲ್ಲಿ ಜರುಗಿದ ಟೋಕಿಯೊ ಒಲಿಂಪಿಕ್ಸ್ ನಲ್ಲಿ ವೆಟ್ ಲಿಫಟಿಂಗ 49 ಕಿ.ಗ್ರಾಂ ಮಹಿಳಾ ವಿಭಾಗದಲ್ಲಿ ರಜತ ಪದಕ ಗೆಲ್ಲುವುದರ ಮುಖಾಂತರ ಭಾರತದ ಕೀರ್ತಿ ಪತಾಕೆ ಹಾರಿಸಿದ 26 ವರ್ಷದ ಬಾಲಕಿ ಸರಕಾರ ಹಾಗೂ ಜನಸಾಮನ್ಯರ ಗೌರವಕ್ಕೆ ಪಾತ್ರರಾದರು ತನಗೆ ಸಹಾಯ ಮಾಡಿದವರನ್ನು ಕೃತಜ್ಞತೆ ಸಲ್ಲಿಸುವ ಗೋಸಕರ ಲಾರಿ/ವ್ಯಾನ ಚಾಲಕರನ್ನು ಅವ್ಹಾನಿಸಿ ಅವರನ್ನು ಗೌರವಪೂರ್ವಕವಾಗಿ ಬರಮಾಡಿಕೊಂಡು ಔತನಕೂಟ ಏರ್ಪಡಿಸಿ ನೆನಪಿನ ಕಾಣಿಕೆ ನೀಡಿ ಕೃತಜ್ಞತೆಯ ಗೌರವ ಸಲ್ಲಿಸಿದ 26 ವರ್ಷದ ಒಲಿಂಪಿಕ್ಸ್ ಪದಕ ವಿಜೇತೆ ಆ ಬಾಲಕಿಯ ಮಿರಾಬಾಯಿ ಚಾನು.

**ಕುಟುಂಬದ ವಿವರ :**

**ಜನನ :** 08.08.1994

**ತಂದೆ :** ಸಾಯಿಕೊಮ ಕೀರ್ತಿ ಮಿಥಾಯಿ

**ತಾಯಿ :** ಓಂಗಾಯಿ ತೊಂಬಿ ಲಿಮಾಯಿ

**ಗ್ರಾಮ :** ನಾಂಗಪೊಕ ಕಾರಚಿಂಗ, ಪೂರ್ವ ಇಂಫಾಲ ಮಣಿಪುರ

**ಪ್ರಶಸ್ತಿಗಳು :** 1. ಭಾರತ ಸರಕಾರ ನೀಡುವ ಪದ್ಮಶ್ರೀ

2. ಕ್ರೀಡೆಯ ಅತ್ಯುನ್ನತ ಪ್ರಶಸ್ತಿ ಮೇಜರ ಧ್ಯಾನಚಂದ ಖೇಲರತ್ನ ಪ್ರಶಸ್ತಿಗೆ ಭಾಜನರಾಗಿದ್ದಾರೆ

**ಪ್ರಸ್ತುತ :** ಮಣಿಪುರ ಸರಕಾರದಲ್ಲಿ ಪೋಲಿಸ್ ಇಲಾಖೆಯಲ್ಲಿ ಎಸಿಪಿ ಯಾಗಿ ಕಾರ್ಯನಿರ್ವಹಿಸುತಿದ್ದಾರೆ.

**ಕೇಂದ್ರ ಕಛೇರಿ :** "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291

**ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34

**ಇ–ಸ್ಟಾಂಪಿಂಗ್ ವಿಭಾಗ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055

**ಬೆಂಗಳೂರು ಪ್ರಾಂತೀಯ ಕಛೇರಿ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.

**ಮೈಸೂರು ಪ್ರಾಂತೀಯ ಕಛೇರಿ :** ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299

**ಬೆಳಗಾವಿ ಪ್ರಾಂತೀಯ ಕಛೇರಿ :** ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831–2401551.

**ಕಲಬುರಗಿ ಪ್ರಾಂತೀಯ ಕಛೇರಿ :** ಶಿವಶರಣ ನಿಲಯ, ದೇವತಾ ಆಸ್ಪತ್ರೆ ಎದುರುಗಡೆ, ಖೂಬಾ ಪ್ಲಾಟ್, ಕಲಬುರಗಿ – 585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010